ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ 17 । ಏಪ್ರಿಲ್ 20–26, 2020 । ಪುಟ 16 । ರೂ. 10


Web : www.janashakthi.co.in e-mail : js_weekly@yahoo.com



ಲೆನಿನ್ ಅವರನ್ನು ನೆನೆಯುತ್ತಾ...

ಕೋವಿಡ್ ಸಮರದಲ್ಲಿ ರಾಜ್ಯಗಳಿಗೆ ಅಡಚಣೆ





ಟ್ರಂಪ್ ಚಾಳಿಗೆ WHO ಬಲಿ



ಕೊರೋನಾವನ್ನು ಜಗ್ಗಿಸುತ್ತಿರುವ ಕೇರಳ

ಕೊರೊನಾ ಚಿಕಿತ್ಸೆ ರೋಗಕ್ಕಿಂತ ಆತಂಕಕಾರಿಯಾಗದಿರಲಿ



ವಿಸ್ತರಿತ ಲಾಕ್‌ಡೌನ್: ಬಡವರು ಮತ್ತು ಅಂಚಿಗೆ ತಳ್ಳಲ್ಪಟವರ ಸಂಕಟ ಮುಂದುವರೆಯುತ್ತದೆ

ಮೂರು ವಾರಗಳ ಲಾಕ್ ಡೌನನ್ನು ಅನುಸರಿಸಿದ ಜನಗಳು ಈ ದಿಗ್ಬಂಧನದ ಕೊನೆಯಲ್ಲಿ ಸರಕಾರದಿಂದ ಈ ಮೂರು ವಾರಗಳಲ್ಲಿ ಎದ್ದು ಬಂದ ಸಮಸ್ಯೆಗಳನ್ನು ಪರಿಹರಿಸಲು ಮೂರ್ತ ಕ್ರಮಗಳನ್ನು ನಿರೀಕ್ಷಿಸುತ್ತಿದ್ದರು ಮತ್ತು ದೊಡ್ಡ ಸಂಖ್ಯೆಯಲ್ಲಿರುವ ನಮ್ಮ ಬಡಜನಗಳಿಗೆ, ಅಂಚಿಗೆ ತಳ್ಳಲ್ಪಟ್ಟವರಿಗೆ, ವಲಸೆ ಕಾರ್ಮಿಕರಿಗೆ ಬಹು ಅಗತ್ಯವಾಗಿರುವ ಪರಿಹಾರಗಳನ್ನು ನಿರೀಕ್ಷಿಸುತ್ತಿದ್ದರು.

ಪ್ರಧಾನ ಮಂತ್ರಿಗಳು ತಮ್ಮ ಪ್ರಸಾರ ಭಾಷಣದಲ್ಲಿ ದೇಶಾದ್ಯಂತ ಲಾಕ್ ಡೌನನ್ನು ಮೇ 3ರ ವರೆಗೂ ವಿಸ್ತರಿಸಲಾಗುವುದು ಎಂದು ಪ್ರಕಟಿಸುತ್ತ ಈ ವಿಸ್ತರಿಸಿದ ಲಾಕ್ ಡೌನ್ ಅವಧಿಯಲ್ಲಿ ಜನಗಳು ಅನುಸರಿಸಬೇಕಾದ ಏಳು ಕೆಲಸಗಳನ್ನು ಪಟ್ಟಿ ಮಾಡಿದ್ದಾರೆ. ಆದರೆ ಸರಕಾರ ನಿರ್ದಿಷ್ಟವಾಗಿ ಏನು ಮಾಡುತ್ತದೆ ಎಂದೇನೂ ಹೇಳ ಹೋಗಿಲ್ಲ ಎಂದು ಅವರ ಪ್ರಸಾರ ಭಾಷಣಕ್ಕೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ನಮ್ಮ ಜನಗಳ ಒಂದು ಗಮನಾರ್ಹ ವಿಭಾಗದಲ್ಲಿ ಹಸಿವಿನ ಸಮಸ್ಯೆ ವ್ಯಾಪಕಗೊಳ್ಳುತ್ತಿದೆ, ಸಾಕಷ್ಟು ಆಸರೆ ಇಲ್ಲವಗದ ಎಎಮಬುದು ಕಳೆದ ಮೂರು ವಾರಗಳ ಅನುಭವ. ಸರಕಾರ ತಕ್ಷಣವೇ ಆದಾಯ ತೆರಿಗೆ ತೆರದ ಎಲ್ಲ ಕುಟುಂಬಗಳಿಗೆ 7500 ರೂ. ನಗದು ವರ್ಗಾವಣೆ ಮತ್ತು ಅಗತ್ಯವಿರುವ ಎಲ್ಲ ಜನಗಳಿಗೆ ಸಾರ್ವತ್ರಿಕವಾಗಿ ಆಹಾರಧಾನ್ಯಗಳನ್ನು ಉಚಿತವಾಗಿ ಹಂಚುವುದು ಅತ್ಯಗತ್ಯವಾಗಿದೆ. ಹಸಿವಿನಿಂದ ಸಾವುಗಳು ಸಂಭವಿಸದಂತೆ ಕೇಂದ್ರ ಸರಕಾರ ಖಾತ್ರಿ ಪಡಿಸಬೇಕಾಗಿದೆ.

ಇದುವರೆಗೆ ಪ್ರಕಟಿಸಿರುವ 1.7ಲಕ್ಷ ಕೋಟಿ ರೂ,ಗಳ ಹಣಕಾಸು ಕ್ರಮಗಳು ಅತ್ಯಲ್ಪ. ಅದರ ಮೊತ್ತ ನಮ್ಮ ದೇಶದ ಜಿಡಿಪಿಯ 1ಶೇ.ದಷ್ಟೂ ಆಗುವುದಿಲ್ಲ. ಜಗತ್ತಿನಲ್ಲಿ ಹಲವು ದೇಶಗಳು ಈ ಮಹಾಮಾರಿಯ ದುಷ್ಪರಿಣಾಮಗಳನ್ನು ಎದುರಿಸಲು ಇನ್ನೂ ಬಹಳ ಹೆಚ್ಚಿನ ಮೊತ್ತದ ಹಣಕಾಸು ಕ್ರಮಗಳನ್ನು ಪ್ರಕಟಿಸಿವೆ. ಭಾರತ ಇದನ್ನು ಜಿಡಿಪಿಯ 5ಶೇ.ದ ಮಟ್ಟಿಗಾದರೂ ಏರಿಸಬೇಕು. ಹಣಕಾಸು ಮಂತ್ರಿಗಳು ವಿವಿಧ ವಿಭಾಗಗಳಿಗೆಂದು ಪ್ರಕಟಿಸಿರುವ ನಗದು ವರ್ಗಾವಣೆ ಕೂಡ ಇನ್ನೂ ಅವರ ಕೈಸೇರಿಲ್ಲ.

ರಾಜ್ಯಗಳು ಈ ಕೊವಿಡ್ ಮಹಾಮಾರಿಯ ವಿರುದ್ಧ ಸಮರದಲ್ಲಿ ಮುಂಚೂಣಿಯಲ್ಲಿವೆ. ಅವುಗಳಿಗೆ ಹಣಕಾಸಿನ ನೆರವು ಬೇಕಾಗಿದೆ. ಪರಿಹಾರ ಕೇಂದ್ರಗಳಲ್ಲಿ ಸರಿಯಾದ ಸೌಕರ್ಯಗಳನ್ನು ಒದಗಿಸಲು ಮತ್ತು ಅಲ್ಲಿ ಇರುವ ಕೋಟ್ಯಂತರ ಜನಗಳಿಗೆ ಆಹಾರ ಒದಗಿಸಲು ಕೇಂದ್ರೀಯ ನಿಧಿಗಳನ್ನು ಉದಾರವಾಗಿ ರಾಜ್ಯಗಳ ನಡುವೆ ಹಂಚಬೇಕಾಗಿದೆ. ರಾಜ್ಯಗಳು ಸಾಲ ಎತ್ತಲು ಇರುವ ಮಿತಿಯನ್ನು ಏರಿಸಬೇಕಾಗಿದೆ.

ಯಾವ ಕಾರ್ಮಿಕರನ್ನೂ ಕೆಲಸದಿಂದ ತೆಗೆಯಬಾರದು ಎಂದು ಪ್ರಧಾನ ಮಂತ್ರಿಗಳು ಮನವಿ ಮಾಡಿಕೊಂಡಿದ್ದಾರೆ. ಆದರೆ ಕೇವಲ ಮನವಿಗಳಷ್ಟೇ ಸಾಲದು. ಏಕೆಂದರೆ, ಈಗಾಗಲೇ ವ್ಯಾಪಕ ಪ್ರಮಾಣದಲ್ಲಿ ಉದ್ಯೋಗ ನಷ್ಟಗಳಾಗಿವೆ ಎಂಬ ವರದಿಗಳು ಬಂದಿವೆ. ಮೂರು ತಿಂಗಳ ವರೆಗೆ ಉದ್ಯೋಗನಷ್ಟವಾಗದಂತೆ ಮತ್ತು ಸಂಬಳ ಕಡಿತವಾಗದಂತೆ ಖಾತ್ರಿಪಡಿಸಲು ಸೂಕ್ತ ಹಣಕಾಸು ನೆರವನ್ನೂ ಒದಗಿಸಬೇಕಾಗುತ್ತದೆ.

ಇದು ಕಟಾವಿನ ಸಮಯ. ಸರಕಾರ ಘೋಷಿತ ಸಿ2+50ಶೇ. ಸೂತ್ರದಂತೆ ಬೆಂಬಲ ಬೆಲೆಯಲ್ಲಿ ಬೆಳೆಗಳ ಕಡ್ಡಾಯ ಖರೀದಿ ನಡೆಯುವಂತೆ ಖಾತ್ರಿ ಪಡಿಸಬೇಕಾಗಿದೆ. ಮನರೇಗದ ಅಡಿಯಲ್ಲಿ ಕೆಲಸವಿಲ್ಲ ಎಂಬ ವರದಿ ಕಳವಳಕಾರಿ. ಈ ಯೋಜನೆಯ ಅಡಿಯಲ್ಲಿ ದಾಖಲಾತಿ ಪಡೆದಿರುವ ಎಲ್ಲರಿಗೂ ಕೆಲಸವಿರಲಿ, ಇಲ್ಲದಿರಲಿ ಅವರ ಕೂಲಿಗಳನ್ನು ಪಾವತಿ ಮಾಡಬೇಕು.

ಈ ಹಿಂದಿನ ಲಾಕ್ ಡೌನ್ ಅವಧಿಯನ್ನು ವ್ಯಾಪಕವಾಗಿ ತಪಾಸಣೆ ನಡೆಸಿ ಈ ಮಹಾಮಾರಿ ಹರಡುತ್ತಿರುವ ಸಮೂಹಗಳನ್ನು ಗುರುತಿಸಿ, ಅವನ್ನು ಪ್ರತ್ಯೇಕಿಸಲು, ಆಮೂಲಕ ಹರಡಿಕೆಯನ್ನು ತಡೆಗಟ್ಟಲು ಬಳಸಬೇಕಾಗಿತ್ತು. ಆದರೆ ತಪಾಸಣೆ ಎಂಬುದು ಅತ್ಯಂತ ಕೆಳಮಟ್ಟದಲ್ಲೇ ಇದೆ, ಜಗತ್ತಿನಲ್ಲಿ ಅತ್ಯಂತ ಕಡಿಮೆ ಮಟ್ಟದ ತಪಾಸಣೆ ನಡೆದಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ.

ಡಾಕ್ಟರುಗಳು ಮತ್ತು ಆರೋಗ್ಯ ಕಾರ್ಯಕರ್ತರು ವೈಯಕ್ತಿಕ ಸುರಕ್ಷಾ ಪರಿಕರ(ಪಿಪಿಇ)ಗಳ ತೀವ್ರ ಅಭಾವದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಮಹಾಮಾರಿಯ ಸೋಂಕಿಗೆ ಒಳಗಾಗುತ್ತಿದ್ದಾರೆ ಎಂಬುದು ಗಂಭೀರ ಆತಂಕದ ಒಂದು ಸಂಗತಿ. ಈ ಮೂರು ವಾರಗಳಲ್ಲಿ ಇವುಗಳ ಪೂರೈಕೆಯನ್ನು ಗಮನಾರ್ಹವಾಗಿ ಹೆಚ್ಚಿಸಿಲ್ಲ. ತಪಾಸಣೆ ಮತ್ತು ಪಿಪಿಇಗಳ ಪೂರೈಕೆಯನ್ನು ಸಮರೋಪಾದಿಯಲ್ಲಿ ಕೈಗೊಳ್ಳ ಬೇಕಾಗಿದೆ.

ಪ್ರಧಾನ ಮಂತ್ರಿಗಳು ಸಾಮಾಜಿಕ ಮತ್ತು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಮಾಡುತ್ತಿರುವ ಪ್ರಯತ್ನಗಳನ್ನು ಖಂಡಿಸಿಲ್ಲ ಎಂಬುದು ಅತ್ಯಂತ ದುರದೃಷ್ಟಕರ. ಇಂತಹ ವಿಚ್ಛಿದ್ರಕಾರಿ ಪ್ರಯತ್ನಗಳು ನಡೆಯದಂತೆ ಸರಕಾರ ಖಾತ್ರಿಪಡಿಸಬೇಕಾಗಿದೆ. ನಮ್ಮ ಜನಗಳ ನಡುವೆ ಸಂಪೂರ್ಣ ಐಕ್ಯತೆಯೊಂದಿಗೆ ಮಾತ್ರವೇ ಕೊವಿಡ್–19ರ ವಿರುದ್ಧದ ಈ ಸಮರವನ್ನು ನಾವು ಗೆಲ್ಲಲು ಸಾಧ್ಯ

ಎಪ್ರಿಲ್ 20ರಂದು ಸರಕಾರ ಸನ್ನಿವೇಶವನ್ನು ಪರಾಮರ್ಶಿಸುತ್ತದೆ, ಆನಂತರ ಲಾಕ್ ಡೌನನ್ನು ಸಡಿಲಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ವಲಸೆ ಕಾರ್ಮಿಕರನ್ನು ಮತ್ತೆ ಅವರ ಮನೆಗಳಿಗೆ ತಲುಪಿಸಲು ವ್ಯವಸ್ಥೆಗಳನ್ನು ಮಾಡಬೇಕಾಗಿದೆ.

ಈ ಎಲ್ಲ ಪ್ರಶ್ನೆಗಳನ್ನು ತಕ್ಷಣವೇ ಕೈಗೆತ್ತಿಕೊಳ್ಳಬೇಕು ಮತ್ತು ಅಗತ್ಯ ಮಾರ್ಗನಿರ್ದೇಶನಗಳನ್ನು ನೀಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಕೇಂದ್ರ ಸರಕಾರಕ್ಕೆ ಕರೆ ನೀಡಿದೆ.

ಎಪ್ರಿಲ್ 14: ಲಾಕ್‌ಡೌನ್ ನಡುವೆಯೇ ಅಂಬೇಡ್ಕರ್ ಜಯಂತಿ ಆಚರಣೆ

"ಸಾಮಾಜಿಕ ಸೌಹಾರ್ದತೆಯೊಂದಿಗೆ ದೈಹಿಕ ಅಂತರ"ವೇ ಹೊರತು "ಸಾಮಾಜಿಕ ಅಂತರ" ಅಲ್ಲ.

ಎಡಪಕ್ಷಗಳು ಎಪ್ರಿಲ್ 14 ರಂದು ಸಂಜೆ 5 ಗಂಟೆಗೆ ಲಾಕ್ ಡೌನ್ ನಿರ್ಬಂಧಗಳ ಮಿತಿಗಳೊಳಗೆ ಈ ಕೆಳಗಿನ ವಿಷಯಗಳ ಮೇಲೆ ಪ್ರತಿಜ್ಞೆಯನ್ನು ಕೈಗೊಂಡು ಅಂಬೇಡ್ಕರ್ ಜಯಂತಿಯನ್ನು ಆಚರಿಸಬೇಕು ಎಂದು ಕರೆ ನೀಡಿದವು.

1.ನಮ್ಮ ಸಂವಿಧಾನವನ್ನು ಜೋಪಾನವಾಗಿ ಕಾಯ್ದುಕೊಳ್ಳುವುದು;

2.ಲಾಕ್‌ಡೌನಿನ ಅಡಿಯಲ್ಲಿ ಸಂಕಟಪಡುತ್ತಿರುವ ಬಡವರು ಮತ್ತು ನಿರ್ಗತಿಕರಿಗೆ ತಕ್ಷಣವೇ ನಗದು ವರ್ಗಾವಣೆ ಮತ್ತು ಆಹಾರ ವಿತರಣೆ ಮಾಡಬೇಕೆಂದು ಆಗ್ರಹಿಸಿ;

3.ಜಾತಿ, ಮತ, ಲಿಂಗ ಅಥವ ವಿಕಲತೆಯ ಭೇದಬಾವಗಳಿಲ್ಲದೆ, ನಮ್ಮ ಜನಗಳ ನಡುವಿನ ಸಾಮಾಜಿಕ ಐಕ್ಯತೆಯ ಬಂಧಗಳನ್ನು ಗಟ್ಟಿಗೊಳಿಸುವುದು; ಲಾಕ್ ಡೌನ್ ನಿರ್ಬಂಧಗಳ ಸಮಯದಲ್ಲಿ ಮಹಾಮಾರಿಯ ವಿರುದ್ಧ ಹೋರಾಟದ ಹೆಸರಿನಲ್ಲಿ ಜೀವ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಪ್ರಹಾರಗಳು ಅಥವ ಅಸ್ಪೃಶ್ಯತೆಯ , ಪಕ್ಷಪಾತದ ಅಭಿವ್ಯಕ್ತಿಗಳು ಸಾಧ್ಯವಾಗಬಾರದು.

ನಮ್ಮ ಕರೆ "ಸಾಮಾಜಿಕ ಸೌಹಾರ್ದತೆಯೊಂದಿಗೆ ದೈಹಿಕ ಅಂತರ"ವೇ ಹೊರತು "ಸಾಮಾಜಿಕ ಅಂತರ" ಅಲ್ಲ.

4. ನಾವು ಈ ಪ್ರತಿಜ್ಞೆಯನ್ನು ಡಾ.ಅಂಬೇಡ್ಕರ್ ಪ್ರೇರೇಪಿಸಿರುವಂತೆ, ಗೊಡ್ಡು ಸಂಪ್ರದಾಯಶರಣತೆ, ಮೂಢನಂಬಿಕೆಗಳು ಮತ್ತು ಪೂರ್ವಾಗ್ರಹಗಳ ವಿರುದ್ಧ ಜನಗಳಿಗೆ ಶಿಕ್ಷಣ ನೀಡುವ ಭಾವನೆಯಿಂದ ಕೈಗೊಳ್ಳುತ್ತೇವೆ. ಲಾಕ್ ಡೌನ್ ಅವಧಿಯಲ್ಲಿ ಬದುಕುಳಿಯಲು ಮತ್ತು ಜೀವನಾಧಾರಕ್ಕೆ ನೆರವು ಮತ್ತು ಬೆಂಬಲದ ಅಗತ್ಯವಿರುವವರಿಗೆ ಅವನ್ನು ನೀಡುವುದಕ್ಕಾಗಿ ನಮ್ಮ ಪ್ರತಿಜ್ಞೆ

ಸಾರ್ವಜನಿಕವಾಗಿ ಸಭೆ ಸೇರುವುದು ಅಥವ ಪ್ರತಿಮೆಗಳಿಗೆ ಹೂವಾಲೆ ಹಾಕುವುದು ಸಾಧ್ಯವಿಲ್ಲವಾದ್ದರಿಂದ, ಜನಗಳು ಈ ಪ್ರತಿಜ್ಞೆಯನ್ನು ಎಪ್ರಿಲ್ 14 ರಂದು ಸಂಜೆ 5 ಗಂಟೆಗೆ ನಿರಪಾಯದ ಮತ್ತು ಅನುಕೂಲಕರ ಸ್ಥಳಗಳಲ್ಲಿ ಕೈಗೊಳ್ಳಬೇಕು ಎಂದು ಸೀತಾರಾಂ ಯೆಚುರಿ, ಡಿ. ರಾಜ, ದೀಪಂಕರ್ ಭಟ್ಟಾಚಾರ್ಯ, ದೇಬಬ್ರತ ಬಿಸ್ವಾಸ್ ಮತ್ತು ಮನೋಜ್ ಭಟ್ಟಾಚಾರ್ಯ, ಅನುಕ್ರಮವಾಗಿ, ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ–ಎಲ್)–ಲಿಬರೇಷನ್, ಎಐಎಫ್‌ಬಿ ಮತ್ತು ಆರ್ ಎಸ್ ಪಿಯ ಪ್ರಧಾನ ಕಾರ್ಯದರ್ಶಿಗಳು ಜಂಟಿ ಹೇಳಿಕೆಯಲ್ಲಿ ಕರೆ ನೀಡಿದರು.


ಅಂಬೇಡ್ಕರ್ ಜಯಂತಿಯಂದು ಎಡಪಕ್ಷಗಳ ಪ್ರತಿಜ್ಞೆ ಸ್ವೀಕಾರ

ಆನಂದ ತೆಲ್ತುಂಬ್ಡೆ ಮತ್ತು ಗೌತಮ್ ನವ್ಲಖಾ ಬಂಧನ –ಸಿಪಿಐ(ಎಂ) ಖಂಡನೆ

ಆನಂದ ತೆಲ್ತುಂಬ್ಡೆ ಮತ್ತು ಗೌತಮ್ ನವ್ಲಖಾ ಅವರನ್ನು ಭೀಮ–ಕೋರೆಗಾಂವ್ ಪ್ರಶ್ನೆಯಲ್ಲಿ ಸಂಪೂರ್ಣವಾಗಿ ಕೃತಕವಾಗಿ ಸೃಷ್ಟಿಸಿದ ಆರೋಪಗಳ ಮೇಲೆ ಬಂಧಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಕೊವಿಡ್–19 ಮಹಾಮಾರಿಯ ಹಿನ್ನೆಲೆಯಲ್ಲೂ ಮಾನ್ಯ ಸುಪ್ರಿಂ ಕೋರ್ಟ್ ಅವರ ಬಂಧನಗಳನ್ನು ಮುಂದೂಡದಿರುವುದು ಕಳವಳಕಾರೀ ಸಂಗತಿ ಎಂದು ಅದು ಹೇಳಿದೆ.

ಆನಂದ ತೇಲ್ತುಂಬ್ಡೆ ಜಾತಿ ಮತ್ತು ವರ್ಗಗಳ ಪ್ರಶ್ನೆಗಳ ಕುರಿತ ಒಬ್ಬ ರಾಜಕೀಯ ವಿದ್ವಾಂಸರು, ಮತ್ತು ಬಾಬಾಸಾಹೇಬರ ಕುಟುಂಬದ ಒಬ್ಬ ಸದಸ್ಯರು, ಹಾಗೂ ಗೌತಮ್ ನವ್ಲಖಾ ಒಬ್ಬ ಮಾನವ ಹಕ್ಕುಗಳ ಮತ್ತು ರಾಜಕೀಯ ಕಾರ್ಯಕರ್ತರು. ಇವರಿಬ್ಬರನ್ನು ಅಂಬೇಡ್ಕರ್ ಜಯಂತಿಯ ದಿನದಂದೇ ಬಂಧಿಸಿರುವುದು ನಮ್ಮ ದೇಶದಲ್ಲಿನ ಈಗಿನ ಪರಿಸ್ಥಿತಿಯ ಮೇಲೆ ಒಂದು ಅರ್ಥಪೂರ್ಣ ಟಿಪ್ಪಣಿ.

ಸುಪ್ರಿಂ ಕೋರ್ಟ್ ಈ ತೀರ್ಪನ್ನು ಮರು ಪರಿಶೀಲಿಸಬೇಕು ಎಂದು ಮನವಿ ಮಾಡಿಕೊಂಡಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಒಂದು ನ್ಯಾಯಪೂರ್ಣ ವಿಚಾರಣೆ ನಡೆಯಬೇಕು ಎಂದು ಒತ್ತಾಯಿಸಿದೆ.

ಮಾಲಕರಿಗೆ ಪ್ರಧಾನಿಗಳ ಮನವಿ ಸಾರ್ವಜನಿಕರ ಎದುರಿನ ಪ್ರವಚನವಷ್ಟೇ–ತಪನ್ ಸೇನ್

ಮಾರ್ಚ್ 24 ರಂದು ಪ್ರಧಾನ ಮಂತ್ರಿಗಳು ಲಾಕ್‌ಡೌನ್ ಪ್ರಕಟಿಸುವಾಗ ಈ ಅವಧಿಯಲ್ಲಿ ಮಾಲಕರು ಯಾರನ್ನೂ ಕೆಲಸದಿಂದ ತೆಗೆದು ಹಾಕಬಾರದು, ಸಂಬಳ ಕಡಿತ ಮಾಡಬಾರದು, ಅಥವ ನಿರ್ವಾಹವಿಲ್ಲದೆ ಕೆಲಸಕ್ಕೆ ಗೈರು ಹಾಜರಾದರೆ ಅದಕ್ಕೆ ಶಿಕ್ಷಾ ಕ್ರಮ ಕೈಗೊಳ್ಳಬಾರದು ಎಂದರು. ಕೇಂದ್ರ ಗೃಹ ಇಲಾಖೆ ಮತ್ತು ಕಾರ್ಮಿಕ ಇಲಾಖೆ ಈ ಕುರಿತಂತೆ ನಿರ್ದೇಶನಾವಳಿಗಳನ್ನು, ಸಲಹಾಪತ್ರಗಳನ್ನು ಕಳಿಸಿದವು. ಆದರೆ ಮಾಲಕರು ಪ್ರಧಾನಿಗಳು, ಮತ್ತು ರಾಜ್ಯಗಳ ಮುಖ್ಯಮಂತ್ರಿಗಳ ಮನವಿಗಳೂ ಸೇರಿದಂತೆ ಯಾವುದನ್ನೂ ತುಸುವೂ ಲೆಕ್ಕಿಸದೆ ಬಹಳಷ್ಟು ಕಡೆಗಳಲ್ಲಿ ಮಾರ್ಚ್ ತಿಂಗಳ ಸಂಬಳವನ್ನು ಕೊಟ್ಟಿಲ್ಲ, ಕೊಟ್ಟರೂ ಹಲವೆಡೆ ಕಡಿತಗಳನ್ನು ಮಾಡಿದ್ದಾರೆ. ಸುಮಾರು 5ಲಕ್ಷ ಟೀ ತೋಟ ಕಾರ್ಮಿಕರು, 2ಲಕ್ಷ ಸಣಬು ಕಾರ್ಮಿಕರು, ಮುಖ್ಯವಾಗಿ ಎಲ್ಲ ಸಂಘಟಿತ ವಲಯದ ಉದ್ದಿಮೆಗಳಲ್ಲೂ ಗುತ್ತಿಗೆ, ತಾತ್ಕಾಲಿಕ ಕೆಲಸಗಾರರು ಇದನ್ನು ಅನುಭವಿಸಬೇಕಾಗಿ ಬಂದಿದೆ. ಹಲವೆಡೆ ಕೆಲಸದಿಂದಲೂ ತೆಗೆದು ಹಾಕಿದ್ದಾರೆ. ಕೆಲವೆಡೆಗಳಲ್ಲಿ ನಿಯಮಿತ ಕಾರ್ಮಿಕರನ್ನೂ ತೆಗೆದು ಹಾಕಿದ್ದಾರೆ. ಸಾರ್ವಜನಿಕ ವಲಯದಲ್ಲೂ ಹಲವೆಡೆಗಳಲ್ಲಿ ಗುತ್ತಿಗೆ ಮತ್ತು ಕ್ಯಾಶುವಲ್ ಕಾರ್ಮಿಕರನ್ನು ತೆಗೆದು ಹಾಕಲಾಗಿದೆ. ಈಗ ಲಾಕ್‌ಡೌನ್ ಮತ್ತೆ ಮೂರು ವಾರ, ಯಾವುದೇ ಪರಿಹಾರದ ಪ್ರಕಟಣೆಯಿಲ್ಲದೇ ಮುಂದುವರಿದಿರುವುದರಿಂದ ಎಪ್ರಿಲ್ ಸಂಬಳವೂ ಸಿಗುವ ಸಂಭವವಿಲ್ಲ, ಜತೆಗೆ ಉದ್ಯೋಗ, ಆದಾಯ, ಬದುಕು ಕಳಕೊಳ್ಳುವವರ ಸಂಖ್ಯೆ ಮತ್ತಷ್ಟು

ಪುಟ 14 ನೋಡಿ

ಮೊದಲ ಹೆಚ್‌ಸಿಕ್ಯು ಔಷಧಿಗಳ ರವಾನೆ ಅಮೆರಿಕ ತಲುಪಿದೆ!

ತಮಿಳುನಾಡಿಗೆ ಬರಬೇಕಾಗಿದ್ದ ತ್ವರಿತ ತಪಾಸಣಾ ಕಿಟ್‌ಗಳೂ ಅಮೆರಿಕಾಕ್ಕೆ ತಿರುಗಿವೆ!

ಹೈಡ್ರೋಕ್ಸಿಕ್ಲೋರೊಕ್ವಿನ್(ಹೆಚ್‌ಸಿಕ್ಯು) ಔಷಧಿಯ ರಫ್ತಿನ ಮೇಲಿನ ನಿರ್ಬಂಧವನ್ನು ಸಡಿಲಿಸಿದ್ದು ಅಮೆರಿಕನ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರವರ ಬ್ಲಾಕ್ ಮೇಲ್‌ಗೆ ನಮ್ರವಾಗಿ ತಲೆಬಾಗಿದ್ದಲ್ಲ, ಅದು ಮಾನವೀಯ ಪರಿಗಣೆಯ ಮೇಲೆ ಕೈಗೊಂಡ ಕ್ರಮ ಎಂದು ಸರಕಾರಕ್ಕೆ ಆಪ್ತರಾದ ಕೆಲವರು ಸಮರ್ಥಿಸಿ ಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇಂತಹ ಉದಾತ್ತ ವಿಚಾರಗಳಿಗೆ ಅಮೆರಿಕಾದ ಆಳುವ ಮಂದಿಯಿಂದ ಯಾವುದೇ ಸ್ಪಂದನವನ್ನು ನಿರೀಕ್ಷಿಸುವಂತಿಲ್ಲ ಎಂಬುದಕ್ಕೆ ಇಲ್ಲಿದೆ ಹೊಚ್ಚ ಹೊಸ ಸಾಕ್ಷಿ.

ಇದಕ್ಕೆ ಅಮೆರಿಕಾದ ಅಧ್ಯಕ್ಷ ಟ್ರಂಪ್ ಕೊರಿಯಾ ಯುದ್ಧದ ಸಮಯದ ರಕ್ಷಣಾ ಉತ್ಪಾದನಾ ಕಾಯ್ದೆಯನ್ನು, ಅದರ ವ್ಯಾಪ್ತಿಯನ್ನು ಮೀರಿ ಬಳಸಿದ್ದಾರೆ. "ನಮ್ಮ ಆಂತರಿಕ ಬಳಕೆಗೆ ಇವು ನಮಗೆ ಬೇಕು. ಅದನ್ನು ನಾವು ಪಡೆಯಲೇ ಬೇಕು" ಎನ್ನುತ್ತ ಅಮೆರಿಕನ್ ಕಂಪನಿಗಳು ಆಂತರಿಕ ಬೇಡಿಕೆಗಳನ್ನು ಪೂರೈಸಬೇಕು ಎಂದು ಆದೇಶಿಸಿದ್ದಾರೆ. ಭಾರತ ಸರಕಾರ ಇದೇ ಕಾರಣ ಕೊಟ್ಟು ಎಪ್ರಿಲ್ 4ರಿಂದ ಮಹಾಮಾರಿ ನಿರ್ವಹಣೆಗೆ ಸಂಬಂಧಪಟ್ಟ ಎಲ್ಲ

ಪುಟ 14 ನೋಡಿ

ಸಂಪಾದಕೀಯ

ಚಿಕಿತ್ಸೆ ರೋಗಕ್ಕಿಂತ ಆತಂಕಕಾರಿಯಾಗದಿರಲಿ

ಗಂಟೆ ಬಾರಿಸಿದ್ದಾಯಿತು. ಕೊರೊನಾ ಓಡಿಹೋಗಲಿಲ್ಲ. ದೀಪ ಹಚ್ಚಲಾಯಿತು. ಆದರೆ ಕೊರೊನಾ ಮಾತ್ರ ಸುಟ್ಟು ಭಸ್ಮವಾಗಲಿಲ್ಲ. ಈಗ ಸಪ್ತಪದಿ ಪ್ರಯೋಗಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಕರೆ ನೀಡಿದ್ದಾರೆ! ವಿಶ್ವದ ವಿಜ್ಞಾನಿಗಳು ಈ ಭಯಂಕರ ವೈರಾಣುವನ್ನು ಸಂಹಾರ ಮಾಡಲು ಹಗಲು ರಾತ್ರಿ ಎನ್ನದೆ ಶ್ರಮಿಸುತ್ತಿದ್ದರೆ, ನಮ್ಮ ಪ್ರಧಾನಿಯವರು ನಮ್ಮನ್ನು ಮೌಢ್ಯದ ಗಾಢಾಂಧಕಾರಕ್ಕೆ ತಳ್ಳುತ್ತಿದ್ದಾರೆ. ನಮ್ಮ ದೇಶವಾಸಿಗಳಲ್ಲಿ 100 ಕ್ಕೆ 99 ಜನ ತಮ್ಮ ನಿತ್ಯದ ಬದುಕಿನಲ್ಲಿ ಮೌಢ್ಯಾಚರಣೆಗಳಲ್ಲಿ ಮುಳುಗಿರುತ್ತಾರೆ. ಈಗಾಗಲೇ ಮಾಧ್ಯಮಗಳಲ್ಲಿ ಮೋದಿಯವರನ್ನು ಅವತಾರ ಪುರುಷನಂತೆ ಬಿಂಬಿಸುತ್ತಿರುವಾಗ ಅವರು ಬಳಸುತ್ತಿರುವ ಪದಪುಂಜಗಳು, ನೀಡುತ್ತಿರುವ ಈ ತರಹದ ಆದೇಶಗಳು, ಆಯ್ಕೆ ಮಾಡಿ ಜನತೆಯ ಮುಂದಿಡುವ ಸಂಕೇತಗಳು ಮುಗ್ಧ ಜನರ ಮೇಲೆ ಎಂತಹ ಪರಿಣಾಮ ಬೀರಿದೆ ಎಂಬುದನ್ನು ಜನ ಕೊರೊನಾ ದೇವಿಯನ್ನು ಸೃಷ್ಟಿಮಾಡಿ, ಪೂಜಿಸಿ, ಬೇಡಿಕೊಳ್ಳುವುದರಲ್ಲಿ ಕಾಣಬಹುದು. ಲಾಕ್‌ಡೌನ್ ನಿರೀಕ್ಷಿಸಿದಷ್ಟು ಯಶಸ್ವಿಯಾಗದಿರುವುದಕ್ಕೆ, ಸಾಮಾಜಿಕ ಅಂತರವನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಳ್ಳಲು ಆಗದಿರುವುದಕ್ಕೆ ಬೆಳೆಸಲಾಗುತ್ತಿರುವ ಮೌಢ್ಯ ಒಂದು ಕಾರಣವಾಗಿದೆ. ಇದು ಮೋದಿಯವರ ಒಂದು ಬಗೆಯ ವಶೀಕರಣ ಪ್ರಯೋಗ ಆಗಿರುವಂತೆ ಕಾಣುತ್ತದೆ!.

ರಾಜ್ಯದಲ್ಲಿ ಎಪ್ರಿಲ್ 16 ರಂದು ಗುರುವಾರ ಒಂದೇ ದಿನ 36 ಹೊಸ ಪ್ರಕರಣಗಳು ವರದಿಯಾಗಿದ್ದು ವ್ಯಾಪಕ ಆತಂಕಕ್ಕೆ ಕಾರಣವಾಗಿದೆ. ಇದರಿಂದ ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 315ಕ್ಕೆ ಏರಿದೆ. ಹೊಸದಾಗಿ ಬೆಳಗಾವಿಯಲ್ಲಿ 17, ವಿಜಯಪುರದಲ್ಲಿ 07, ಬೆಂಗಳೂರಿನಲ್ಲಿ 05, ಮೈಸೂರಿನಲ್ಲಿ 03, ಕಲ್ಬುರ್ಗಿಯಲ್ಲಿ 03 ಹಾಗೂ ಗದಗದಲ್ಲಿ 01 ಪ್ರಕರಣ ವರದಿಯಾಗಿದೆ. ರಾಜ್ಯದಲ್ಲಿ ಮೃತಪಟ್ಟವರ ಸಂಖ್ಯೆ 13 ಕ್ಕೆ ಏರಿದೆ. ಈ ಆತಂಕಕಾರಿ ಬೆಳವಣಿಗೆಯಿಂದಾಗಿ ಇಡೀ ಲಾಕ್‌ಡೌನ್ ಪ್ರಯೋಗವನ್ನೇ ಪ್ರಶ್ನಿಸುವಂತಾಗಿದೆ. ನಿಜ, ಇದೇನು ರೋಗಕ್ಕೆ ತಕ್ಕ ಮದ್ದನ್ನು ಕೊಟ್ಟು ರೋಗಿಯನ್ನು ಗುಣಪಡಿಸುವ ಕ್ರಮವೇನು ಅಲ್ಲ. ಸೋಂಕಿತರನ್ನು ಹಾಗೂ ಇತರ ಆರೋಗ್ಯವಂತರನ್ನು ಪರಸ್ಪರ ದೂರವಿಟ್ಟು ವೈರಾಣುಗಳನ್ನು ಸಾಯಿಸುವುದು ಇದರ ಉದ್ದೇಶ. ಈ ಭಯಂಕರ ರೋಗಕ್ಕೆ ಸರಿಯಾದ ಔಷಧ ಹಾಗೂ ಚಿಕಿತ್ಸೆಯನ್ನು ಕಂಡುಹಿಡಿದ ನಂತರ ಇಂತಹ ಲಾಕ್‌ಡೌನ್‌ಗಳ ಅಗತ್ಯ ಇರಲಾರದು. ಅಂತಹ ಒಂದು ಚಿಕಿತ್ಸೆ ಇನ್ನೂ ಕೈವಶವಾಗದೆ ಇರುವುದರಿಂದ ನಾವು ಲಾಕ್‌ಡೌನ್‌ದಂತಹ ತಕ್ಷಣದ ಪರಿಹಾರವನ್ನು ಅವಲಂಬಿಸಬೇಕಾಗಿದೆ. ಇದು ಯಾರೋ ಒಬ್ಬರಿಗೆ ಹೊಳೆದ ವಿಷಯವಲ್ಲ. ಇದು ಎಲ್ಲಾ ದೇಶಗಳಲ್ಲಿ ಅನುಸರಿಸಲಾಗುತ್ತಿರುವ ತಕ್ಷಣದ ಕ್ರಮ.

ರಾಜ್ಯದಲ್ಲಿ ಲಾಕ್‌ಡೌನ್ ಮುಂದುವರೆಸಲು ಮತ್ತು ಮೇ 3 ರ ವರೆಗೆ ಅದನ್ನು ಇನ್ನಷ್ಟು ಕಠಿಣಗೊಳಿಸಲು ತೀರ್ಮಾನಿಸಲಾಗಿದ್ದರೂ ಅದನ್ನು ಯಶಸ್ವಿಯಾಗಿ ಜಾರಿಗೊಳಿಸಲು ಜನರ ಸಹಕಾರ ಸಿಗುತ್ತಿಲ್ಲ ಎಂದು ದೂರಲಾಗುತ್ತಿದೆ. ಇದು ಎಷ್ಟು ಸರಿ? ನಮ್ಮ ಬಹಳಷ್ಟು ಮಾಧ್ಯಮಗಳು ಜನಸಾಮಾನ್ಯರನ್ನು ದೂಷಿಸುತ್ತವೆ. ಮಂತ್ರಿಗಳು, ಶಾಸಕರು, ಅಧಿಕಾರಿಗಳು ತಮಗೇನು ಜವಾಬ್ದಾರಿ ಇಲ್ಲದವರಂತೆ ಜನರನ್ನು ಬೈಯುತ್ತಿರುತ್ತಾರೆ! ಜನರನ್ನು ದೂಷಿಸುವುದು ಏಕೆ?

ಲಾಕ್‌ಡೌನ್ ಜಾರಿಯ ವಿಷಯದಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಅದನ್ನು ಏಕಾಏಕಿಯಾಗಿ ಜನರ ಮೇಲೆ ಹೇರಲಾಗಿದೆ. ಲಾಕ್‌ಡೌನ್‌ದಂತಹ ಸ್ವಯಂ ನಿರ್ಬಂಧವನ್ನು ಸರಿಯಾಗಿ ಯೋಜಿಸದೆ, ಪೂರ್ವ ಸಿದ್ಧತೆ ಮಾಡಿಕೊಳ್ಳದೆ, ಜನರು ಅಂತಹ ಕಠಿಣ ಕ್ರಮಕ್ಕೆ ಸಜ್ಜಾಗಲು ಸಾಕಷ್ಟು ಸಮಯವನ್ನೂ ನೀಡಲಾಗಿಲ್ಲ. ಹೀಗಾಗಿ ಅದನ್ನು ಜನತೆ ಸ್ವಾಗತಿಸುವ ಬದಲು ಶಿಕ್ಷೆಯಾಗಿ ಅನುಭವಿಸುವಂತಾಗಿದೆ.

ಈ ಅವಸರದ ಕ್ರಮದಿಂದಾಗಿ ಜನರಿಗೆ ಎಷ್ಟೊಂದು ಹಿಂಸೆಯಾಗಿದೆ? ಯಾವುದೋ ಒಂದು ಕೆಲಸದ ನಿಮಿತ್ತ ಪರ ಊರಿಗೆ, ಪರ ರಾಜ್ಯಕ್ಕೆ ಹೋದವರಿಗೆ ಇದುವರೆಗೂ ತಮ್ಮ ತಮ್ಮ ಊರುಗಳಿಗೆ, ಮನೆಗಳಿಗೆ ಹಿಂತಿರುಗಲು ಸಾಧ್ಯವಾಗಿಲ್ಲ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೊಟ್ಟೆಪಾಡಿಗಾಗಿ ವಲಸೆ ಬಂದವರ ಗೋಳು ಹೇಳತೀರದು. ಅವರು ತಮ್ಮ ಊರುಗಳಿಗೆ ಹಿಂತಿರುಗುವಂತಿಲ್ಲ. ಇದ್ದಲ್ಲೇ ನೆಮ್ಮದಿಯಿಂದ ಇರುವಂತಿಲ್ಲ. ನಮ್ಮ ದೇಶದ ಒಟ್ಟು ಶ್ರಮಶಕ್ತಿಯ 94% ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಾ ದೇಶದ ಆದಾಯಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಿದ್ದರು. ಇವರ ಪಾಲಿಗೆ ಕೊರೊನಾಕ್ಕಿಂತ ಈ ಲಾಕ್‌ಡೌನ್ ಹೆಚ್ಚು ಆತಂಕಕಾರಿಯಾಗಿ ಪರಿಣಮಿಸಿದೆ. ಇವರೆಲ್ಲರೂ ತಮ್ಮ ತಮ್ಮ ಮನೆಗಳಲ್ಲೇ ಇರುವುದನ್ನು ಸರ್ಕಾರ ಬಯಸುವುದಾದರೆ ಅವರಿಗೆ ಜೀವನಕ್ಕೆ ಅವಶ್ಯಕವಾದ ಎಲ್ಲ ವಸ್ತುಗಳನ್ನು ಮನೆ ಮನೆಗಳಿಗೆ ತಲುಪಿಸುವುದು ಸರ್ಕಾರಗಳಿಗೆ ಅಸಾಧ್ಯವೆ? ತಿಂಗಳಿಗೆ ಬೇಕಾಗುವಷ್ಟು ಅಗತ್ಯ ವಸ್ತುಗಳನ್ನು ತಂದು ಮನೆಯಲ್ಲಿ ದಾಸ್ತಾನು ಮಾಡುವ ಜನ ಅವರಲ್ಲ. ಅವರು ಸಂಜೆವರೆಗೆ ದುಡಿದು ಕೈಗೆ ಸಿಕ್ಕ ಕೂಲಿ ಹಣದಿಂದ ಅಂದಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಅವರ ನಿತ್ಯದ ಅನುಭವ. ಸರ್ಕಾರ ಕೊಟ್ಟ ಭರವಸೆ ಪ್ರಕಾರ ಅಗತ್ಯ ವಸ್ತುಗಳನ್ನು ಅವರ ಮನೆಗಳಿಗೆ ತಲುಪಿಸದಿದ್ದಾಗ ಅವರು ಅನಿವಾರ್ಯವಾಗಿ ಅಂಗಡಿಗಳಿಗೆ ಬಂದೇ ಬರುತ್ತಾರೆ. ಸಣ್ಣ ಬಂಡವಾಳದ ಬಡ ವ್ಯಾಪಾರಸ್ಥ ತನ್ನ ಅಂಗಡಿ ಬಾಗಿಲನ್ನು ಮುಚ್ಚಿದಂತೆ ಇಟ್ಟು ಈ ಬಡ ಗ್ರಾಹಕರಿಗೆ ನೆರವಾಗುತ್ತಾನೆ. ಅಂತವವರನ್ನು ಹೊಡೆದು ಬಡಿದು, ಅವರ ಮೇಲೆ ಪ್ರಕರಣ ದಾಖಲು ಮಾಡಿ ಅವರಿಂದ ದಂಡ ವಸೂಲಿ ಮಾಡುತ್ತಾರೆ. ಇಂತಹ ಕ್ರಮಗಳಿಂದ ಸರ್ಕಾರದ ಮೇಲೆ ಜನರಿಗೆ ವಿಶ್ವಾಸ ಮೂಡುವುದೆ?

ಕೊರೊನಾ ವೈರಸ್ ಸೋಂಕಿತರನ್ನು ಅಥವ ಶಂಕಿತರನ್ನು ಆಸ್ಪತ್ರೆಗಳಲ್ಲಿ ಅಥವಾ ಕ್ವಾರಂಟೈನ್ ಕೇಂದ್ರಗಳಲ್ಲಿ ಇಟ್ಟಿರುತ್ತಾರೆ. ಅವರನ್ನು ಅಲ್ಲಿ ಯಾರು ನೋಡಿಕೊಳ್ಳುತ್ತಾರೆ, ಹೇಗೆ ನೋಡಿಕೊಳ್ಳುತ್ತಾರೆ. ಅವರು ಮರಣ ದಂಡನೆಗೆ ಒಳಗಾದ ಕೈದಿಗಳಂತೆ ಮಾನಸಿಕ ಕ್ಷೋಬೆಗೆ ಒಳಗಾಗಿ ದಿನ ಕಳೆಯುತ್ತಾರೆ. ಅನೇಕ ವೈದ್ಯರು, ಸಿಬ್ಬಂದಿಗಳು ತಮ್ಮ ಜೀವದ ಹಂಗು ತೊರೆದು ರೋಗಿಗಳ ಸೇವೆ ಮಾಡುತ್ತಾರೆ. ಆದರೆ ಏಕಾಂತದಲ್ಲಿ ಕೊರಗುವ ರೋಗಿಗಳೇ ಹೆಚ್ಚು. ಅವರಿಗೆ ಮಾನವೀಯ ಸ್ಪಂದನೆ ಸಿಕ್ಕರೆ ಅವರು ಸಹಕರಿಸುತ್ತಾರೆ. ಇಲ್ಲದೆ ಹೋದರೆ ಅವರು ಆಸ್ಪತ್ರೆಯಿಂದ ಓಡಿಹೋಗಿ ಇನ್ನೂ ಹತ್ತಾರು ಜನಗಳಿಗೆ ರೋಗವನ್ನು ಹಬ್ಬಿಸಿ ಸಾಯುತ್ತಾರೆ. ಸಾಮಾಜಿಕ ಅಂತರ ಕಾಪಾಡುವುದು ಅನಿವಾರ್ಯವೇ ಆಗಿದೆ. ಆದರೆ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮುಖ್ಯವಾಗಿದೆ.

ಲಾಕ್ ಡೌನ್ ಪರಿಸ್ಥಿತಿ ದುರ್ಬಳಕೆ ಮಾಡಿ, ಕಾರ್ಮಿಕ ವರ್ಗದ ಮೇಲೆ ಮಾಲೀಕ ವರ್ಗದ ದೌರ್ಜನ್ಯ– ಸಿಪಿಐ(ಎಂ) ಖಂಡನೆ

ಮಾರ್ಚ್ 24 ರಂದು ಪ್ರಧಾನ ಮಂತ್ರಿಗಳು ಲಾಕ್‌ಡೌನ್ ಪ್ರಕಟಿಸುವಾಗ ಈ ಅವಧಿಯಲ್ಲಿ ಮಾಲಕರು ಯಾರನ್ನೂ ಕೆಲಸದಿಂದ ತೆಗೆದು ಹಾಕಬಾರದು, ಸಂಬಳ ಕಡಿತ ಮಾಡಬಾರದು, ಅಥವ ನಿರ್ವಾಹವಿಲ್ಲದೆ ಕೆಲಸಕ್ಕೆ ಗೈರು ಹಾಜರಾದರೆ ಅದಕ್ಕೆ ಶಿಕ್ಷಾ ಕ್ರಮ ಕೈಗೊಳ್ಳಬಾರದು ಎಂದರು.

ಅದರಂತೆ, ಕೇಂದ್ರ ಗೃಹ ಇಲಾಖೆ ಮತ್ತು ಕಾರ್ಮಿಕ ಇಲಾಖೆ ಈ ಕುರಿತಂತೆ ನಿರ್ದೇಶನಾವಳಿಗಳನ್ನು, ಸಲಹಾಪತ್ರಗಳನ್ನು ಕಳಿಸಿದವು.

ಆದರೇ ಮಾಲೀಕರು, ಪ್ರಧಾನಿಗಳು ಮತ್ತು ರಾಜ್ಯಗಳ ಮುಖ್ಯಮಂತ್ರಿಗಳ ಮನವಿಗಳೂ ಸೇರಿದಂತೆ ಯಾವುದನ್ನೂ ತುಸುವೂ ಲೆಕ್ಕಿಸದೆ ದೇಶ ಮತ್ತು ರಾಜ್ಯದಾದ್ಯಂತ ಬಹಳಷ್ಟು ಕಡೆಗಳಲ್ಲಿ ಕಾರ್ಮಿಕರಿಗೆ ಮಾರ್ಚ್ ತಿಂಗಳ ಸಂಬಳವನ್ನು ನೀಡದೇ ಮನವಿಯನ್ನು ಉಲ್ಲಂಘಿಸಿದ್ದಾರೆ. ಕೊಟ್ಟಿರುವ ಕೆಲವೆಡೆ ಕಡಿತಗಳನ್ನು ಮಾಡಿದ್ದಾರೆ.

ಮುಖ್ಯವಾಗಿ, ಎಲ್ಲ ಸಂಘಟಿತ ವಲಯದ ಉದ್ದಿಮೆಗಳ ಗುತ್ತಿಗೆ, ತಾತ್ಕಾಲಿಕ ಕೆಲಸಗಾರರು ಇದನ್ನು ಅನುಭವಿಸಬೇಕಾಗಿ ಬಂದಿದೆ. ಹಲವೆಡೆ ಕೆಲಸದಿಂದಲೂ ತೆಗೆದು ಹಾಕಿದ್ದಾರೆ. ಕೆಲವೆಡೆಗಳಲ್ಲಿ ನಿಯಮಿತ ಕಾರ್ಮಿಕರನ್ನೂ ತೆಗೆದು ಹಾಕಿದ್ದಾರೆ. ಸಾರ್ವಜನಿಕ ವಲಯದಲ್ಲೂ ಹಲವೆಡೆಗಳಲ್ಲಿ ಗುತ್ತಿಗೆ ಮತ್ತು ಕ್ಯಾಶುವಲ್ ಕಾರ್ಮಿಕರನ್ನು ತೆಗೆದು ಹಾಕಲಾಗಿದೆ. ಈಗ ಲಾಕ್‌ಡೌನ್ ಮತ್ತೆ ಮೂರು ವಾರ, ಯಾವುದೇ ಪರಿಹಾರದ ಪ್ರಕಟಣೆಯಿಲ್ಲದೇ ಮುಂದುವರಿದಿರುವುದರಿಂದ ಏಪ್ರಿಲ್ ತಿಂಗಳ ಸಂಬಳವೂ ಸಿಗುವ ಸಂಭವವಿಲ್ಲ, ಜತೆಗೆ ಉದ್ಯೋಗ, ಆದಾಯ, ಬದುಕು ಕಳಕೊಳ್ಳುವವರ ಸಂಖ್ಯೆ ಮತ್ತಷ್ಟು ಹೆಚ್ಚಿದೆ.

ಇದು ಹೀಗಿರುವಾಗಲೇ, ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ಮಾಡಿ ದಿನದ ಕೆಲಸದ ಅವಧಿಯನ್ನು ಹಾಲಿ 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಮಾಲೀಕರ ಸಂಘಗಳು ಸರಕಾರಗಳ ಮುಂದಿರಿಸಿವೆ.

ಮಾಲೀಕರ ಸಂಘಗಳು ಲಾಕ್ಡೌನ್ ಕಾಲಾವಧಿಯ ವೇತನ ನೀಡುವ ಹೊಣೆಗಾರಿಕೆಯಿಂದ ನುಣಿಚಿಕೊಳ್ಳಲು, ರಾಷ್ಟದ 3.5 ಕೋಟಿ ಇ.ಎಸ್.ಐ. ಸೌಲಭ್ಯವಿರುವ ಕಾರ್ಮಿಕರಿಗೆ ಇ.ಎಸ್.ಐ. ನಿಂದ 75 ಶೇಕಡ ವೇತನ ನೀಡಬೇಕೆಂದಿವೆ. ಅದರಂತೆ ಇಎಸ್ಐ ನಲ್ಲಿರುವ 85,000 ಸಾವಿರ ಕೋಟಿ ರೂ.ಗಳ ನಿಧಿ ಬಳಸಿ 2 ತಿಂಗಳ ವೇತನ ನೀಡಲು ಸೂಚಿಸಿವೆ.

ಮಾಲೀಕರ ಸಂಘಗಳು ತಮ್ಮ ಮತ್ತೊಂದು ಪ್ರಸ್ತಾವದಲ್ಲಿ ಗುತ್ತಿಗೆ ಮತ್ತು ಹಂಗಾಮಿ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ನಿಧಿಯಿಂದ ವೇತನ ನೀಡಲು ಕೋರಿವೆ. ಸೆಸ್ ಕಾಯ್ದೆ ಪ್ರಕಾರ ಕಟ್ಟಡ ಕಾರ್ಮಿಕರಲ್ಲದವರಿಗೆ ಅದರ ಕಲ್ಯಾಣ ನಿಧಿ ಬಳಕೆ ಮಾಡುವಂತಿಲ್ಲ.

ದೇಶ ಮತ್ತು ರಾಜ್ಯದಾದ್ಯಂತ ಕೋವಿಡ್–19 ವೈರಾಣು ವಿರುದ್ಧದ ಹೋರಾಟವನ್ನು ಅತ್ಯಂತ ಸಂಕಷ್ಟದ ಸಂದರ್ಭದಲ್ಲೂ ಕಾರ್ಮಿಕ ವರ್ಗ ಮುಂದುವರೆಸಿರುವಾಗ, ಮಾಲೀಕ ವರ್ಗ ಹಿಂಬದಿಯಿಂದ ಬೆನ್ನಿಗೆ ಹಿರಿಯುವ ಮತ್ತೊಂದು ಧಾಳಿಗೆ ಮುಂದಾಗಿರುವುದನ್ನು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಾಲೀಕ ವರ್ಗದ ಜೊತೆ ಕೈ ಜೋಡಿಸುವ ಪ್ರಸ್ತಾಪಗಳನ್ನು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ.

ಈ ಎಲ್ಲ ಕಾರ್ಮಿಕರು ಲಾಕ್‌ಡೌನ್ ಅವಧಿಯಲ್ಲಿನ ವೇತನಕ್ಕಾಗಿ ಮತ್ತು ಉದ್ಯೋಗ ಕಳೆದುಕೊಳ್ಳುವ ಅಪಾಯವನ್ನು ತಪ್ಪಿಸಬೇಕೆಂದು ಸರಕಾರಗಳ ಕಡೆ ಮೊರೆ ಇಟ್ಟಿರುವಾಗ ಮಾಲೀಕ ವರ್ಗದ ಈ ಪಿತೂರಿ ಅತ್ಯಂತ ಹೇಯ ಮತ್ತು ಅಮಾನವೀಯವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಪ್ರಸ್ತಾಪಗಳನ್ನು ಕೂಡಲೇ ಸಾರಸಗಟಾಗಿ ತಿರಸ್ಕರಿಸಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಬಲವಾಗಿ ಆಗ್ರಹಿಸುತ್ತದೆ.

ಅದೇ ರೀತಿ, ಕಾಯ್ದೆಗೆ ತಿದ್ದುಪಡಿ ತರುವ ಪ್ರಯತ್ನಗಳನ್ನು ಕೇಂದ್ರ ಸರ್ಕಾರ ತಕ್ಷಣವೇ ಕೈಬಿಡುವಂತೆ ಒತ್ತಾಯಿಸುತ್ತದೆ.

ಭಾಷಣ ಸಾಕು– ನೆರವು ಬೇಕು !

ದೇಶದಾದ್ಯಂತ ಕಾರ್ಮಿಕ ವರ್ಗ ಹಾಗೂ ರೈತ–ಕೂಲಿಕಾರ ಜನತೆ ದಿನಾಂಕ 21.04.2020 ರಂದು "ಭಾಷಣ ಸಾಕು– ನೆರವು ಬೇಕು" ಎಂಬ ಘೋಷಣೆಯಡಿ ತಮ್ಮ ಹಕ್ಕೊತ್ತಾಯಗಳಿಗಾಗಿ ಮನೆ ಮುಂದೆಯೆ ಅಥವಾ ಮನೆಯಲ್ಲಿಯೇ ಪ್ರತಿಭಟನೆ ನಡೆಸಲು ಕರೆ ನೀಡಿವೆ. ಸದರಿ ಕರೆಯನ್ನು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಸಂಪೂರ್ಣವಾಗಿ ಬೆಂಬಲಿಸುತ್ತದೆ ಮತ್ತು ಪಕ್ಷದ ಸದಸ್ಯರು, ಬೆಂಬಲಿಗರು, ರೈತರು, ಕೂಲಿಕಾರರು ಮತ್ತು ಕಾರ್ಮಿಕರು ಈ ಕರೆ ಯಶಸ್ವಿಗೆ ಕ್ರಮವಹಿಸಲು ವಿನಂತಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿಗಳು (18.04.2020)

ರಕ್ತದಾನಿಗಳನ್ನು ಅವಮಾನಿಸಿದ ಪೊಲೀಸ್ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಿ

ಲಾಕ್ ಡೌನ್ ನಿಂದ ಮಂಗಳೂರಿನಲ್ಲಿ ರಕ್ತದ ಕೊರತೆ ಉಂಟಾಗಿದೆ. ರೋಗಿಗಳು ಪರದಾಡುತ್ತಿದ್ದಾರೆ. ರಕ್ತದಾನಿಗಳನ್ನು ಗುರುತಿಸಿ ರಕ್ತದಾನ ಮಾಡಿಸುವುದರಲ್ಲಿ ಜಿಲ್ಲಾ ರೆಡ್ ಕ್ರಾಸ್ ಹರ ಸಾಹಸ ಪಡುತ್ತಿದೆ. ಡಿವೈಎಫ್ಐ ಕಾರ್ಯಕರ್ತರು ಅವರೊಂದಿಗೆ ಕೈಜೋಡಿಸಿದ್ದಾರೆ.

ಇಂದು ರೆಡ್ ಕ್ರಾಸ್ ಸಂಯೋಜಕ ಪ್ರವೀಣ್ ಒಂದಿಷ್ಟು ರಕ್ತದಾನಿಗಳನ್ನು ಜಥಿಜು ಸಹಯೋಗದಲ್ಲಿ ಕರೆದೊಯ್ಯುವಾಗ, ನಂತೂರ್ ಜಂಕ್ಷನ್ ನಲ್ಲಿ ಪೊಲೀಸ್ ಅಧಿಕಾರಿ ಸಿದ್ದೇಗೌಡ ರಕ್ತದಾನಿಗಳನ್ನು ಅವಾಚ್ಯವಾಗಿ ನಿಂದಿಸ ತಲೆ ಕೂದಲು ಹಿಡಿದು ಎಳೆದಾಡಿದ್ದಾರೆ. ರಕ್ತದಾನಿಗಳನ್ನು, ರೆಡ್ ಕ್ರಾಸ್ ಸಂಯೋಜಕ ಪ್ರವೀಣ್ ರನ್ನು "ನೀವು ರಕ್ತ ಮಾರಾಟ ಮಾಡುತ್ತೀರಿ, ದುಡ್ಡು ಮಾಡಲು ಹೋಗುತ್ತಿದ್ದೀರಿ" ಎಂದು ಸಾರ್ವಜನಿಕವಾಗಿ ಅವಮಾನಿಸಿದ್ದಾರೆ. ನಿಂದಿಸಿದ್ದಾರೆ.

ಜಿಲ್ಲಾಧಿಕಾರಿ, ಪೊಲೀಸ್ ಕಮೀಷನರ್ ಈ ಕುರಿತು ಗಮನ ಹರಿಸಬೇಕು. ಇಲ್ಲಿಯವರೆಗೆ ಲಾಕ್ ಡೌನ್ ಅನ್ನು ಸಹನೆಯಿಂದ ನಿಭಾಯಿಸಿ ಜಿಲ್ಲೆಯ ಪೊಲೀಸರು ಮೆಚ್ಚುಗೆ ಗಳಿಸಿ ದ್ದಾರೆ. ಇಂತಹ ಕೆಲವು ಅಧಿಕಾರಿಗಳಿಂದ ಅನಗತ್ಯ ಸಮಸ್ಯೆಗಳು ಉದ್ಭವವಾಗುತ್ತದೆ. ತಪ್ಪಿತಸ್ಥ ಪೊಲೀಸ್ ಅಧಿಕಾರಿ ಸಿದ್ದೇಗೌಡರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಡಿವೈಎಫ್ಐ ಒತ್ತಾಯಿಸುತ್ತದೆ.

ಮುನೀರ್ ಕಾಟಿಪಳ್ಳ

ಕಾರ್ಖಾನೆಗಳಲ್ಲಿ ದಿನದ ಕೆಲಸದ ಅವಧಿ ಹೆಚ್ಚಳ ಪ್ರಸ್ತಾಪಕ್ಕೆ ಸಿಪಿಐ(ಎಂ) ವಿರೋಧ

ಕೋವಿಡ್ 19 ವಿಸ್ತರಿತ ಲಾಕ್ಡೌನ್ ಹಿನ್ನೆಲೆಯಲ್ಲಿ ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ಮಾಡಿ ದಿನದ ಕೆಲಸದ ಅವಧಿಯನ್ನು ಹಾಲಿ 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಖಂಡಿಸಿದೆ.

ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಮೂಲಕ ಸೋಂಕಿನ ಹರಡುವಿಕೆ ತಡೆಯಲು ದಿನದ ಕೆಲಸದ ಶಿಫ್ಟ್ ಅವಧಿಯನ್ನು ಹೆಚ್ಚಿಸಲು ಮಾಲೀಕರ ಸಂಘಗಳು ಪ್ರಸ್ತಾವನೆ ಇರಿಸಿರುವುದು, ಅದರಂತೆ ಕಾಯ್ದೆಗೆ ತಿದ್ದುಪಡಿ ತರುವ ಪ್ರಯತ್ನವನ್ನು ಕೇಂದ್ರ ಸರ್ಕಾರವು ನೆಡೆಸಿರುವುದನ್ನು ಸಿಪಿಐ(ಎಂ) ಖಂಡಿಸಿದೆ.

ಕೇಂದ್ರ ಸರ್ಕಾರವು ಕೋವಿಡ್ ನೆಪದಲ್ಲಿ ಬಂಡವಾಳಗಾರರಿಗೆ ನೆರವಾಗಲು ಮತ್ತು ಈಗಾಗಲೇ ಸಂಕಷ್ಟಕ್ಕೆ ಸಿಲುಕಿರುವ ಕಾರ್ಮಿಕರ ಮೇಲೆ ಹೊರೆ ಹೊರಿಸಲು ಮುಂದಾಗಿದೆ. ಶತಮಾನಗಳ ಹೋರಾಟದ ಫಲವಾಗಿ ಗಳಿಸಿರುವ 8 ಗಂಟೆಯ ಕೆಲಸದ ಹಕ್ಕನ್ನು ಇಂತಹ ಕ್ರಮ ಕಸಿದುಕೊಂಡು ಕಾರ್ಮಿಕರನ್ನು ಗುಲಾಮರನ್ನಾಗಿಸಲಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಮಾಲೀಕರ ಸಂಘಗಳು ಲಾಕ್ಡೌನ್ ಕಾಲಾವಧಿಯ

ವೇತನ ನೀಡುವ ಹೊಣೆಗಾರಿಕೆಯಿಂದ ನುಣಿಚಿಕೊಳ್ಳಲು ರಾಷ್ಟ್ರದ 3.5 ಕೋಟಿ ಇ.ಎಸ್.ಐ. ಸೌಲಭ್ಯವಿರುವ ಕಾರ್ಮಿಕರಿಗೆ ಇ.ಎಸ್.ಐ. ನಿಂದ 75 ಶೇಕಡ ವೇತನ ನೀಡಬೇಕೆಂಬ ಪ್ರಸಾಪವಿರಿಸಿವೆ. ಅದರಂತೆ ಇಎಸ್ಐ ನಲ್ಲಿರುವ 85000 ಸಾವಿರ ಕೋಟಿ ರೂಗಳ ನಿಧಿ ಬಳಸಿ 2 ತಿಂಗಳ ವೇತನ ನೀಡಬೇಕೆಂಬ ಪ್ರಸ್ತಾಪ ಇರಿಸಿದೆ. ಈ ಪ್ರಸ್ತಾಪವನ್ನು ಯಾವುದೆ ಕಾರಣಕ್ಕು ಒಪ್ಪಬಾರದೆಂದು ಸಿಪಿಐ(ಎಂ) ಆಗ್ರಹಿಸಿದೆ. ಇದನ್ನೇನಾದರು ಸರ್ಕಾರ ಒಪ್ಪಿಕೊಂಡು ಜಾರಿಗೊಳಿಸಲು ಮುಂದಾದಲ್ಲಿ ಇಡಿ ಇ.ಎಸ್.ಐ. ಅನ್ನು ಸರ್ಕಾರವೇ ದಿವಾಳಿಯತ್ತ ದೂಡಲಿದೆ ಎಂದು ಪ್ರತಿಪಾದಿಸಿದೆ. ಕಾರ್ಮಿಕರಿಗೆ ಇರುವ ಏಕಮಾತ್ರ ಆರೋಗ್ಯ ವ್ಯವಸ್ಥೆಯು ಕಳಚಿ ಬೀಳಲಿದೆ. ಅಂತಹ ಅನಾಹುತಕಾರಿ ಕ್ರಮಕ್ಕೆ ಮುಂದಾಗ ಬಾರದೆಂದು ಸಿಪಿಐ(ಎಂ) ಸರ್ಕಾರವನ್ನು ಎಚ್ಚರಿಸಿದೆ.

ಮಾಲೀಕರ ಸಂಘಗಳು ಮತ್ತೊಂದು ಪ್ರಸ್ತಾಪದಲ್ಲಿ ಗುತ್ತಿಗೆ ಮತ್ತು ಹಂಗಾಮಿ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ನಿಧಿಯಿಂದ ವೇತನ ನೀಡಲು ಕೋರಿರುವುದು ಮಾಲೀಕರ ಭಂಡತನದ ಪ್ರತೀಕವಾಗಿದೆ. ಸೆಸ್ ಕಾಯ್ದೆ ಪ್ರಕಾರ ಕಟ್ಟಡ ಕಾರ್ಮಿಕರಲ್ಲದವರಿಗೆ ಅದರ ಕಲ್ಯಾಣ ನಿಧಿ ಬಳಕೆ ಮಾಡುವಂತಿಲ್ಲ. ಆದರೂ ಅದನ್ನು ಇತರರಿಗೆ ಬಳಕೆ ಮಾಡಲು ಕೋರಿರುವ ಮಾಲೀಕರ ಸಂಘಗಳ ಪ್ರಸ್ತಾಪವು ತಮ್ಮ ಹೊಣೆ ತಪ್ಪಿಸಿಕೊಳ್ಳಲು ಏನುಬೇಕಾದರು ಮಾಡುವ ಬಂಡವಾಳಶಾಹಿ ವರ್ಗದ ಲಾಭ ಕೋರತನವಾಗಿದೆ. ರಾಜ್ಯ ಸರ್ಕಾರವು ಇಂತಹ ಪ್ರಸ್ತಾಪಗಳನ್ನು ಸಾರಸಗಟು ತಿರಸ್ಕರಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

(17.4.2020)

ಬಿಡಿಎ ಮೂಲೆ ನಿವೇಶನ ಹರಾಜು ರಾಜ್ಯ ಸರ್ಕಾರದ ದಿವಾಳಿತನ- ಕೇಂದ್ರ ಮಲತಾಯಿ ಧೋರಣೆಗೆ ಸಿಪಿಐ(ಎಂ) ಖಂಡನೆ

ರಾಜ್ಯ ಸರ್ಕಾರವು ಸಂಪನ್ಮೂಲಗಳ ಕ್ರೋಢಿಕರಣಕ್ಕೆ ಬಿಡಿಎ ಮೂಲೆ ನಿವೇಶನಗಳನ್ನು ಮತ್ತು ರಾಜ್ಯದ ಇತರೆಡೆಗಳಲ್ಲಿ ಸರ್ಕಾರಿ ನಿವೇಶನಗಳ ಹರಾಜು ಮಾಡಲು ಮುಂದಾಗಿರುವುದು ರಾಜ್ಯದ ಖಜಾನೆ ಖಾಲಿಯಾಗಿರುವುದರ ಮತ್ತು ಸರ್ಕಾರದ ದಿವಾಳಿತನದ ಸಂಕೇತವಾಗಿದೆ. ಇದಕ್ಕೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಅಗತ್ಯ ಅನುದಾನ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಕಾರಣವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಖಂಡಿಸಿದೆ.

ಇತ್ತೀಚಿನ ರಾಜ್ಯ ಬಜೆಟ್ ರಾಜ್ಯದ ಗಂಭೀರ ಆರ್ಥಿಕ ಪರಿಸ್ಥಿತಿ ಮತ್ತು ಕೇಂದ್ರ ನೀಡಬೇಕಿರುವ ಅನುದಾನ ಆರ್ಥಿಕ ನೆರವು ನೀಡದಿರುವುದನ್ನು ತೋರಿತ್ತು. ಅದರಿಂದಾಗುವ ಪರಿಣಾಮವನ್ನು ಮನಗಾಣಲಾಗಿತ್ತು.

ಇದೀಗ ಕೋವಿಡ್ 19 ಲಾಕ್ಡೌನಿಂದಾಗಿ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ರಾಜ್ಯ ಸಿಲುಕಿದೆ. ಕೇಂದ್ರ ಸರ್ಕಾರ ಕೊರೋನ ಪರಿಹಾರವಾಗಿ ರಾಜ್ಯಕ್ಕೆ ಕೇವಲ ಸುಮಾರು ರೂ. 14 ಕೋಟಿಯಷ್ಟು ನೆರವು ನೀಡಿದೆ.

ರಾಜ್ಯದಿಂದ ಪಿಎಂ ಕೇರ್ಸ್ ಗೆ ನೂರಾರು ಕೋಟಿ ಹಣ ಸಂದಾಯವಾಗಿದೆ. ರಾಜ್ಯದಲ್ಲಿರುವ ಹಲವು ಸಾರ್ವಜನಿಕ ಹಾಗೂ ಖಾಸಗಿ ಉದ್ದಿಮೆಗಳ ಕಾರ್ಮಿಕರು ಮತ್ತು ಆಡಳಿತ ಮಂಡಳಿಗಳು ಹಾಗೂ ಪ್ರಜೆಗಳು ನೂರಾರು ಕೋಟಿ ರೂ. ಗಳ ದೇಣಿಗೆಯನ್ನು ನೀಡಿವೆ. ಇತ್ತೀಚೆಗೆ ರಾಜ್ಯ ಮುಖ್ಯಮಂತ್ರಿ ವಿಕೋಪ ಪರಿಹಾರ ನಿಧಿಗೆ ಸಲ್ಲಿಸಿದ ದೇಣಿಗೆ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಅಡಿ ಬರುವುದಿಲ್ಲ ಎಂಬ ಘೋಷಣೆ ಮುಖ್ಯ ಮಂತ್ರಿಯವರ ನಿಧಿಗೆ ಬರುವ ದೇಣಿಗೆಗೆ ತೊಡಕಾಗಿವೆ.

ಈ ಎಲ್ಲಾ ಪರಿಣಾಮ ರಾಜ್ಯ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದೆ. ಅದರಿಂದ ಹೊರ ಬರಲು ಇದೀಗ ರಾಜ್ಯದ ಮೂಲೆ ನಿವೇಶನಗಳನ್ನು ಹರಾಜಾಕಲು ಅಕ್ರಮ ಕಟ್ಟಡಗಳ ಸಕ್ರಮಗೊಳಿಸಿ ಹಣ ಸಂಗ್ರಹಕ್ಕೆ ಮುಂದಾಗಿರುವುದು ಬಿಜೆಪಿಯ ಕೇಂದ್ರ ರಾಜ್ಯ ಸರ್ಕಾರಗಳ ದಿವಾಳಿತನ ತೋರುತ್ತದೆ ಎಂದು

ಸಿಪಿಐ(ಎಂ) ಖಂಡಿಸಿದೆ. ಭವಿಷ್ಯದಲ್ಲಿ ಸಾರ್ವಜನಿಕ ಉದೇಶಕ್ಕೆ ಬಳಕೆಯಾಗ ಬಹುದಾದ ಮೂಲೆ ನಿವೇಶನಗಳು ಈ ಪ್ರಕ್ರಿಯಲ್ಲಿ ಖಾಸಗಿ ಪಾಲಾಗಲಿವೆ. ಇದಕ್ಕೆ ಬಿಜೆಪಿಯ ಕೇಂದ್ರ ರಾಜ್ಯ ಸರ್ಕಾರಗಳೆ ಹೊಣೆಯಾಗಿವೆ ಎಂದು ಸಿಪಿಐ(ಎಂ) ಖಂಡಿಸಿದೆ.

(14.4.2020)

ಕಾರ್ಮಿಕರ ಕೆಲಸ ಹಾಗು ವೇತನ ಉಳಿಸಲು ಅಗತ್ಯ ಕ್ರಮಕ್ಕೆ ಸಿಪಿಐ(ಎಂ) ಆಗ್ರಹ

ಕೋವಿಡ್ 19 ವಿಸ್ತರಿತ ಲಾಕ್ಡೌನ್ ಹಿನ್ನೆಲೆಯಲ್ಲಿ ಹಾಗು ಹಲವು ಕಾರ್ಖಾನೆಗಳಲ್ಲಿ ಉತ್ಪಾದನೆ ಆರಂಭಕ್ಕೆ ಅನುಮತಿಯನ್ನು ನೀಡಿರುವ ಕಾರಣ ಮಾಲೀಕರು ಕಾರ್ಮಿಕರನ್ನು ಕೆಲಸಕ್ಕೆ ಹಾಜರಾಗಲು ಕೋರುತ್ತಿದ್ದಾರೆ. ಕೆಲಸಕ್ಕೆ ಬಾರದಿದ್ದರೆ ಸಂಬಳವಿಲ್ಲ ಎನ್ನುತ್ತಿದ್ದಾರೆ, ಕೆಲಸದಿಂದಲೂ ತೆಗೆಯುವ ಮಾತನಾಡುತ್ತಿದ್ದಾರೆ.


ಆದರೆ ಯುಗಾದಿ ಹಬ್ಬಕ್ಕೆಂದು ಊರಿಗೆ ಹೋದ ಲಕ್ಷಾಂತರ ಕಾರ್ಮಿಕರು ಲಾಕ್ಡೌನಿಂದಾಗಿ ವಾಪಸ್ಸು ಬರಲು ಸಾಧ್ಯವಾಗದೆ ಅಸಹಾಯಕರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರ ವೇತನ ಹಾಗೂ ಉದ್ಯೋಗ ಉಳಿಸಲು ಅಗತ್ಯ ಕ್ರಮವಹಿಸಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ರಾಜ್ಯ ಸರಕಾರವನ್ನು ಆಗ್ರಹಿಸಿದೆ.

ಕಳೆದ ಹಲವು ವರ್ಷಗಳಲ್ಲಿ ರಾಷ್ಟ್ರದಲ್ಲಿನ ಕಾರ್ಖಾನೆಗಳ ವಾರ್ಷಿಕ ನಿವ್ವಳ ಮೌಲ್ಯ ವರ್ಧನೆಯಲ್ಲಿ ಕಾರ್ಮಿಕರ ವೇತನದ ಪಾಲು ಕೇವಲ 15 ಶೇಕಡವಾಗಿದ್ದರೆ ಮಾಲೀಕರ ಲಾಭದ ಪಾಲು 47 ಶೇಕಡವಾಗಿದೆ. ಹೀಗಿದ್ದೂ ಸಹಾ ಮಾಲೀಕರು ರಾಷ್ಟ್ರವು ಸಂಕಷ್ಟದಲ್ಲಿರುವಾಗ ಕಾರ್ಮಿಕರಿಗೆ ವೇತನ ನೀಡಲು ಮುಂದೆ ಬಾರದೆ ಸಬೂಬು ನೀಡುತ್ತಿರುವುದು ಅವರ ಲಾಭಕೋರತನದ ಬಂಡವಾಳಶಾಹಿ ವರ್ಗ ಗುಣವನ್ನು ತೋರುತ್ತದೆ. ಬಂಡವಾಳದ ಲಾಭಿಗೆ ಸರ್ಕಾರ ಮಣಿದು ಕಾರ್ಮಿಕರಿಗೆ ದ್ರೋಹ ಬಗೆಯ ಬಾರದೆಂದು ಸಿಪಿಐ(ಎಂ) ಒತ್ತಾಯಿಸಿದೆ.

23.3.2020 ರಂದು ರಾಜ್ಯ ಸರ್ಕಾರವು ಹೊರಡಿಸಿದ್ದ ಆದೇಶದಂತೆ 30.3.2020 ರವರೆಗೆ ವೇತನ ಪಾವತಿಸಲು ಮತ್ತು ಲಾಕ್ಡೌನ್ ಕಾರಣ ಕೆಲಸಕ್ಕೆ ಹಾಜರಾಗದಿದ್ದರೆ ಕೆಲಸದಿಂದ ತೆಗಯ ಬಾರದೆಂದಿದೆ. ಅದನ್ನೂ ಹಲವು ಕಂಪನಿಗಳು ಪಾಲಿಸದಿರುವ ಮಾರ್ಚ್ ತಿಂಗಳ ಸಂಬಳವನ್ನೆ ಇದುವರೆಗೆ ನೀಡದಿರುವ ಹಲವು ಪ್ರಕರಣಗಳಿವೆ. ಇದೀಗ ಏಪ್ರಿಲ್ ತಿಂಗಳ ಸಂಬಳ ನೀಡದಿರಲು ಹಲವು ದಾರಿಗಳನ್ನು ಕಂಪನಿಗಳು/ ಮಾಲೀಕರು ಹುಡುಕುತ್ತಿದಾರೆ, ಸಬೂಬುಗಳನ್ನು ನೀಡುತ್ತಿದ್ದಾರೆ. ಈ ಕಾರಣಗಳಿಂದಾಗಿ ಕಾರ್ಮಿಕ ಇಲಾಖೆ ಕಾರ್ಯದರ್ಶಿಗಳು 13.4.2020 ರಂದು ಆದೇಶ ಹೊರಡಿಸಿ ಲಾಕ್ಡೌನ್ ಕಾಲಾವಧಿಯ ವೇತನ ಉದ್ಯೋಗ ಸಂರಕ್ಷಣೆಗೆ ಆದೇಶಿಸಿದ್ದರು. ಆದರೆ ಸದರಿ ಆದೇಶವನ್ನು 15.4.2020 ರಂದು ಹಿಂಪಡೆದಿದ್ದಾರೆ. ರಾಜ್ಯ ಸರ್ಕಾರವು ಮಾಲೀಕರ ಲಾಭಿಗೆ ಮಣಿದು ಆದೇಶ ಹಿಂಪಡೆದಿರುವುದನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸಿದೆ.

ಮಾತಿನಲ್ಲಿ ವೇತನ ನೀಡಿ ಕೆಲಸದಿಂದ ತೆಗೆಯ ಬೇಡಿ ಎನ್ನುವ ಬಿಜೆಪಿ ಸರ್ಕಾರವು ಕೃತಿಯಲ್ಲಿ ಮಾಲೀಕರಿಗೆ ಅನುವುಗೊಳಿಸಿ ಕಾರ್ಮಿಕರನ್ನು ವಂಚಿಸುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿದೆ. ಕೂಡಲೆ ಕಾರ್ಮಿಕರ ವೇತನ ಹಾಗು ಉದ್ಯೋಗ ರಕ್ಷಣೆಗೆ ಅಗತ್ಯ ಕ್ರಮ ವಹಿಸಬೇಕೆಂದು ಆಗ್ರಹಿಸಿದೆ.

(16.4.2020)



ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಸಿಐಟಿಯು ನಿಯೋಗದ ಮನವಿ

ಸಿಐಟಿಯು ರಾಜ್ಯ ನಿಯೋಗ ರಾಜ್ಯದ ಮುಖ್ಯಕಾರ್ಯದರ್ಶಿ ಶ್ರೀ ವಿಜಯಬಾಸ್ಕರ್ ಅವರನ್ನು ಭೇಟಿ ಮಾಡಿ ಕೊವೀಡ್ 19 ನಿಂದ ತೊಂದರೆಗೊಳಗಾದ ಅಸಂಘಟಿತ ಮತ್ತು ಸ್ಕೀಂ ನೌಕರರು ಹಾಗೂ ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಕೋರಿ ಮನವಿ ಸಲ್ಲಿಸಲಾಯಿತು.

ಮುಖ್ಯವಾಗಿ ರಾಜ್ಯದಲ್ಲಿ ಅಂಗನಾಡಿ, ಬಿಸಿಯೂಟ ಹಾಗೂ ಆಶಾ ಕಾರ್ಯಕರ್ತೆಯರು ಸೇರಿ ವಿವಿಧ ಕಾರ್ಮಿಕರು covid front warrior ಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಮತ್ತು ಹೆಚ್ಚುವರಿ ವೇತನ ನೀಡಬೇಕು

ಕಟ್ಟಡ ಕಾರ್ಮಿಕರಿಗೆ ದೆಹಲಿ ಹರಿಯಾಣ ಮಾದರಿಯಲ್ಲಿ ಕನಿಷ್ಟ 5 ಸಾವಿರ ಪರಿಹಾರ ಪ್ರಕಟಿಸಬೇಕು ಮತ್ತು ಈಗ ಘೋಷಿಸಲಾದ ಎರಡು ಸಾವಿರ ವನ್ನು ನವೀಕರಣಗೊಳ್ಳದ ಕಾರ್ಮಿಕರಿಗೂ ತಲುಪುವಂತೆ ತಕ್ಷಣ ಕ್ರಮವಹಿಸಬೇಕು.

ವಿಶೇಷವಾಗಿ ಮತ್ತು ಅಸಂಘಟಿತ ಕಾರ್ಮಿಕ ವಿಭಾಗಗಳಾದ ಆಟೋ, ಟ್ಯಾಕ್ಸಿ, ಹಮಾಲಿ, ಬೀದಿಬದಿ, ಮನೆಗೆಲಸ ಮೊದಲಾದ ವಿಭಾಗಳಿಗೆ ಆರ್ಥಿಕ ಸಹಾಯಧನ ಪ್ರಕಟಿಸಬೇಕು ಅಲ್ಲದೆ ಆರೋಗ್ಯ ಇಲಾಖೆ ಮತ್ತು ವಿದ್ಯುತ್ ರಂಗದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಸೂಕ್ತ ಸೌಲಭ್ಯ ಒದಗಿಸಬೇಕು ಎಂದು ಪ್ರತ್ಯೇಕವಾಗಿ ನೀಡಲಾದ ಮನವಿಗಳಲ್ಲಿ ಕೋರಲಾಗಿದೆ.

ಮನವಿಯನ್ನು ಸ್ವೀಕರಿಸಿ ಕೆಲವು ಬೇಡಿಕೆಗಳ ಕುರಿತು ವಿವಿಧ ಇಲಾಖೆಗಳ ಮುಖ್ಯಸ್ಥರ ಜೊತೆ ಚರ್ಚಿಸಿ ಅಗತ್ಯ ಕ್ರಮವಹಿಸುವ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ಭರವಸೆ ನೀಡಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮೀ, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷೀ ಸುಂದರಂ ರಾಜ್ಯ ಕಾರ್ಯದರ್ಶಿ ಗಳಾದ ಕೆ.ಎನ್. ಉಮೇಶ ಹಾಗೂ ಕೆ. ಮಹಾಂತೇಶ ನಿಯೋಗದಲ್ಲಿದ್ದರು.

ಬಿಬಿಎಂಪಿ ಸಹಾಯವಾಣಿ ಪ್ರಾರಂಭ – ಸಿಪಿಐ(ಎಂ) ಸ್ವಾಗತ

ಬಿಬಿಎಂಪಿಯಿಂದ ದಕ್ಷಿಣ ವಲಯದಲ್ಲಿ ನಾಗರೀಕರಿಗೆ 12.4.2020 ರಿಂದ ಸಹಾಯವಾಣಿ ಪ್ರಾರಂಭಿಸಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಸ್ವಾಗತಿಸಿದೆ. ಅದನ್ನು ಸಮರ್ಪಕವಾಗಿ ಹಾಗು ಸಮರ್ಥವಾಗಿ ಜನಸ್ನೇಹಿಯಾಗಿ ಜಾರಿ ಮಾಡ ಬೇಕೆಂದು ಬಿಬಿಎಂಪಿಯನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಈ ಹಿಂದೆಯೇ ಆರಂಭಿಸಬೇಕಿದ್ದ ಸಹಾಯವಾಣಿಯನ್ನು ಲಾಕ್ಡೌನ್ ಆರಂಭವಾಗಿ 20 ದಿನಗಳ ನಂತರವಾದರೂ ಆರಂಭಿಸಿರುವುದು ತಡವಾಗಿಯಾದರು ಬಿಬಿಎಂಪಿಗೆ ಜ್ಞಾನೋದಯವಾಗಿರುವುದನ್ನು ತೋರುತ್ತದೆ.

ಈ ಸಹಾಯವಾಣಿ ಹಣವಿದ್ದು ಖರಿದಿಸುವವರಿಗೆ ನೆರವಾಗಲಿದೆ. ಜನತೆ ಮನೆಯಲ್ಲೇ ಇರಲು ಅನುವಾಗಲಿದೆ.

ಇದೇ ರೀತಿ ಹಣವಿಲ್ಲದ ಬಡ ಅಸಂಘಟಿತರಿಗೆ ನೆರವಾಗಲು ಕಾರ್ಮಿಕ ಇಲಾಖೆ ಕಟ್ಟಡ ಕಾರ್ಮಿಕರಿಗೆ ಆರಂಭಿಸಿರುವ ರೀತಿ ಪ್ರತ್ಯೇಕ ಸಹಾಯವಾಣಿ ಪ್ರಾರಂಭಿಸ ಬೇಕೆಂದು ಬಿಬಿಎಂಪಿಯನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಕಳೆದ 20 ದಿನಗಳ ಲಾಕ್ಡೌನ್ ಅವಧಿಯಲ್ಲಿ ಮಾನ್ಯ ಮಹಾಪೌರರು ಎಲ್ಲಿ ಮಾಯವಾಗಿದ್ದಾರೆ ಎಂಬಂತೆ ಮಹಾನಗರದ ಜನತೆ ಭಾವಿಸುವಂತ ಪರಿಸ್ಥಿತಿ ಅವರ ನಿಷ್ಕ್ರೀಯತೆಯಿಂದಾಗಿ ಉಂಟಾಗಿದೆ. ಬಿಬಿಎಂಪಿಯ ಮೇಯರ್ ಬಿಬಿಎಂಪಿ ಹಣದಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳನ್ನು ಜನತೆಯ ಮುಂದಿರಿಸಬೇಕು.

ಎಲ್ಲಾ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಡಿ ಬೆಂಗಳೂರು ಒಂದಾಗಿ ಕೋವಿಡ್ 19 ಲಾಕ್ಡೌನ್ ಯಶಸ್ಸಿಗೆ ಹಾಗು ಅದರಿಂದ ಭಾಧಿತರಾಗಿರುವ ಎಲ್ಲಾ ವಿಭಾಗದ ಜನತೆಗೆ ಅಗತ್ಯವಾದ ಪರಿಹಾರ ಕಾರ್ಯಕ್ಕೆ ಮುಂದಾಗಬೇಕೆಂದು ಸಿಪಿಐ(ಎಂ) ಮಹಾಪೌರರನ್ನು ಒತ್ತಾಯಿಸಿದೆ.

ಕೆ.ಎನ್. ಉಮೇಶ್, ಕಾರ್ಯದರ್ಶಿ (13.4.2020)

ಕೊರೊನಾ 3ನೇ ಹಂತದಲ್ಲಿದೆ: ಏನು ಮಾಡಬೇಕು?

ಡಾ॥ ಅನಿಲ್ ಕುಮಾರ್

ವಾಸ್ತವದಲ್ಲಿ ನಾವು 3ನೇ ಹಂತದ ಸೋಂಕನ್ನು ನೋಡುತ್ತಿದ್ದೇವೆ. ಕೇವಲ ಲಾಕ್‌ಡೌನ್ ಮತ್ತು ಕ್ವಾರಂಟೈನ್ ನಿಂದ ಸೋಂಕು ಹರಡುವುದನ್ನು ತಡೆಯಲು ಸಾಧ್ಯವಿಲ್ಲ. ಎಂದು ಈಗಾಗಲೇ ಹೆಚ್ಚುತ್ತಿರುವ ಸೋಂಕಿತರನ್ನು ನೋಡಿದಾಗ ಅರ್ಥವಾಗುತ್ತದೆ. ಈ ನಿರ್ಬಂಧಗಳ ಜೊತೆ ಜೊತೆಯಲ್ಲಿಯೇ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಮಾಡಿ ಸೋಂಕಿತರನ್ನು ಗುರುತಿಸಿ ಸೋಂಕು ಹರಡದಂತೆ ತಡೆಯಬಹುದೇ ವಿನಃ ಈ ರೀತಿ ಮಂದಗತಿಯಲ್ಲಿ ಪರೀಕ್ಷೆಗಳನ್ನು ಮಾಡುತ್ತಿದ್ದರೆ ಸೋಂಕನ್ನು ತಡೆಯಲು ಸಾಧ್ಯವಿಲ್ಲ. ಯಾವುದೇ ಕಾರಣಕ್ಕಾಗಿ ಈ ಸದ್ಯದಲ್ಲಿ ನಾವು ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಕಡಿಮೆ ಸಮಯದಲ್ಲಿ ಮಾಡಲಾಗದಿದ್ದರೆ ಅಂತಹ ಸಂದರ್ಭದಲ್ಲಿ ಜ್ವರ, ನೆಗಡಿ, ಕೆಮ್ಮು ಗಂಟಲು ನೋವು ಇತ್ಯಾದಿ ಲಕ್ಷಣಗಳುಳ್ಳವರನ್ನೆಲ್ಲಾ ಪ್ರತ್ಯೇಕಿಸಿ ಆರೈಕೆ ಹಾಗೂ ಚಿಕಿತ್ಸೆ ಕೊಡಬೇಕಾಗುತ್ತದೆ. ಹೀಗೆ ಮಾಡಲು ಪ್ರತೀ ಗ್ರಾಮದಲ್ಲಿ ಹಾಗೂ ವಾರ್ಡ್ ಗಳಲ್ಲಿ ಪ್ರತ್ಯೇಕ ತಾತ್ಕಾಲಿಕ ಕೇಂದ್ರಗಳನ್ನು ಪ್ರಾರಂಭಿಸಬೇಕು ಹಾಗು ಅಲ್ಲಿ ಚಿಕಿತ್ಸೆಯನ್ನು ಕೊಡುವಂತಾಗಬೇಕು.

ಭಾರತದಲ್ಲಿ ಇಂದು ನಾವು 3ನೇ ಹಂತದ ಕೋವಿಡ್-19 ಸೋಂಕನ್ನು ನೋಡುತ್ತಿದ್ದೇವೆ ಎಂದು ಅನೇಕ ವಿಜ್ಞಾನಿಗಳು, ಸಾಂಕ್ರಾಮಿಕ ರೋಗಗಳ ತಜ್ಞರು, ಐಸಿಎಂಆರ್ ಹಾಗೂ ಮುಂತಾದ ಸಂಸ್ಥೆಗಳು ಹೇಳುತ್ತಿದ್ದರೂ ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದನ್ನು ಒಪ್ಪುತ್ತಿಲ್ಲ. ಸರ್ಕಾರದ ದೃಷ್ಟಿಯಲ್ಲಿ ನಾವಿನ್ನೂ 2ನೇಯ ಹಂತದಲ್ಲಿ ಇದ್ದೇವೆ ಎನ್ನುತ್ತಾರೆ. ಆದರೆ ವಾಸ್ತವದಲ್ಲಿ ನಾವು 3ನೇ ಹಂತದ ಸೋಂಕನ್ನು ನೋಡುತ್ತಿದ್ದೇವೆ. ಹೀಗಿರುವಾಗ ಯಾವುದೇ ಜವಾಬ್ದಾರಿಯುತವಾದ ಸರ್ಕಾರಗಳು ನಮ್ಮ ಜನರನ್ನು ಈ ಸೋಂಕಿನಿಂದ ರಕ್ಷಿಸಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಸರ್ಕಾರದ ಕ್ರಮಗಳು ಬಹಳ ಮಂದಗತಿಯಲ್ಲಿವೆ. ಕೇಂದ್ರ ಸರ್ಕಾರದ ಪ್ರಕಟನೆಯ ಪ್ರಕಾರ ಇಂದು ದೇಶಾದ್ಯಂತ 1,06,719 ಆಸ್ಪತ್ರೆ ಹಾಸಿಗೆಗಳನ್ನು ಕೋವಿಡ್-19 ಸೋಂಕಿತರ ಆರೈಕೆಗೆ ಮೀಸಲಾಗಿರಿಸಿದೆ ಹಾಗು 12,024 ತೀವ್ರ ನಿಗಾ ಘಟಕದ (ಐಸಿಯು) ಹಾಸಿಗೆಗಳನ್ನು ಸಿದ್ದಪಡಿಸಿದ್ದಾರೆ. ಇವುಗಳನ್ನು ಸುಮಾರು 600 ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡಿದ್ದಾರೆ. ಈ ಪ್ರಕಟಣೆಯನ್ನು ವಿವರವಾಗಿ ವಿಶ್ಲೇಷಿಸಿದರೆ, ನಮ್ಮ ಸರ್ಕಾರ ಭಾರತದಲ್ಲಿ ಈಗ ಕೇವಲ ಶೇ. 0.17% ಜನರಿಗೆ ಸೋಂಕು ತಗುಲಿರಬಹುದು ಎಂದು ಅಭಿಪ್ರಾಯದಲ್ಲಿದೆ ಅನ್ನಿಸುತ್ತದೆ. ಆದರೆ ಸಿಡಿಡಿಇಪಿ, ವಾಷಿಂಗ್ಟನ್ ಮೂಲದ ಸಂಸ್ಥೆಯ ಪ್ರಕಾರ ಭಾರತದಲ್ಲಿ ಶೇ. 28% ರಿಂದ ಶೇ 38% ರಷ್ಟು ಜನರು ಜುಲೈ ತಿಂಗಳಷ್ಟರಲ್ಲಿ ಸೋಂಕಿತರಾಗಬಹುದು ಎಂದು ಹೇಳಿದ್ದಾರೆ.

ವಿಜ್ಞಾನಿಗಳೂ ಮತ್ತು ಸಾಂಕ್ರಾಮಿಕ ರೋಗಗಳ ತಜ್ಞರ ಅಭಿಪ್ರಾಯದಲ್ಲಿ ಭಾರತದಲ್ಲಿ ಸರಾಸರಿ ಶೇ. 5% ರಿಂದ ಶೇ. 7% ರಷ್ಟು ಸೋಂಕು ತಗಲಬಹುದೆಂದಿದೆ. ಹಾಗೆ ಐಸಿಎಂಆರ್ ಕೂಡ ಒಂದು ಅಂದಾಜಿಗೆ ಬರಲು ಸಂಶೋಧನೆಯನ್ನು ಕೈಗೊಂಡಿದೆ. ಇನ್ನೂ ಅದರ ಅಧಿಕೃತವಾದ ವರದಿ ಬಂದಿಲ್ಲ. ಆದರೆ ಐಸಿಎಂಆರ್ ಭಾರತದಲ್ಲಿ ಈಗ 3ನೇಯ ಹಂತದ ಸೋಂಕು ಇದೆ ಎಂದು ಸ್ಪಷ್ಟವಾಗಿ ಹೇಳಿದೆ. ಹೀಗಿರುವಾಗ ನಾವು ಕೇವಲ ಶೇ. 1% ರಷ್ಟು ಜನರಿಗೆ ಈ ಸೋಂಕು ತಗುಲಿದೆ ಎಂದು ಪರಿಗಣಿಸಿದರೆ ಕರ್ನಾಟಕ ರಾಜ್ಯದಲ್ಲಿ ಸುಮಾರು 33,500 ಆಸ್ಪತ್ರೆ ಹಾಸಿಗೆಗಳು ಬೇಕು. ಅದರ ಪೈಕಿ 6700 ಐಸಿಯು ಹಾಸಿಗೆಗಳು ಇರಬೇಕು. ಈಗ ಒಟ್ಟು ಕರ್ನಾಟಕ ರಾಜ್ಯದಲ್ಲಿ ಕೋವಿಡ್-19 ಸೋಂಕಿತರಿಗಾಗಿ ಕಾಯ್ದಿರಿಸಿರುವ ಹಾಸಿಗೆಗಳೆಷ್ಟು ಎನ್ನುವ ನಿಖರವಾದ ಮಾಹಿತಿ ಇಲ್ಲ.

ಹಾಗೆ ಭಾರತದಲ್ಲಿ ಸುಮಾರು 6,85,000 ಹಾಸಿಗೆಗಳು ಬೇಕು. ಇದರ ಪೈಕಿ ಸುಮಾರು 1,37,000 ಐಸಿಯು ಹಾಸಿಗೆಗಳು ಇರಬೇಕಾಗುತ್ತವೆ. ಅಂದರೆ ದೇಶಾದ್ಯಂತ ಸುಮಾರು 5,66,257 ಹಾಸಿಗೆಗಳನ್ನು ಅಧಿಕವಾಗಿ ಹೊಂದಿಸಬೇಕಾಗುತ್ತದೆ. ಭಾರತದಲ್ಲಿ ಇಲ್ಲಿಯವರೆಗೆ ಸುಮಾರು 13,000 ಸೋಂಕಿತರನ್ನು ಗುರುತಿಸಲಾಗಿದೆ. ಆದರೆ ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. 137 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಇಷ್ಟೊಂದು ಕಡಿಮೆ ಸೋಂಕು ಏಕೆ ಎಂದು ನಾವು ಪ್ರಶ್ನಿಸುವುದಾದರೆ ಅದಕ್ಕೆ ಮುಖ್ಯ ಕಾರಣ ನಾವು ಬಹಳ ಕಡಿಮೆ ಪ್ರಮಾಣದಲ್ಲಿ ಪರೀಕ್ಷೆಗಳನ್ನು ಮಾಡುತ್ತಿದ್ದೇವೆ.

ಉದಾಹರಣೆಗೆ: ಅಮೇರಿಕಾ ದೇಶದಲ್ಲಿ ಸುಮಾರು 33 ಕೋಟಿ ಜನಸಂಖ್ಯೆ ಇದೆ. ಅವರು ಸುಮಾರು 33 ಲಕ್ಷ ಜನರಿಗೆ ಪರೀಕ್ಷೆಗಳನ್ನು ಮಾಡಿದ್ದಾರೆ. ಆದರೆ 137 ಕೋಟಿ ಜನಸಂಖ್ಯೆ ಇರುವ ನಾವು ಕೇವಲ 2,90,000 ಪರೀಕ್ಷೆಗಳನ್ನು ಮಾಡಿದ್ದೇವೆ. ಈ ಪರೀಕ್ಷೆಗಳ ಪೈಕಿ 12,759 ಜನರಿಗೆ ಸೋಂಕು ಇದೆ ಎಂದು ಧೃಢೀಕರಿಸಲಾಗಿದೆ (ಅಂದರೆ ಶೇ. 4.3% ರಷ್ಟು).

ನಾವು ಈ ಪರೀಕ್ಷೆಗಳನ್ನು ಹೆಚ್ಚು ಮಾಡಿದರೆ ಯಾರೂ ಸೋಂಕಿತರು ಎಂದು ತಿಳಿದುಕೊಂಡು ಅವರನ್ನು ಪ್ರತ್ಯೇಕಿಸಿ ಆರೈಕೆಯನ್ನು ಹಾಗೂ ಚಿಕಿತ್ಸೆಯನ್ನು ಕೊಟ್ಟರೆ ಆಗ ಸೋಂಕು ಹರಡುವುದನ್ನು ತಡೆಯಬಹುದು. ಕೇವಲ ಲಾಕ್‌ಡೌನ್ ಮತ್ತು ಕ್ವಾರಂಟೈನ್ ನಿಂದ ಸೋಂಕು ಹರಡುವುದನ್ನು ತಡೆಯಲು ಸಾಧ್ಯವಿಲ್ಲ. ಎಂದು ಈಗಾಗಲೇ ಹೆಚ್ಚುತ್ತಿರುವ ಸೋಂಕಿತರನ್ನು ನೋಡಿದಾಗ ಅರ್ಥವಾಗುತ್ತದೆ. ಈ ನಿರ್ಬಂಧಗಳ ಜೊತೆ ಜೊತೆಯಲ್ಲಿಯೇ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಮಾಡಿ ಸೋಂಕಿತರನ್ನು ಗುರುತಿಸಿ ಸೋಂಕು ಹರಡದಂತೆ ತಡೆಯಬಹುದೇ ವಿನಃ ಈ ರೀತಿ ಮಂದಗತಿಯಲ್ಲಿ ಪರೀಕ್ಷೆಗಳನ್ನು ಮಾಡುತ್ತಿದ್ದರೆ ಸೋಂಕನ್ನು ತಡೆಯಲು ಸಾಧ್ಯವಿಲ್ಲ. ಯಾವುದೇ ಕಾರಣಕ್ಕಾಗಿ ಈ ಸದ್ಯದಲ್ಲಿ ನಾವು ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಕಡಿಮೆ ಸಮಯದಲ್ಲಿ ಮಾಡಲಾಗದಿದ್ದರೆ ಅಂತಹ ಸಂದರ್ಭದಲ್ಲಿ ಜ್ವರ, ನೆಗಡಿ, ಕೆಮ್ಮು ಗಂಟಲು ನೋವು ಇತ್ಯಾದಿ ಲಕ್ಷಣಗಳುಳ್ಳವರನ್ನೆಲ್ಲಾ ಪ್ರತ್ಯೇಕಿಸಿ ಆರೈಕೆ ಹಾಗೂ ಚಿಕಿತ್ಸೆ ಕೊಡಬೇಕಾಗುತ್ತದೆ. ಹೀಗೆ ಮಾಡಲು ಪ್ರತೀ ಗ್ರಾಮದಲ್ಲಿ ಹಾಗೂ ವಾರ್ಡ್ ಗಳಲ್ಲಿ ಪ್ರತ್ಯೇಕ ತಾತ್ಕಾಲಿಕ ಕೇಂದ್ರಗಳನ್ನು ಪ್ರಾರಂಭಿಸಬೇಕು ಹಾಗು ಅಲ್ಲಿ ಚಿಕಿತ್ಸೆಯನ್ನು ಕೊಡುವಂತಾಗಬೇಕು.

ಒಂದು ಕಡೆ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಮಾಡಿ ಸೋಂಕಿತರನ್ನು ಗುರುತಿಸದೆ ಇನ್ನೊಂದು ಕಡೆ ರೋಗಲಕ್ಷಣಗಳುಳ್ಳವರನ್ನು ಪ್ರತ್ಯೇಕಿಸಿ ಆರೈಕೆ ಮತ್ತು ಚಿಕಿತ್ಸೆ ಕೊಡದಿದ್ದರೆ. ಈ ಸೋಂಕು ಬಹುಬೇಗ ಉಲ್ಬಣವಾಗುವುದು ಖಚಿತ. ಹೇಗೆ ನಾವು ಹಂತ ಹಂತವಾಗಿ ಮೊದಲನೆಯ ಹಂತದ ಸೋಂಕಿನಿಂದ ಈ 3ನೇ ಹಂತದ ಸೋಂಕನ್ನು ತಲುಪಿದ್ದೇವೆಯೋ ಇನ್ನು 2-3 ತಿಂಗಳಲ್ಲಿ 4 ನೇಯ ಹಂತವನ್ನು ಮುಟ್ಟುತ್ತೇವೆ. ಆಗ ಒಂದು ಕಡೆ ಜನರು ತಮ್ಮ ಪ್ರಾಣವನ್ನು ಕೋವಿಡ್-19 ಸೋಂಕಿನಿಂದ ಕಳೆದು ಕೊಳ್ಳಬೇಕಾಗುತ್ತದೆ. ಇನ್ನೊಂದು ಕಡೆ ಈ ಲಾಕ್‌ಡೌನ್ ನಿಂದ ತತ್ತರಿಸಿ ಹೋಗಿರುವ ಆರ್ಥಿಕ ವ್ಯವಸ್ಥೆಯಿಂದ ಸಂಕಷ್ಟಕ್ಕೆ ಒಳಗಾಗಿರುವ ಅಸಂಘಟಿತ ಕಾರ್ಮಿಕರು, ರೈತರು, ಕೃಷಿ ಕೂಲಿ ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಸಾವನ್ನಪ್ಪಬೇಕಾಗುತ್ತದೆ. ಅಂದರೆ ಭಾರತದ ದುಡಿಯುವ ಹಾಗು ಬಡಜನರಿಗೆ ಸಂಕಷ್ಟ ತಪ್ಪಿದ್ದಲ್ಲ ಎನ್ನಿಸುತ್ತದೆ. ಇವೆಲ್ಲವನ್ನು ತಡೆಗಟ್ಟಬೇಕಾದರೆ ಇಂದಿನ ಸರ್ಕಾರ ಹಾಗೂ ಆಡಳಿತ ತುರ್ತಾಗಿ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಮಾಡಬೇಕು ಅದೇ ಸಮಯದಲ್ಲಿ ಸೋಂಕಿತರ ಆರೈಕೆ ಹಾಗು ಚಿಕಿತ್ಸೆಗಾಗಿ ಪ್ರತ್ಯೇಕ ತಾತ್ಕಾಲಿಕ ಕೇಂದ್ರಗಳನ್ನು ಪ್ರಾರಂಭಿಸಬೇಕು.



ದಲಿತ ಹಕ್ಕುಗಳ ಸಮಿತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ರವರ 129 ನೆ ಜನ್ಮ ದಿನಾಚರಣೆ

ಪೌರಕಾರ್ಮಿಕರಿಗೆ ಗೌರವ ಅರ್ಪಣೆ

ಸಮಾನತೆಯ ಹರಿಕಾರ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 129 ನೆಯ ಜನ್ಮ ದಿನಾಚರಣೆಯ ಅಂಗವಾಗಿ ಪೌರಕಾರ್ಮಿಕರಿಗೆ ಗೌರವ ಅರ್ಪಣೆ ಕಾರ್ಯಕ್ರಮ ಹಮಲವಾಡಿಯ ಮಹಮ್ಮದ್ ಹಸನ ಖಾನ್ ಭವನ ಜರುಗಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾ. ಮಾರುತಿ ಮಾನಡೆ ಮಾತನಾಡಿ, ದೇಶದಾದ್ಯಂತ ಕೊರೊನ ಮಹಾ ಪಿಡುಗು ಸವಾಲಾಗಿ ಬಂದಿದೆ. ಪೌರಕಾರ್ಮಿಕರು ಜೀವದ ಹಂಗು ತೊರೆದು ಸ್ವಚ್ಚತಾ ಕೆಲಸ ನಿರ್ವಹಿಸುತಿದ್ದಾರೆ, ಪೌರ ಕಾರ್ಮಿಕರ ಕೆಲಸವು ಮಾನವ ಕಲ್ಯಾಣದ ಕೆಲಸವಾಗಿದೆ. ಪ್ರಧಾನ ಮಂತ್ರಿ ಚುನಾವಣೆ ಸಂದರ್ಭದಲ್ಲಿ ಪೌರ ಕಾರ್ಮಿಕರ ಪಾದಪೂಜೆ ನಡೆಸಿದ್ದು ಚುನಾವಣಾ ತಂತ್ರಗಾರಿಕೆ ಆಯಿತೆ ವಿನಹ ಕಾರ್ಮಿಕರ ಕಲ್ಯಾಣವಾಗಲಿಲ್ಲ, ರಾಷ್ಟ್ರೀಯ ಸ್ವಚ್ಚತಾ ಆಂದೋಲನದ ಜಾಹಿರಾತಿಗಾಗಿ ಖರ್ಚು ಮಾಡಿದಷ್ಟು ಹಣವನ್ನು ಪೌರ ಕಾರ್ಮಿಕರ ಮತ್ತು ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕೆ ಖರ್ಚು ಮಾಡದೆ ಇರುವದೆ ಎದ್ದು ಕಾಣುತ್ತದೆ ಎಂದು ಟೀಕಿಸಿದರು.


ಹಲವು ಕಷ್ಟಗಳ ನಡುವೆಯೂ ಸಮರ್ಥವಾಗಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಗೌರವ ಪೂರ್ಣ ಅಭಿನಂದನೆ ಸಲ್ಲಿಸಲಾಗುತ್ತಿದೆ. ಇಂತಹ ಅನ್ಯಾಯಗಳ ವಿರುದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ಜೀವನ ಪಯಂತ ಹೋರಾಟ ನಡೆಸಿದ್ದಾರೆ, ಅಂತಹ ಮಹಾನುಭಾವರ ಜನ್ಮದಿನದಂದು ನಮ್ಮ ಪೌರ ಕಾರ್ಮಿಕರಿಗೆ ಸನ್ಮಾನಿಸಿ ಗೌರವಿಸುತ್ತಿದ್ದೇವೆ.

ದೇಶದಲ್ಲಿ-ರಾಜ್ಯದಲ್ಲಿ ಆಡಳಿತ ನಡೆಸುವ ಸರ್ಕಾರಗಳು ಮೀಸಲಾತಿಯನ್ನೆ ಅಪಾಯಕ್ಕೆ ತಳ್ಳಿವೆ, ಸುಪ್ರೀಂ ಕೋರ್ಟ್ ನಲ್ಲಿ ಕೇಂದ್ರ ಸರ್ಕಾರ ಸರಿಯಾಗಿ ವಾದ ಮಂಡಿಸದೆ ಇರುವದರಿಂದ ದಲಿತ ವಿರೋಧಿ ತೀರ್ಪು ಬಂದಿದೆ, ಸರಕಾರವು ಸಂವಿಧಾನಿಕ ತಿದ್ದುಪಡಿ ತಂದು ದಲಿತರ ಮೀಸಲಾತಿಯನ್ನು ಸಂರಕ್ಷಿಸಬೇಕೆಂದು ಒತ್ತಾಯಿಸುತ್ತಾ, ಗುತ್ತಿಗೆ-ಹೊರಗುತ್ತಿಗೆ ಪದ್ಧತಿಯನ್ನು ಕೇಂದ್ರ ರಾಜ್ಯ ಸರ್ಕಾರಗಳು ವ್ಯಾಪಕವಾಗಿ ಜಾರಿ ಮಾಡಿರುವುದರಿಂದ ಸರಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಇಲ್ಲದೆ ದಲಿತ ಸಮುದಾಯ ಅನ್ಯಾಯಕ್ಕೆ ಒಳಗಾಗಿದೆ, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಸಂವಿಧಾನದ ಅಸ್ತಿತ್ವವೇ ಅಪಾಯಕ್ಕೆ ಒಳಗಾಗಿದೆ, ಸಂವಿಧಾನದ ಸಂರಕ್ಷಣೆ ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ವೇಳೆಯಲ್ಲಿ ದಲಿತ ಹಕ್ಕುಗಳ ಸಮಿತಿಯ ಸಂಚಾಲಕರಾದ ಪಾಂಡುರಂಗ ಮಾವಿನಕರ್, ಸುಧಾಮ ಧನ್ನಿ, ಪ್ರಾಂತ ರೈತ ಸಂಘದ ಅಶೋಕ ಮ್ಯಾಗೇರಿ, ಶಾಂತಪ್ಪ ಪಾಟೀಲ, ಅಂಗನವಾಡಿ ನೌಕರರ ಸಂಘದ ಅಧ್ಯಕ್ಷರಾದ ಗಂಗಮ್ಮ ಬಿರೆದಾರ ಮತ್ತು ಎಸ್. ಎಫ್. ಐ.ನ ಕಾರ್ಯದರ್ಶಿ ಸಿದ್ಧಲಿಂಗ ಪಾಳಾ ಮಾತನಾಡಿದರು.



ಬಡವರ ಸಿಟ್ಟು ರಟ್ಟೆಗೆ ಬಂದರೆ .. .. ..



ಕೋವಿಡ್ ಪೂರ್ವದ ಬಡವರಂತೆ ಕೊವಿಡೋತ್ತರ ಬಡವರಿಗೆ 'ಹಸಿವ'ವನ್ನು ತಡೆಯುವ ತಾಳ್ಮೆಯಾಗಲಿ ಅಥವಾ ವಿಧಿಯ ಮೊರೆ ಹೋಗುವ ವಾಡಿಕೆಯಾಗಲಿ ಇಲ್ಲ. ಈ ಎರಡು ಬಗೆಯ ಬಡವರಲ್ಲಿನ ಭಿನ್ನತೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಹೀಗೆ ಕರೋನಾದ ಪರಿಣಾಮವಾಗಿ ಬಡವರಾದ ಜನರೂ ರೇಷನ್ ಅಂಗಡಿಗಳ ಮುಂದೆ ಸರದಿ ಸಾಲಿನಲ್ಲಿ ನಿಲ್ಲುತ್ತಾರೆ. ಇವರ ಸಿಟ್ಟು ಕೇವಲ ಬಾಯಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಈ ಹೊಸ ಬಡವರ' ಸಿಟ್ಟು ಅವರ ರಟ್ಟೆಗೆ ಬಂದರೆ ಏನಾಗುತ್ತದೆ ಎಂಬುದನ್ನು ಹೇಳುವುದು– ಊಹಿಸುವುದು ಸಾಧ್ಯವಿಲ್ಲ. ಇವರು ಕೇವಲ ಪ್ರಶ್ನೆ ಮಾಡುವುದಿಲ್ಲ, ಪ್ರತಿಯಾಗಿ ಅಧಿಕಾರಿಗಳನ್ನು– ಜನಪ್ರತಿನಿಧಿಗಳನ್ನು ಕೈಹಿಡಿದು– ಗೋಣಿಡಿದು ನಿಲ್ಲಿಸುತ್ತಾರೆ, ಪರಿಹಾರ ಒತ್ತಾಯಿಸುತ್ತಾರೆ.

ಕರೊನಾ ಮಹಾರೋಗ ತಡೆಯಲು ಲಾಕ್‌ಡೌನ್ ಕ್ರಮವನ್ನು ಭಾರತೀಯರು ಪಾಲಿಸುತ್ತಿದ್ದಾರೆ.'ಅಲ್ಲಿ ಇಲ್ಲಿ' ಕೆಲವು ವ್ಯತ್ಯಯಗಳು ಉಂಟಾಗಿರುವುದನ್ನು ಬಿಟ್ಟರೆ ಜನರು ಹಸಿವು, ನಿರುದ್ಯೋಗ, ದುಸ್ಥಿತಿ ಎಲ್ಲವನ್ನು ಮರೆತು ಮನೆಗಳಲ್ಲಿ ಸ್ವ–ಬಂಧನಕ್ಕೊಳಗಾಗಿದ್ದಾರೆ. ಆದರೆ ಜನರು ಹಸಿವನ್ನು ಎಷ್ಟು ದಿನ ತಡೆದುಕೊಂಡಾರು? ಸರ್ಕಾರಗಳು ಲಾಕ್‌ಡೌನ್ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಿವೆ. ಮಾಸ್ಕ್ ಹಾಕಿಕೊಳ್ಳುವ ಬಗ್ಗೆ, ಸಾಮಾಜಿಕ ಅಂತರದ ಬಗ್ಗೆ, ಸ್ಯಾನಿಟೈಸರ್ ಬಗ್ಗೆ, ಸೋಪಿನಿಂದ ಕೈತೊಳೆದುಕೊಳ್ಳುವ ಬಗ್ಗೆ ಅಮಿತಾಬ್ ಬಚನ್ ಸರ್ಕಾರದ ಪರವಾಗಿ ದಿನಕ್ಕೆ ಹತ್ತಾರು ಭಾರಿ ಟಿವಿಯಲ್ಲಿ ಉಪದೇಶ ನೀಡುತ್ತಿದ್ದಾರೆ. ಆದರೆ 'ದುಡಿದರೆ ಕೂಳು; ಇಲ್ಲದಿದ್ದರೆ ಖಾಲಿಹೊಟ್ಟೆ' ಎನ್ನುವ ಸ್ಥಿತಿಯಲ್ಲಿರುವ ಕೋಟ್ಯಾವಧಿ 'ದಿನಗೂಲಿ ದುಡಿಮೆಗಾರರ ಭಾರತ'ವು ಲಾಕ್‌ಡೌನ್ ಹೇಗೆ ಎದುರಿಸಬೇಕು ಎಂಬುದರ ಬಗ್ಗೆ ಯಾರೂ ಸೂಚನೆಗಳನ್ನು ನೀಡುತ್ತಿಲ್ಲ. ಟಿವಿಗಳಂತೂ ದಿನನಿತ್ಯ 'ಜನರಿಗೆ ಬುದ್ಧಿಯಿಲ್ಲ','ಈ ಜನರಿಗೆ ಯಾವಾಗ ಬುದ್ಧಿಬರುತ್ತೋ', 'ಸಾಮಾಜಿಕ ಅಂತರ ಕಾಯ್ದುಕೊಳ್ಳುತ್ತಿಲ್ಲ' ಎಂದು ಬಾಯಿಗೆ ಬಂದಹಾಗೆ ರೇಷನ್‌ಗಾಗಿ, ಆಹಾರಕ್ಕಾಗಿ, ಹಾಲಿಗಾಗಿ ಸರದಿಯಲ್ಲಿ ಮುಗಿಬಿದ್ದ ಬಡ–ಅರೆಹೊಟ್ಟೆ ದುಡಿಮೆಗಾರರನ್ನು ಹೀಯಾಳಿಸುತ್ತಿವೆ. ಆದರೆ ಲಾಕ್‌ಡೌನಾಗಿ 15–16 ದಿನ ಕಳೆದರೂ ದಿನಗೂಲಿಗಳಿಗೆ, ಕೂಲಿಕಾರರಿಗೆ, ಕೆಲಸ ಕಳೆದುಕೊಂಡ ವಲಸಿಗರಿಗೆ, ಅವರ ಹೆಣ್ಣು ಮಕ್ಕಳಿಗೆ ಹೇಗೆ ರೇಷನ್ ವಿತರಿಸಬೇಕು, ಔಷಧಿ ನೀಡಬೇಕು, ಮಾಸ್ಕ್ ನೀಡಬೇಕು ಎಂಬುದರ ಬಗ್ಗೆ ಸರ್ಕಾರ ಚಕಾರವೆತ್ತುತ್ತಿಲ್ಲ.

ಲಾಕ್‌ಡೌನ್ ಎಲ್ಲಿ ಬಿಗಿಗೊಳಿಸಬೇಕು, ಎಲ್ಲಿ ಎಷ್ಟು ಏನು ಸಡಿಲಿಸಬೇಕು ಎಂಬುದರ ಬಗ್ಗೆ ದಿನನಿತ್ಯ ಭಜನೆ ಮಾಡಲಾಗುತ್ತಿದೆ. ಇದು ಏನೇ ಆಗಲಿ, ಮೂರಾಬಟ್ಟೆಯಾಗಿರುವ ಬಡವರ ಬದುಕನ್ನು ಮತ್ತೆ ಹೇಗೆ ಕಟ್ಟಿಕೊಳ್ಳಲು ನೆರವು ನೀಡಬೇಕು, ಇದಕ್ಕೆ ಎಷ್ಟು ಬಂಡವಾಳ ಬೇಕು, ಹಸಿವನ್ನು ಹೇಗೆ ತಡೆಯಬೇಕು, ಆಹಾರವನ್ನು ಹೇಗೆ ಜನರಿಗೆ ತಲುಪಿಸಬೇಕು ಮುಂತಾದವುಗಳನ್ನು ಒಳಗೊಂಡ ಪ್ಯಾಕೇಜ್ ಬಗ್ಗೆ ಪರಮೋಚ್ಛ ನಾಯಕರು ಮಾತನಾಡುತ್ತಿಲ್ಲ. ಕೆಲವೇ ದಿನಗಳಲ್ಲಿ ವಿತ್ತಮಂತ್ರಿ ನಿರ್ಮಲಾಸೀತಾರಾಮನ್ ನೇತೃತ್ವದ ಕಾರ್ಯಪಡೆಯು ಅಂತಹ ಯೋಜನೆಗಳನ್ನು ಪ್ರಕಟಿಸುತ್ತದೆ ಎಂದು ಆಳುವ ವರ್ಗ ದಿನದೂಡುತ್ತಿದೆ. ಇವರಿಗೆ 'ಸಾಮಾನ್ಯ ಸಂದರ್ಭ–ಅಸಮಾನ್ಯ ಸಂದರ್ಭ' ಎಂಬುದರ ನಡುವಿನ ಭಿನ್ನತೆಯ ಪರಿವೆ ಇದ್ದಂತೆ ಕಾಣುತ್ತಿಲ್ಲ. ಅರ್ಥತಜ್ಞೆ ಜಯತಿ ಘೋಷ್ ಹೇಳಿರುವಂತೆ 'ಈ ಬಗ್ಗೆ ಗಮನ ನೀಡುವುದಿರಲಿ, ಅವರು ಯೋಚಿಸುತ್ತಲೂ ಇಲ್ಲ' ಎಂಬ ದುಸ್ಥಿತಿ ನಮ್ಮ ಮುಂದಿದೆ. ವೆಲ್ತ್ ಕ್ರಿಯೆಟರ್ಸ್, ವೆಲ್ತ್ ಕ್ರಿಯೇಟರ್ಸ್ ಎಂದು ಬಂಡವಳಿಗರನ್ನು ಹಾಡಿಹರಸುತ್ತಿದ್ದ ಕೇಂದ್ರದ ಮಂತ್ರಿಮಹೋದಯರಿಗೆ ಈಗ ವೆಲ್ತ್‌ಕ್ರಿಯೇಟರ್ಸ್ ಯಾರು ಎಂಬುದರ ಜ್ಞಾನೋದಯವಾಗಿರಬೇಕು! ದುಡಿಮೆಗಾರರ ಭಾರತ ನಿತ್ರಾಣಗೊಂಡರೆ ವೆಲ್ತೂ ಇಲ್ಲ, ವೆಲ್‌ಫೇರೂ ಇಲ್ಲ, ಸ್ವಾಮಿ!

ಕರೋನಾ ಮಹಾ ದುರಂತದ ಪರಿಣಾಮವಾಗಿ ಬಡತನದ ರೇಖೆಯ ಮೇಲೆ ಅಥವಾ ಅದರಿಂದ ಸ್ವಲ್ಪ ಮೇಲಿದ್ದವರೆಲ್ಲ ಇಂದು ಬಡತನದ ರೇಖೆಯ ಕೆಳಗೆ ಬೀಳುತ್ತಿದ್ದಾರೆ.ಕರೋನಾ ಬಡವರನ್ನು ಹುಟ್ಟುಹಾಕುತ್ತಿದೆ. ಭಾರತವು ಯಶಸ್ವಿಯಾಗಿ ಬಡತನವನ್ನು ನಿವಾರಿಸುವ ದಿಶೆಯಲ್ಲಿ ಕಾರ್ಯನಿರತವಾಗಿತ್ತು. ಒಂದು ಅಂದಾಜಿನ ಪ್ರಕಾರ 2006 ರಿಂದ 2016 ಅವಧಿಯಲ್ಲಿ 27 ಕೋಟಿ ದುಡಿಮೆಗಾರರನ್ನು ಬಡತನ ರೇಖೆಯಿಂದ ಮೇಲೆತ್ತಿತ್ತು. ಈಗ ಇವರೆಲ್ಲರೂ ರೇಖೆಯ ಕೆಳಗೆ ಬೀಳುತ್ತಾರೆ.ಇದುವರೆವಿಗೂ ಬಡತನದ ರೇಖೆಯ ಕೆಳಗಿದ್ದವರನ್ನು ಒಂದು ರೀತಿಯ ಭ್ರಮೆಗೆ ತಳ್ಳಿ, ಭಾವನಾತ್ಮಕ ಸಂಗತಿಗಳನ್ನು ಕೆರಳಿಸಿ, ಬಡತನವನ್ನು ಸಹಿಸಿಕೊಳ್ಳುವಂತೆ ಮನವೊಲಿಸಿ, ಸಮಸ್ಯೆಯಲ್ಲದ ಸಂಗತಿಗಳನ್ನು ಸಮಸ್ಯೆಗಳನ್ನಾಗಿ ಮಾಡಿ ಆಳುವ ವರ್ಗ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿತ್ತು. ಆದರೆ ಇಂದು ಬಡತನದ ಒಳರಚನೆ ಬದಲಾಗುತ್ತಿದೆ. ಮಧ್ಯಮ ಅಥವಾ ಅರೆಮಧ್ಯಮ ವರಮಾನದ ಜನರೆಲ್ಲ ಬಡತನದ ರೇಖೆಯ ವ್ಯಾಪ್ತಿಗೆ ಬರುತ್ತಾರೆ. ಐ.ಎಲ್.ಒ ನಡೆಸಿದ ಕೋವಿಡ್ ಪರಿಣಾಮದ ಅಧ್ಯಯನದ ಪ್ರಕಾರ ಭಾರತದಲ್ಲಿ 40 ಕೋಟಿ ದುಡಿಮೆಗಾರರು ನಿರುದ್ಯೋಗಿಗಳಾಗುತ್ತಾರೆ.

ಕೋವಿಡ್–ಪೂರ್ವದ ಮತ್ತು ಕೋವಿಡೋತ್ತರ ಬಡವರು

ಹೀಗೆ ಬಡವರಾದ ಜನರ ಅತೃಪ್ತಿ–ಅಸಮಧಾನ–ಅಸಂತೋಷವನ್ನು ಭ್ರಮೆಗೆ ಸಿಲುಕಿಸಿಭಾವನೆ ಕೆರಳಿಸಿ ಸುಮ್ಮನಿರಿಸಲು ಸಾಧ್ಯವಿಲ್ಲ. ಕೋವಿಡ್ ಪೂರ್ವದ ಬಡವರಂತೆ ಕೊವಿಡೋತ್ತರ ಬಡವರಿಗೆ 'ಹಸಿವ'ವನ್ನು ತಡೆಯುವ ತಾಳ್ಮೆಯಾಗಲಿ ಅಥವಾ ವಿಧಿಯ ಮೊರೆ ಹೋಗುವ ವಾಡಿಕೆಯಾಗಲಿ ಇವರಲ್ಲಿ ಇಲ್ಲ. ಈ ಎರಡು ಬಗೆಯ ಬಡವರಲ್ಲಿನ ಭಿನ್ನತೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಹೀಗೆ ಕರೋನಾದ ಪರಿಣಾಮವಾಗಿ ಬಡವರಾದ ಜನರೂ ರೇಷನ್ ಅಂಗಡಿಗಳ ಮುಂದೆ ಸರದಿ ಸಾಲಿನಲ್ಲಿ ನಿಲ್ಲುತ್ತಾರೆ. ಇವರ ಸಿಟ್ಟು ಕೇವಲ ಬಾಯಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಈ ಹೊಸ ಬಡವರ ಸಿಟ್ಟು ಅವರ ರಟ್ಟೆಗೆ ಬಂದರೆ ಏನಾಗುತ್ತದೆ ಎಂಬುದನ್ನು ಹೇಳುವುದು–ಊಹಿಸುವುದು ಸಾಧ್ಯವಿಲ್ಲ. ಇವರು ಕೇವಲ ಪ್ರಶ್ನೆ ಮಾಡುವುದಿಲ್ಲ, ಪ್ರತಿಯಾಗಿ ಅಧಿಕಾರಿಗಳನ್ನು–ಜನಪ್ರತಿನಿಧಿಗಳನ್ನು ಕೈಹಿಡಿದು–ಗೋಣಿಡಿದು ನಿಲ್ಲಿಸುತ್ತಾರೆ, ಪರಿಹಾರ ಒತ್ತಾಯಿಸುತ್ತಾರೆ. ಆರ್ಥಿಕತೆಯಲ್ಲಿ ಸಾಮಾನ್ಯ ಸ್ಥಿತಿಯಿದ್ದ 2017–18 ಮತ್ತು 2018–19ನೆಯ ಸಾಲುಗಳಲ್ಲಿ ಇದನ್ನುಶಿಸ್ತುಬದ್ಧವಾಗಿ ನಿರ್ವಹಿಸದೆ ಅದನ್ನು ನೆಲೆಕಚ್ಚುವಂತೆ ಮಾಡಲಾಗಿತ್ತು. ನೋಟು ಅಮಾನ್ಯೀಕರಣದ ಕ್ರೂರ ಛಾಯೆ ಈಗಲೂ ನಮ್ಮನ್ನು ಕಾಡುತ್ತಿದೆ. ಕೋವಿಡ್ ದುರಂತವು ಒಂದು ವಿಪತ್ತಾದರೆ ಆರ್ಥಿಕ ದುಸ್ಥಿತಿಯು ಸರ್ಕಾರದ ಸ್ವಯಂಕೃತಾಪರಾಧವಾಗಿದೆ. ಕೋವಿಡೊತ್ತರ ಬಡವರು ಪತ್ರಿಕೆಗಳಲ್ಲಿ–ಟೀವಿಗಳಲ್ಲಿ ಬರುವ 'ಸುಳ್ಳುಗಳನ್ನು'–'ಸರ್ಕಾರದ ಭಜನೆ'ಯನ್ನು ನಂಬುವುದಿಲ್ಲ.

ಆರ್ಥಿಕತೆಯ ಪುನರ್‌ನಿರ್ಮಾಣ

ಕೋವಿಡೋತ್ತರ ಭಾರತೀಯ ಆರ್ಥಿಕತೆಯ ಪುನರ್ ನಿರ್ಮಾಣ ಸುಲಭವಾದ ಕಾರ್ಯವಲ್ಲ. ಏಕೆಂದರೆ ಲಾಕ್‌ಡೌನ್ ನಂತರವೂ ಕರೋನಾದ ಭಯ ಇದ್ದೆ ಇರುತ್ತದೆ. ನಗರ ಪ್ರದೇಶದಲ್ಲಿದ್ದ ವಲಸಿಗ ದುಡಿಮೆಗಾರರೆಲ್ಲ ಗ್ರಾಮಗಳಿಗೆ ಹಿಂತಿರುಗಿದ್ದಾರೆ. ಕಾರ್ಖಾನೆಗಳೆಲ್ಲ ಸ್ತಬ್ಧವಾಗಿವೆ. ಕಚ್ಚಾಸಾಮಗ್ರಿ ಹೊಂದಿಸಿಕೊಳ್ಳುವುದು ಇವುಗಳಿಗೆ ದೊಡ್ಡ ಸಾಹಸದ ಕಾರ್ಯವಾಗುತ್ತದೆ. ಇವುಗಳ ಕೈಯಲ್ಲಿ ಹಣವಿಲ್ಲ. ಹೀಗಾಗಿ ನೆಲಕಚ್ಚಿರುವ ಕಾರ್ಖಾನೆಗಳನ್ನು ಪುನರಾರಂಭ ಮಾಡುವುದು ಕಷ್ಟದ ಕೆಲಸ. ಇವುಗಳಿಗೆ ಕಾರ್ಯಕಾರಿ ಬಂಡವಾಳ ನೀಡುವ ಸ್ಥಿತಿಯಲ್ಲಿ ಬ್ಯಾಂಕುಗಳಿಲ್ಲ. ಈಗಾಗಲೆ ರಫ್ತು ವ್ಯಾಪಾರ ತಳಮಟ್ಟ ತಲುಪಿದೆ. ಉಳಿತಾಯ–ಬಂಡವಾಳ ಹೂಡಿಕೆ ಪ್ರಮಾಣವು 2011–12ರಲ್ಲಿ ಜಿಡಿಪಿಯ ಶೇ. 34 ರಷ್ಟಿದ್ದುದು 2018–19ರಲ್ಲಿ ಶೇ. 29ಕ್ಕಿಳಿದಿದೆ. ಕಳೆದ ಎರಡು–ಮೂರು ವರ್ಷಗಳಲ್ಲಿ ಆರ್ಥಿಕ ನಿರ್ವಹಣೆಯಲ್ಲಿ ವೈಫಲ್ಯದಿಂದಾಗಿ ಜನರ ಮಾಸಿಕ ತಲಾ ಅನುಭೋಗ ವೆಚ್ಚವು 2011–12 ರಲ್ಲಿದ್ದ ರೂ.1500 ರಷ್ಟಿದ್ದುದು 2017–18ರಲ್ಲಿ ರೂ.1440ಕ್ಕಿಳಿದಿದೆ. ಕೋವಿಡ್ ದುರಂತದಿಂದಾಗಿ ಇದು ಇನ್ನಷ್ಟು ಕೆಳಗೆ ಇಳಿಯುತ್ತದೆ. ಕೋವಿಡ್ ಪೂರ್ವದಲ್ಲಿಯೇ ಆರ್ಥಿಕತೆಯಲ್ಲಿನ ನಿರುದ್ಯೋಗ ಪ್ರಮಾಣ ಕಳೆದ 40 ವರ್ಷಗಳಲ್ಲಿ ಅತ್ಯಧಿಕ ಎಂದು ಸರ್ಕಾರವೇ ನಡೆಸಿದ ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೇ ಬಹಿರಂಗ ಪಡಿಸಿದೆ. ಕೋವಿಡ್ ಪೂರ್ವದಲ್ಲಿಯೇ ಜಿಡಿಪಿ ಬೆಳವಣಿಗೆ ದರವು ಶೇ. 5 ಕ್ಕಿಂತ ಕೆಳಗಿಳಿದಿತ್ತು. ಈ ಹಿನ್ನೆಲೆಯಲ್ಲಿ ಕೋವಿಡ್‌ನಿಂದ ನುಚ್ಚುನೂರಾಗಿರುವ ಆರ್ಥಿಕತೆಯನ್ನು, ಮೂರಾಬಟ್ಟೆಯಾಗಿರುವ 40 ಕೋಟಿ ದುಡಿಮೆಗಾರರ ಭಾರತವನ್ನು ಪುನರ್‌ನಿರ್ಮಾಣ ಮಾಡುವುದು ಹಿಮಾಲಯ ಸದೃಶ ಸಾಹಸವಾಗಿದೆ. ಈಗ ಸರ್ಕಾರ ಏನು ಮಾಡಬಹುದು ಎಂಬ ಕೆಲವು ಸೂಚನೆಯಲ್ಲಿ ಇಲ್ಲಿ ನೀಡಲಾಗಿದೆ.

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ

- ಮೊಟ್ಟಮೊದಲನೆಯದಾಗಿ ಕೋವಿಡ್‌ನಿಂದಾಗಿ ಆರ್ಥಿಕತೆಯ ಮೇಲಾಗಿರುವ ದುಷ್ಪರಿಣಾಮವನ್ನು ಪ್ರಾಮಾಣಿಕವಾಗಿ ಮೌಲ್ಯಮಾಪನ ಮಾಡಬೇಕು. ಇದು ಸರ್ಕಾರಿ ಅರ್ಥಶಾಸ್ತ್ರಜ್ಞರಿಂದ ಅಥವಾ ಸರ್ಕಾರದ ಭಜನಾಮಂಡಳಿ ತಜ್ಞರಿಂದ ಸಾಧ್ಯವಿಲ್ಲ. ಸ್ವತಂತ್ರ ಅರ್ಥಶಾಸ್ತ್ರಜ್ಞರನ್ನು–ಸಮಾಜಶಾಸ್ತ್ರಜ್ಞನ್ನು ಒಳಗೊಂಡ ಸಮಿತಿಯಿಂದ ಇದು ನಡೆಯಬೇಕು.
- ಇದರ ಆಧಾರದ ಮೇಲೆ ದುಡಿಮೆಗಾರರ ಬ ಾರತವನ್ನುಕೇಂದ್ರವಾಗಿಟ್ಟುಕೊಂಡು ಪ್ಯಾಕೇಜ್ ಪ್ರಕಟಿಸಬೇಕು.
- ತಕ್ಷಣ ಮನರೇಗಾ ಯೋಜನೆಗೆ ಪ್ರಸ್ತುತ ಸಾಲಿನಲ್ಲಿ ಕನಿಷ್ಟ ರೂ. 1 ಲಕ್ಷ ಕೋಟಿ ಅನುದಾನ ಬಿಡುಗಡೆ ಮಾಡಬೇಕು.
- ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರೀತಿಯ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ಪ್ರಕಟಿಸಬೇಕು. ಇದಕ್ಕೂ ರೂ. 1 ಲಕ್ಷ ಕೋಟಿ ಅನುದಾನ ಬಿಡುಗಡೆ ಮಾಡಬೇಕು(ಅಜೀಮ್ ಪ್ರೇಮ್ ಜಿ ವಿಶ್ವವಿದ್ಯಾಲಯವು ತನ್ನ 'ಸ್ಟೇಟಸ್ ಆಫ್ ವರ್ಕಿಂಗ್ ಇಂಡಿಯಾ' ವರದಿಯ ಮೂಲಕ ಇದನ್ನು ಶಿಫಾರಸ್ಸು ಮಾಡುತ್ತಿದೆ).
- ಯಾರನ್ನು ಕಳೆದ ಎರಡು ವರ್ಷಗಳಿಂದ ವೆಲ್ತ್ ಕ್ರಿಯೆಟರ್ಸ್ ಎಂದು ಬಂಡವಳಿಗರನ್ನು ತೆರಿಗೆ ವಿನಾಯಿತಿ ಮೂಲಕ, ತೆರಿಗೆ ರದ್ದು ಮಾಡುವುದರ ಮೂಲಕ ವೈಭವೀಕರಿಸಲಾಗುತ್ತಿತ್ತೋ ಇದನ್ನು ನಿಲ್ಲಿಸಬೇಕು. ಕೋವಿಡ್ ದುರಂತದ ಹಿನ್ನೆಲೆಯಲ್ಲಿ ವರಮಾನ ತೆರಿಗೆ, ಕಾರ್ಪೋರೇಟ್ ತೆರಿಗೆ ಮುಂತಾದ ಪ್ರತ್ಯಕ್ಷ ತೆರಿಗೆ ದರಗಳನ್ನು ಹೆಚ್ಚಿಸಬೇಕು.
- ಈ.ಎಸ್.ಟಿಯನ್ನು ಇನ್ನಿಲ್ಲದಂತೆ ಕ್ರಾಂತಿಕಾರಕ ಎಂದು ಬಣ್ಣಿಸಿದ್ದು ಸಾಕು. ಈ ತೆರಿಗೆಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ದರಗಳನ್ನು ಕೆಳಮಟ್ಟದಲ್ಲಿ ಇಟ್ಟುಕೊಳ್ಳಬೇಕು. ಜಿಎಸ್‌ಟಿಯಲ್ಲಿ ರಾಜ್ಯಗಳ ಪಾಲನ್ನು ಕಾಲಬದ್ಧವಾಗಿ ರಾಜ್ಯಗಳಿಗೆ ನೀಡಬೇಕು. ಏಕೆಂದರೆ ಇದು ಅಪ್ರತ್ಯಕ್ಷ–ಬಡವರ ಮೇಲಿನ ತೆರಿಗೆ.
- ಕಳೆದ 5–6 ವರ್ಷಗಳಿಂದ ನಮ್ಮ ಸಂವಿಧಾನದ ಅಭಿಜಾತ ಸ್ವರೂಪವಾದ ಒಕ್ಕೂಟ ವ್ಯವಸ್ಥೆಯನ್ನು ಶಿಥಿಲಗೊಳಿಸಲಾಗುತ್ತಿದೆ. ಜಿ.ಎಸ್.ಟಿ, ಬ್ಯಾಂಕುಗಳ ವಿಲೀನ ಕ್ರಮ, 15ನೆಯ ಹಣಕಾಸು ಆಯೋಗದ ವಿಕೃತ ಶಿಫಾರಸ್ಸುಗಳು, ಸಂವಿಧಾನಾತ್ಮಕ ಸಂಸ್ಥೆಗಳ ಸ್ವಾಯತ್ತತೆಯ ಮೇಲಿನ ಆಕ್ರಮಣ ಮುಂತಾದವು ಇದಕ್ಕೆ ನಿದರ್ಶನಗಳು. ಜನರ ಕಷ್ಟಕಾರ್ಪಣ್ಯಗಳನ್ನು ನೇರವಾಗಿ ಎದುರಿಸುವುದು ಹಾಗೂ ನಿವಾರಿಸಬೇಕಾದುದು ರಾಜ್ಯ ಸರ್ಕಾರಗಳು.

ಪುಟ 10 ನೋಡಿ

ಕೊವಿಡ್–19 ಮಹಾಮಾರಿಯ ವಿರುದ್ಧ ಸಮರ ಗೆಲ್ಲಲು ಕೇಂದ್ರೀಕರಣ, ಸರ್ವಾಧಿಕಾರಶಾಹಿ ಧೋರಣೆಯ ಅಡಚಣೆ



ಪ್ರಕಾಶ ಕಾರಟ್

ಕೊರೊನ ವೈರಸ್ ಬಿಕ್ಕಟ್ಟು ರಾಜ್ಯಗಳು ಭಿಕ್ಷಾಂದೇಹಿ ಎಂಬಂತಹ ಸ್ಥಿತಿಯನ್ನು ಎತ್ತಿ ತೋರಿಸಿದೆ. ಅಧಿಕಾರಗಳ ಮತ್ತು ಸಂಪನ್ಮೂಲಗಳ ಸತತ ಕೇಂದ್ರೀಕರಣ ಮತ್ತು ಇದರ ಜೊತೆಗೆ ರಾಜ್ಯಗಳ ಮೇಲೆ ಸವಾರಿ ಮಾಡುವ ಮೋದಿ ಸರಕಾರದ ಸರ್ವಾಧಿಕಾರಶಾಹಿ ಕಣ್ಣೋಟ ಕೊವಿಡ್ ವಿರುದ್ಧ ಸಮರದಲ್ಲಿ ಎಲ್ಲ ರಾಜ್ಯ ಸರಕಾರಗಳಿಗೂ ತೀವ್ರ ಅಡಚಣೆಗಳನ್ನು ಒಡ್ಡಿದೆ. ಈ ಸಮರವನ್ನು ಎದುರಿಸುವಲ್ಲಿ ಯಶಸ್ಸಿನ ನಿರೀಕ್ಷೆಯು ರಾಜ್ಯಗಳೊಂದಿಗೆ ಒಂದು ಪೂರ್ಣ ಮತ್ತು ಸಹಕಾರಿ ಭಾಗೀದಾರಿಕೆಯಿಂದ ಮಾತ್ರವೇ ಈಡೇರಲು ಸಾಧ್ಯ ಎಂಬುದನ್ನು ಮೋದಿ ಸರಕಾರ ಅರಿಯಬೇಕಾಗಿದೆ.



ಭಾರತದಲ್ಲಿ ಕೊವಿಡ್–19 ಮಹಾಮಾರಿಯ ವಿರುದ್ಧ ಹೋರಾಟದಲ್ಲಿ ರಾಜ್ಯ ಸರಕಾರಗಳ ಒಂದು ದೊಡ್ಡ ಪ್ರಯತ್ನದ ಅಗತ್ಯವಿದೆ. ಏಕೆಂದರೆ ಈ ಕಾಯಿಲೆಯನ್ನು ಮತ್ತು ಅದರ ಆರ್ಥಿಕ, ಸಾಮಾಜಿಕ ಪರಿಣಾಮಗಳನ್ನು ಎದುರಿಸುವ ಮುಖ್ಯ ವೆಚ್ಚವನ್ನು ಹೊರಬೇಕಾದ್ದು ಮತ್ತು ಮಾನವ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕಾದ್ದು ರಾಜ್ಯ ಸರಕಾರಗಳೇ. ಅವು ಆರೋಗ್ಯಪಾಲನೆ ಸೌಕರ್ಯಗಳ ಪ್ರಮಾಣವನ್ನು ಹೆಚ್ಚಿಸಬೇಕಾಗುತ್ತದೆ, ಲಾಕ್‌ಡೌನ್ ನಾಲ್ಕನೇ ವಾರ ಪ್ರವೇಶಿಸುತ್ತಿರುವಂತೆ ದುಡಿಯುವ ಜನಗಳಿಗೆ ಮತ್ತು ಸಮಾಜದ ಇತರ ವಿಭಾಗಗಳಿಗೆ ಉಚಿತ ಆಹಾರಧಾನ್ಯಗಳನ್ನು ಮತ್ತು ಆವಶ್ಯಕ ಪೂರೈಕೆಗಳನ್ನು ಒದಗಿಸಬೇಕಾಗುತ್ತದೆ ಮತ್ತು ಆದಾಯ ಬೆಂಬಲವನ್ನು ಕೊಡಬೇಕಾಗುತ್ತದೆ.

ಆದರೆ ಈ ಸಮರದಲ್ಲಿ ಎಲ್ಲ ರಾಜ್ಯ ಸರಕಾರಗಳಿಗೂ ತೀವ್ರ ಅಡಚಣೆಗಳಿವೆ. ಏಕೆಂದರೆ ಅವು ತೀವ್ರ ಹಣಕಾಸಿನ ಅಭಾವವನ್ನು ಎದುರಿಸುತ್ತಿವೆ. ಲಾಕ್‌ಡೌನಿನ ಆರಂಭದಲ್ಲಿ ಕೇಂದ್ರ ಸರಕಾರ ಪ್ರಕಟಿಸಿದ ರೂ.1.7 ಲಕ್ಷ ಕೋಟಿ ರೂ.ಗಳ ಅತ್ಯಂತ ಜಿಪುಣ ಪ್ಯಾಕೇಜ್ ನಿಜವಾಗಿ ರಾಜ್ಯಗಳಿಗೆ ಯಾವುದೇ ಹೆಚ್ಚುವರಿ ನಿಧಿಗಳನ್ನು ಕೊಟ್ಟಿಲ್ಲ. ಅದರಲ್ಲಿ ಅರ್ಧಕ್ಕಿಂತ ಹೆಚ್ಚು, ರೈತರಿಗೆ 'ಪಿಎಂ ಕಿಸಾನ್ ಯೋಜನಾ'ದ ಅಡಿಯಲ್ಲಿ ರೂ.2000 ಮುಂತಾದವು ಈ ಮೊದಲೇ ಬಜೆಟಿನಲ್ಲಿ ಇದ್ದವುಗಳು. ರಾಜ್ಯಗಳಿಗೆ ಇದುವರೆಗೆ ಸಿಕ್ಕಿರುವುದು ಅವುಗಳಿಗೆ ರಾಷ್ಟ್ರೀಯ ಆರೋಗ್ಯ ಮಿಶನ್ ಅಡಿಯಲ್ಲಿ ಸಲ್ಲಬೇಕಾದ್ದು ಮಾತ್ರ ಮತ್ತು ಜಿಎಸ್‌ಟಿಯ ಪರಿಹಾರ ಬಾಕಿ ಬರಬೇಕಾದ್ದರಲ್ಲಿ ಒಂದು ಭಾಗ ಮಾತ್ರ.

ಕೊರೊನ ವೈರಸ್ ಸಾಂಕ್ರಾಮಿಕವನ್ನು ನಿರ್ವಹಿಸಲು ಹೆಚ್ಚುವರಿ ನಿಧಿಗಳನ್ನು ಅಥವ ಅನುದಾನಗಳನ್ನು ಕೊಟ್ಟಿಲ್ಲ ಮಾತ್ರವಲ್ಲ, ಕೇಂದ್ರ ಸರಕಾರ ವಿವಿಧ ಬಾಬ್ತುಗಳಲ್ಲಿ ರಾಜ್ಯಗಳಿಗೆ ಸಲ್ಲಬೇಕಾದ್ದನ್ನು ಕೂಡ ಕೊಟ್ಟಿಲ್ಲ. ಇವುಗಳಲ್ಲಿ ಎರಡು– ಕನಿಷ್ಟ ಎರಡು ತಿಂಗಳ ಜಿಎಸ್‌ಟಿ ಪರಿಹಾರ ಬಾಕಿ ಮತ್ತು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಸ್ಕೀಮಿನಲ್ಲಿ ಕೊಡಬೇಕಾದ ಸಾವಿರಾರು ಕೋಟಿ ರೂ.ಗಳು.

ಕೊರೊನ ವೈರಸ್ ಬಿಕ್ಕಟ್ಟು ರಾಜ್ಯಗಳು ಭಿಕ್ಷಾಂದೇಹಿ ಎಂಬಂತಹ ಸ್ಥಿತಿಯನ್ನು ಎತ್ತಿ ತೋರಿಸಿದೆ. ಅಧಿಕಾರಗಳ ಮತ್ತು ಸಂಪನ್ಮೂಲಗಳ ಸತತ ಕೇಂದ್ರೀಕರಣ ರಾಜ್ಯಗಳಿಗೆ ಇದ್ದ ಅಲ್ಪ–ಸ್ವಲ್ಪ ಹಣಕಾಸು ಅಧಿಕಾರಗಳನ್ನು ಮತ್ತು ಸಂಪನ್ಮೂಲಗಳನ್ನೂ ಕಿತ್ತುಕೊಂಡಿದೆ. ಜಿಎಸ್‌ಟಿ ಯನ್ನು ತರುವುದರೊಂದಿಗೆ, ಸರಕುಗಳ ಮೇಲೆ ಯಾವುದೇ ತೆರಿಗೆಗಳನ್ನು ವಿಧಿಸುವ ಅಧಿಕಾರದಿಂದ ರಾಜ್ಯಗಳನ್ನು ವಂಚಿಸಲಾಗಿದೆ, ಅಲ್ಲದೆ ತೆರಿಗೆ ದರಗಳನ್ನು ನಿರ್ಧರಿಸುವಲ್ಲಿಯೂ ಅದರ ಮಾತಿಗೆ ಹೆಚ್ಚೇನೂ ಬೆಲೆಯಿಲ್ಲ, ಏಕೆಂದರೆ ಜಿಎಸ್‌ಟಿ ಮಂಡಳಿಯಲ್ಲಿ ಕೇಂದ್ರ ಸರಕಾರದ್ದೇ ಪ್ರಾಬಲ್ಯ. ಇದರ ಜೊತೆಗೆ ರಾಜ್ಯಗಳ ಮೇಲೆ ಸವಾರಿ ಮಾಡುವ ಮೋದಿ ಸರಕಾರದ ಸರ್ವಾಧಿಕಾರಶಾಹಿ ಕಣ್ಣೋಟ.

ಈ ಕೇಂದ್ರೀಕರಣದ ಮತ್ತು ಪ್ರಜಾಪ್ರಭುತ್ವ–ವಿರೋದಿ ನಿಲುವಿನ ಒಂದು ಉದಾಹರಣೆಯೆಂದರೆ, ಸಿಎಸ್‌ಆರ್(ಕಾರ್ಪೊರೇಟ್ ಹಣಕಾಸು ಹೊಣೆಗಾರಿಕೆ) ನಿಧಿಗಳನ್ನು ರಾಜ್ಯ ಮುಖ್ಯಮಂತ್ರಿಗಳ ನಿಧಿಗಳಿಗೆ ನಿರಾಕರಿಸಿರುವುದು. ಕೇವಲ ಇತ್ತೀಚೆಗಷ್ಟೇ ರಚಿಸಿರುವ 'ಪಿಎಂ ಕೇರ್' ನಿಧಿಗೆ ಕೊಡುವ ದೇಣಿಗೆಗಳಷ್ಟೇ ಸಿಎಸ್‌ಆರ್ ನಿಧಿಗಳಾಗಲು ಅರ್ಹವಾಗುತ್ತವೆ. ಕೊವಿಡ್ ಪರಿಹಾರ ದೇಣಿಗೆಗಳ ವಿಷಯದಲ್ಲೂ ರಾಜ್ಯಗಳ ವಿರುದ್ಧ ತಾರತಮ್ಯ ಮಾಡಲಾಗಿದೆ.

ಕೇಂದ್ರದಲ್ಲಿ ಬಂದ ಸರಕಾರಗಳೆಲ್ಲವೂ ಅನುಸರಿಸುವ ನವ–ಉದಾರವಾದಿ ಧೋರಣೆಗಳಿಂದಾಗಿ ಹಣಕಾಸು ಬಂಡವಾಳದ ಹಿತ ಸಾಧಿಸುವ ಹಣಕಾಸು ಧೋರಣೆಗಳು ಮಾತ್ರವೇ ಜಾರಿಗೆ ಬಂದಿವೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡಕ್ಕೂ ಒಂದು ನಿಷ್ಠುರ ಹಣಕಾಸು ಮಿತಿಯನ್ನು ಹಾಕಲಾಗಿದೆ. ಎಫ್‌ಆರ್‌ಬಿಎಂ ಕಾಯ್ದೆಯ ಅಡಿಯಲ್ಲಿ , ರಾಜ್ಯಗಳ ವೆಚ್ಚ ಆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ(ಜಿಎಸ್‌ಡಿಪಿ)ದ 3ಶೇ. ಮಿತಿಯನ್ನು ಮೀರುವಂತಿಲ್ಲ. ಈ ಹಣಕಾಸು ಕೊರತೆ ಮಿತಿಯನ್ನು ತನಗೂ ಸಡಿಲಿಸಲು ನಿರಾಕರಿಸುತ್ತಿರುವ ಕೇಂದ್ರ ಸರಕಾರ ರಾಜ್ಯಗಳಿಗೆ ಹೆಚ್ಚು ಸಾಲಗಳನ್ನು ತರುವ ಮೂಲಕ ಹಣ ಎತ್ತಲು ದಾರಿಗಳೇ ಇಲ್ಲದಂತೆ ಮಾಡಿದೆ.

ಹಲವು ರಾಜ್ಯಗಳು ಕೇಂದ್ರ ತನ್ನ ಪ್ಯಾಕೇಜಿನ ಮೂಲಕ ಪ್ರಕಟಿಸಿದ್ದಕ್ಕಿಂತ ಎಷ್ಟೋ ಹೆಚ್ಚು ಪರಿಹಾರಗಳನ್ನು ಜನಗಳಿಗೆ ಕೊಟ್ಟಿವೆ; ಕೆಲವು ಜನವಿಭಾಗಗಳಿಗೆ ನಗದು ವರ್ಗಾವಣೆಗಳು; ಹೆಚ್ಚಿನ ರೇಷನ್ ಕೋಟಾಗಳು; ಪೆನ್ಶನ್‌ಗಳ ಮುಂಗಡ ಪಾವತಿ ಮತ್ತು ಇತರ ಕ್ರಮಗಳು ಹಾಗೂ ವಲಸೆ ಕಾರ್ಮಿಕರಿಗೆ ಆಹಾರ ಮತ್ತು ಆಶ್ರಯ. ರಾಜ್ಯಗಳ ಆದಾಯ ಮೂಲಗಳು ಒಣಗಿ ಹೋಗುತ್ತಿರುವ ಸಮಯದಲ್ಲಿ ಈ ಎಲ್ಲ ಖರ್ಚುಗಳನ್ನು ಮಾಡಬೇಕಾಗಿ ಬಂದಿದೆ. ಕೇಂದ್ರದಿಂದ ಯಾವುದೇ ನೆರವಿಲ್ಲದೆ, ಕೆಲವು ರಾಜ್ಯ ಸರಕಾರಗಳು ತನ್ನ ನೌಕರರ ವೇತನಗಳನ್ನು ಕಡಿತ ಮಾಡಿವೆ ಮತ್ತು ಕೆಲವು ಅಭಿವೃದ್ಧಿ ಕಾಮಗಾರಿಗಳನ್ನು ನಿಲ್ಲಿಸಿವೆ.

ರಾಜ್ಯಗಳು ತಮ್ಮ ಸಾಲಗಳನ್ನೆಲ್ಲ ಆರಂಭದಲ್ಲೇ ಖರ್ಚು ಮಾಡಲೇ ಬೇಕಾಗಿ ಬಂದಿದೆ. ಆದರೆ ಹಾಗೆ ಮಾಡುವಾಗ ವಿಪರೀತ ಬಡ್ಡಿದರಗಳನ್ನು ವಿಧಿಸಲಾಗುತ್ತಿದೆ ಎಂದು ಕಂಡು ಬಂತು. ಕೇರಳ ಸರಕಾರದ ಹಣಕಾಸು ಮಂತ್ರಿ ಥಾಮಸ್ ಐಸಾಕ್ ಪ್ರಕಾರ, ಒಂದು 15ವರ್ಷಗಳ ಅವಧಿಯ ರೂ. 6000 ಕೋಟಿ ಮೊತ್ತದ ರಾಜ್ಯ ಅಭಿವೃದ್ಧಿ ಸಾಲಕ್ಕೆ ಪ್ರಯತ್ನಿಸಿದಾಗ, 8.96ಶೇ. ಬಡ್ಡಿಯನ್ನು ತೆರಬೇಕೆಂದು ಹೇಳಲಾಗಿದೆ. ಇದು ರಾಜ್ಯವನ್ನು ಒಂದು ಸಾಲದ ಬಲೆಗೆ ತಳ್ಳುತ್ತದೆ ಎಂದು ಅವರು ಹೇಳುತ್ತಾರೆ. ರಾಜ್ಯಗಳು ರಿಝರ್ವ್ ಬ್ಯಾಂಕಿನಿಂದ ಸಾಲ ತರಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಎಪ್ರಿಲ್ 11ರಂದು ಪ್ರಧಾನ ಮಂತ್ರಿಗಳೊಂದಿಗೆ ವಿಡಿಯೊ ಸಮ್ಮೇಳನದಲ್ಲಿ ಎಲ್ಲ ಮುಖ್ಯಮಂತ್ರಿಗಳೂ ತಕ್ಷಣವೇ ನೆರವು ನೀಡಬೇಕು, ಸಂಪನ್ಮೂಲಗಳನ್ನು ಎತ್ತಲು ಸಾಧ್ಯವಾಗುವಂತಹ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿವೆ. ಆದರೆ ದುರದೃಷ್ಟವೆಂದರೆ, ಲಾಕ್‌ಡೌನನ್ನು ಇನ್ನೂ 18 ದಿನಗಳಿಗೆ ವಿಸ್ತರಿಸುವಾಗಲೂ ಕೇಂದ್ರ ಸರಕಾರ ಈ ಆಗ್ರಹಕ್ಕೆ ಸ್ಪಂದಿಸಿಲ್ಲ.

ಕೊರೊನ ಸಾಂಕ್ರಾಮಿಕದ ವಿರುದ್ಧ ಹೋರಾಟದಲ್ಲಿ ದೇಶ ಒಂದು ನಿರ್ಣಾಯಕ ಸಮಯವನ್ನು ಪ್ರವೇಶಿಸಿದೆ. ಈ ಹೋರಾಟವನ್ನು ನಡೆಸಲು ರಾಜ್ಯಗಳನ್ನು ಹಣಕಾಸು ಮತ್ತು ಸಾಮಗ್ರಿಗಳ ಮೂಲಕ ಸನ್ನದ್ಧಗೊಳಿಸದಿದ್ದರೆ ನಾವು ಮಾನವ ಮತ್ತು ಆರ್ಥಿಕ ನಷ್ಟಗಳು ಇವೆರಡರ ಮೂಲಕವೂ ಭಾರೀ ಬೆಲೆಯನ್ನು ತೆರಬೇಕಾಗುತ್ತದೆ.

ಕೇಂದ್ರ ಸರಕಾರ ಇನ್ನಷ್ಟು ವಿಳಂಬ ಮಾಡದೆ ಈ ಕೆಳಗಿನ ಹೆಜ್ಜೆಗಳನ್ನಿಡಬೇಕು: ರಿಝರ್ವ್ ಬ್ಯಾಂಕಿನಿಂದ ಸಾಲ ತಂದು ರಾಜ್ಯಗಳಿಗೆ ಕೊವಿಡ್–19 ಸಂಬಂಧಿತ ಕೆಲಸಗಳಿಗೆ ಅನುದಾನಗಳನ್ನು ಒದಗಿಸಬೇಕು; ರಾಜ್ಯಗಳ ಸಾಲ ತರುವ ಮಿತಿಯನ್ನು ಜಿಎಸ್‌ಡಿಪಿಯ 5ಶೇ.ಕ್ಕೆ ಏರಿಸಬೇಕು; ರಾಜ್ಯಗಳು ರಿಝರ್ವ್ ಬ್ಯಾಂಕಿನಿಂದ ನೇರವಾಗಿ ಸಾಲ ಪಡೆಯಲು ಸಾಧ್ಯವಾಗಬೇಕು;ವಿವಿಧ ಬಾಬ್ತುಗಳಲ್ಲಿ ರಾಜ್ಯಗಳಿಗೆ ತೆರಬೇಕಾಗಿರುವ ಬಾಕಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು.

ಮೋದಿ ಸರಕಾರ ಕೊವಿಡ್–19 ವೈರಸ್ಸನ್ನು ಎದುರಿಸುವಲ್ಲಿ ಯಶಸ್ಸಿನ ನಿರೀಕ್ಷೆಯು ರಾಜ್ಯಗಳೊಂದಿಗೆ ಒಂದು ಪೂರ್ಣ ಮತ್ತು ಸಹಕಾರಿ ಭಾಗೀದಾರಿಕೆಯಿಂದ ಮಾತ್ರವೇ ಈಡೇರಲು ಸಾಧ್ಯ ಎಂಬುದನ್ನು ಅರಿಯಬೇಕಾಗಿದೆ.

ಜನಗಳಿಗೆ ಏಳು ಸೂತ್ರಗಳು, ಸರಕಾರಕ್ಕೆಷ್ಟು ಸೂತ್ರಗಳು



ಪ್ರಧಾನ ಮಂತ್ರಿಗಳು ಮಾರ್ಚ್ 24ರಂದು ಕೊವಿಡ್–19 ಮಹಾಮಾರಿಯ ವಿರುದ್ಧ ಘೋಷಿಸಿದ್ದ ಮೂರು ವಾರಗಳ ದಿಗ್ಬಂಧನದ ಕೊನೆಯ ದಿನ ಅವರಿಂದ ಮತ್ತೊಂದು ಪ್ರಸಾರ ಭಾಷಣದಲ್ಲಿ ಜನಗಳು ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು. ಲಾಕ್ ಡೌನನ್ನು ವಿಸ್ತರಿಸಲಾಗುವುದು ಎಂಬ ಪ್ರಕಟಣೆ ನಿರೀಕ್ಷಿತವೇ ಆಗಿತ್ತು. ಆದರೂ ಜತೆಗೆ ಈ ಮೂರು ವಾರಗಳಲ್ಲಿ ಎದ್ದು ಬಂದ ಸಮಸ್ಯೆಗಳಿಗೆ ಪರಿಹಾರ ಕ್ರಮಗಳನ್ನೂ ಅವರು ನಿರೀಕ್ಷಿಸಿದ್ದರು.

ಪ್ರಧಾನಿಗಳು ಮೇ 3 ರವರೆಗೆ ಲಾಕ್ ಡೌನನ್ನು ವಿಸ್ತರಿಸುವ ಪ್ರಕಟಣೆ ಮಾಡಿದರು. ಆದರೆ ದುರದೃಷ್ಟವಶಾತ್, ಈ ಮೂರು ವಾರಗಳಲ್ಲಿ ಮಹಾಮಾರಿಯನ್ನು ಎದುರಿಸುವಲ್ಲಿ, ಮತ್ತು ಲಾಕ್‌ಡೌನ್ ನಿಂದಾಗಿ ಜನಗಳ ಜೀವನೋಪಾಯಗಳಿಗೆ ಸಂಬಂಧಪಟ್ಟಂತೆ ಉಂಟಾದ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಏನೂ ಹೇಳಲೇ ಇಲ್ಲ. ಈ ಭಾಷಣದ ವೇಳೆಗೆ ಕೊವಿಡೊ–19 ಮಹಾಮಾರಿಯಿಂದ ಅಧಿಕೃತವಾಗಿ 339 ಸಾವುಗಳು ಸಂಭವಿಸಿವೆ. ಜತೆಗೇ ಈ ಲಾಕ್‌ಡೌನಿನ ಪರಿಣಾಮವಾಗಿ ಇನ್ನೂ 200 ಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ.

ಜನಗಳು ಏಳು ಸೂತ್ರಗಳನ್ನು ಅನುಸರಿಸಬೇಕು ಎಂದು ಹೇಳಿದರು, ಆದರೆ ಈ ಸಮರವನ್ನು ಗೆಲ್ಲಲು ಸರಕಾರ ಎಷ್ಟು ಸೂತ್ರಗಳನ್ನು ಅನುಸರಿಸುತ್ತದೆ ಎಂದು ಮಾತ್ರ ಹೇಳಲಿಲ್ಲ ಎಂದು ಈ ಕುರಿತು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದರು. ಪ್ರಧಾನಿಗಳು "ನಾವು, ಭಾರತದ ಜನತೆ" ಮಹಾಮಾರಿಯನ್ನು ಎದುರಿಸುವಲ್ಲಿ ತಮ್ಮ ಇಚ್ಛಾಶಕ್ತಿಯನ್ನು ತೋರಿಸಿದ್ದಾರೆ ಎಂದು ಹೇಳಿದರು. ನಿಜ, ಜನತೆ ತಮ್ಮ ಕರ್ತವ್ಯ ನೆರವೇರಿಸಿಲ್ಲ ಎಂದು ಯಾರೂ ದೂರುವಂತಿಲ್ಲ. ಆದರೆ ಸರಕಾರ ತನ್ನ ಕರ್ತವ್ಯ ನಿಭಾಯಿಸಿಲ್ಲ ಎಂಬದೇ ನಮ್ಮ ದೂರು, ಅದನ್ನು ಎತ್ತಿದ್ದೇವೆ, ಅದನ್ನು ಸರಿಪಡಿಸಬೇಕು ಎಂದು ಈ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಯೆಚುರಿ ಹೇಳಿದರು. ಎಪ್ರಿಲ್ 15ರಂದು ನೀಡುವುದಾಗಿ ಹೇಳಿದ ಮಾರ್ಗನಿರ್ದೇಶನಗಳಲ್ಲಾದರೂ ಇವು ಇರಬಹುದು ಎಂದು ನಿರೀಕ್ಷಿಸಬೇಕಾಗಿದೆ ಎಂದು ಅವರು ಹೇಳಿದರು.

ಸರಕಾರ ನಿಜವಾಗಿಯೂ ಚುರುಕಾಗಿತ್ತೇ?

ತಮ್ಮ ಸರಕಾರ ಕೊವಿಡ್ ಮಹಾಮಾರಿಯ ಪ್ರಶ್ನೆ ಉಲ್ಬಣಗೊಳ್ಳುವ ವರೆಗೆ ಕಾಯಲಿಲ್ಲ, ತ್ವರಿತ ಕ್ರಮಗಳನ್ನು ಕೈಗೊಂಡು ಈ ಸಮಸ್ಯೆಯನ್ನು ಮೊಳಕೆಯಲ್ಲೇ ನಿಭಾಯಿಸಿತು ಎಂಬುದಾಗಿ ಪ್ರಧಾನಿಗಳು ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು ಎಂದು ಒಬ್ಬ ಪತ್ರಕರ್ತರು ಕೇಳಿದರು. ಬಹುಶಃ ಇದು ಪ್ರಧಾನಿಗಳ ಪ್ರಸಾರ ಭಾಷಣವನ್ನು ಕೇಳಿದ ಹಲವರಲ್ಲಿ ಎದ್ದ ಪ್ರಶ್ನೆ.


ಈ ಬಗ್ಗೆ ನಮಗೆ ಭಿನ್ನಾಭಿಪ್ರಾಯ ಇದೆ ಎಂದು ಯೆಚುರಿ ಹೇಳಿದರು. ವಾಸ್ತವವಾಗಿ ಜನವರಿ 30ರಂದು ಮೊದಲ ಸೋಂಕು ಪತ್ತೆಯಾದರೂ ಕೇಂದ್ರ ಸರಕಾರ ಪೂರ್ಣ ಏಳು ವಾರಗಳ ವರೆಗೂ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ವಿದೇಶೀಯರು ಮತ್ತು ವಿದೇಶಗಳಿಂದ ಮರಳುವ ಭಾರತೀಯರನ್ನು ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ನಡೆಸಬೇಕು ಎಂದು ನಾವು ಹೇಳುತ್ತ ಬಂದಿದ್ದೆವು. ಆದರೆ ಅದನ್ನು ಮಾರ್ಚ್ ಮಧ್ಯದ ವರೆಗೂ ಮಾಡಲಿಲ್ಲ. ಅದರಿಂದಾಗಿ 15 ಇಟಾಲಿಯನ್ ಪ್ರವಾಸಿಗಳಿದ್ದ ಒಂದು ತಂಡ ದೇಶವನ್ನು ಪ್ರವೇಶಿಸಿತು. ಅವರಲ್ಲಿ ಕೆಲವರಲ್ಲಿ ಸೋಂಕು ಪತೆಯಾಯಿತು ಕೂಡ. ಅದೃಷ್ಟವಶಾತ್ ಅವರೀಗ ಗುಣಮುಖವಾಗಿದ್ದಾರೆ. ದೊಡ್ಡ ಗೋಷ್ಠಿಗಳಲ್ಲಿ ಭಾಗವಹಿಸಲು ಯಾವುದೇ ಪರೀಕ್ಷಣೆ ಇಲ್ಲದೆ ವೀಸಾಗಳನ್ನು ಕೊಟ್ಟದ್ದರಿಂದಾಗಿ ಆಗಿರುವ ದುಷ್ಪರಿಣಾಮಗಳನ್ನು ನೊಡಿದ್ದೇವೆ. ಆದ್ದರಿಂದ ಸರಕಾರ ಚುರುಕಾಗಿತ್ತು ಎಂದು ಹೇಳುವುದು ಹಲವು ಪ್ರಶ್ನೆಗಳನ್ನು ಎತ್ತುತ್ತದೆ.

ಅಷ್ಟೇ ಅಲ್ಲ, ಜಗತ್ತಿನಲ್ಲಿ ಈ ಮಹಾಮಾರಿ ಕಾಣಿಸಿಕೊಂಡ ಮೇಲೆ ಪೂರ್ಣ ಮೂರು ತಿಂಗಳು, ಭಾರತದಲ್ಲಿ ಮೊದಲ ಸೋಂಕು ಪತ್ತೆಯಾದ ಮೇಲೆ ಪೂರ್ಣ ಎರಡು ತಿಂಗಳು ಸರಕಾರಕ್ಕೆ ಇತ್ತು, ಆದರೆ ಇದನ್ನು ಎದುರಿಸಲು ಯಾವುದೇ ಸಿದ್ಧತೆಗಳನ್ನು ಮಾಡಿಕೊಳ್ಳಲಿಲ್ಲ, ಔಷಧಿಗಳ ದಾಸ್ತಾನನ್ನು ವೈದ್ಯಕೀಯ ಕಾರ್ಯಕರ್ತರಿಗೆ ಬೇಕಾದ ವೈಯಕ್ತಿಕ ಸುರಕ್ಷಾ ಪರಿಕರ(ಪಿ.ಪಿ.ಇ.) ಗಳನ್ನು, ತಪಾಸಣೆಯ ಸಾಧನಗಳನ್ನು ಹೆಚ್ಚಸಲು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ, ಬದಲಾಗಿ ಫೆಬ್ರುವರಿ

ಪುಟ 8 ನೋಡಿ

ಕೇರಳ ಕೊವಿಡ್–19ನ್ನು ಜಗ್ಗಿಸುತ್ತಿದೆ, ಹೇಗೆ?





ಇದೀಗ ದೇಶಾದ್ಯಂತ ಆಸಕ್ತಿ ಕೆರಳಿಸಿರುವ ಸಂಗತಿ. ಏಕೆಂದರೆ ದೇಶದಲ್ಲಿ ಇತರೆಡೆಗಳಲ್ಲಿ ಸೋಂಕಿನ ಪ್ರಮಾಣ ಇನ್ನೂ ಹಲವು ನೂರುಗಳಲ್ಲಿದ್ದರೆ, ಇದು ಮೊದಲು ಕಾಣಿಸಿದ ಕೇರಳದಲ್ಲಿ ಒಂದಂಕಿಗೆ ಇಳಿಯುತ್ತಿದೆ. ಅದೀಗ ಲಾಕ್‌ಡೌನ್‌ನಿಂದ ಹೊರಬರುವ ಸಿದ್ಧತೆ ನಡೆಯುತ್ತಿದೆ. ಇದು ಹೇಗೆ ಸಾಧ್ಯವಾಯಿತು? ಮಹಾಮಾರಿಯೊಂದಿಗೆ, ಆರ್ಥಿಕ ಬಿಕ್ಕಟ್ಟೂ ಜನಗಳನ್ನು ಕಂಗೆಡಿಸಿರುವಾಗ ದೇಶ ಕೇರಳದಿಂದ ಕಲಿಯಬೇಕಾದ ಪಾಟ ಏನು?

ಲಾಕ್‌ಡೌನ್ ಒಂದೇ ಸಾಲದು, ಸಿದ್ಧತೆ ಮತ್ತು ಆಡಳಿತ ವಿಕೇಂದ್ರೀಕರಣ ಇವು ಕೇರಳದ ಯಶಸ್ಸಿನ ಮೂಲ ಸೂತ್ರಗಳು ಎನ್ನುತ್ತಾರೆ ಕೇರಳ ಎಡನೇತೃತ್ವದ ಸರಕಾರದ ಹಣಕಾಸು ಮಂತ್ರಿ

ಡಾ.ಟಿ.ಎಂ.ಥಾಮಸ್ ಐಸಾಕ್.

ಕೇರಳ ಕೊವಿಡ್ ಮಹಾಮಾರಿಯನ್ನು ಜಗ್ಗಿಸುತ್ತಿದೆ. ಕಳೆದ ಒಂದು ವಾರದಿಂದ ಪ್ರತಿದಿನ ಸೋಂಕಿನಿಂದ ಗುಣಮುಖರಾದವರ ಸಂಖ್ಯೆ ಹೊಸದಾಗಿ ಸೋಂಕಿತರಾದವರ ಸಂಖ್ಯೆಗಿಂತ ಹೆಚ್ಚಿದೆ. ಸೋಂಕಿನಿಂದ ಗುಣಮುಖರಾದವರ ಅಖಿಲ ಭಾರತ ಸರಾಸರಿ 11ಶೇ. ಇದ್ದರೆ, ಕೇರಳದಲ್ಲಿ ಇದು 50ಶೇ. ವನ್ನು ದಾಟಿದೆ. ಸೋಂಕು ತಗಲಿದವರಲ್ಲಿ ಮರಣ ಹೊಂದಿದವರ ಪ್ರಮಾಣ ಕೇರಳದಲ್ಲಿ 0.5ಶೇ. ಇದ್ದರೆ, ಅಖಿಲ ಭಾರತ ಮಟ್ಟದಲ್ಲಿ ಅದು 3.4ಶೇ. ಸೋಂಕು ಪ್ರಾಥಮಿಕ ಮೂಲದಿಂದ ಹರಡುವ ಪ್ರಮಾಣ ದೇಶದಲ್ಲಿ 2.6 ಇದ್ದರೆ, ಕೇರಳದಲ್ಲಿ ಇದು ಕೇವಲ 0.4.

ಆದರೆ ನಾವು ಇಷ್ಟಕ್ಕೇ ತೃಪ್ತಿಪಟ್ಟು ನಿರಾಳರಾಗುವುದಿಲ್ಲ. ಕೇರಳ ಮುಂದಿನ ಸವಾಲಿಗೆ ಸಿದ್ಧವಾಗುತ್ತಿದೆ. ಇದರ ಫಲಿತಾಂಶ ಕೊವಿಡ್ ವಿರುದ್ಧ ಸಮರದ ಫಲಿತಾಂಶವನ್ನು ನಿರ್ಧರಿಸುತ್ತದೆ. ಲಾಕ್‌ಡೌನ್ ತೆಗೆದಾಗ ವಿದೇಶಗಳು ಮತ್ತು ಇತರ ರಾಜ್ಯಗಳಿಂದ ಮರಳುವವರ ಆಗಮನ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ನೂರಾರು ಸಾವಿರಾರು ಮಂದಿಯನ್ನು ಕ್ವಾರಂಟೈನ್ ಮಾಡಬೇಕಾಗುತ್ತದೆ. ತಪಾಸಣೆ, ಸೋಂಕು ಕಂಡರೆ ಶುಶ್ರೂಷೆ ಮಾಡಿ ಎರಡನೇ ಪ್ರಸರಣ ನಡೆಯದಂತೆ ಖಾತ್ರಿಪಡಿಸಬೇಕಾಗುತ್ತದೆ.

ಈಗಾಗಲೇ 2ಲಕ್ಷಕ್ಕೂ ಹೆಚ್ಚು ಮಂದಿಗೆ ವಸತಿ ಮತ್ತು ಇತರ ಸೌಕರ್ಯಗಳನ್ನು ಗುರುತಿಸಿಟ್ಟಿದ್ದೇವೆ. ದೊಡ್ಡ ಮಾಹಿತಿ ವಿಶ್ಲೇಷಣೆಯ(ಬಿಗ್ ಡಾಟಾ ಅನಲಿಟಿಕ್ಸ್) ತಂತ್ರಜ್ಞಾನ ಬಳಸಿ, ಒಂದು ಕಾರ್ಯತಂತ್ರವನ್ನು ರೂಪಿಸಿ, ಅಗತ್ಯವಿದ್ದರೆ, ವಿಲೋಮ ಕ್ವಾರಂಟೈನ್‌ನ ಸಾಧ್ಯತೆಗಳನ್ನೂ ಪರಿಶೀಲಿಸುತ್ತಿದ್ದೇವೆ. ಅದೃಷ್ಟವಶಾತ್ ನಮಗೆ ರಾಜ್ಯದ ಮೂರನೇ ಎರಡು ಜನಸಂಖ್ಯೆಯ ಡಬ್ಲ್ಯು.ಹೆಚ್.ಒ. ಮಾಹಿತಿ ಲಭ್ಯವಿದೆ. ಅದನ್ನು ಇತ್ತೀಚೆಗೆ ನಾವು ಸಂಗ್ರಹಿಸಿರುವ ಮಾಹಿತಿಗಳೊಂದಿಗೆ ಸಮೀಕರಿಸಿ ಜನಸಂಖ್ಯೆಯ ಯಾವ ವಿಭಾಗಕ್ಕೆ ಹೆಚ್ಚು ಅಪಾಯವಿದೆ ಎಂದು ಗುರುತಿಸಿ, ಪರಿಸ್ಥಿತಿಯನ್ನು ಮೊದಲೇ ಗ್ರಹಿಸಿ ಯೋಜನೆಗಳನ್ನು ತಯಾರಿಸಲು ಸಾಧ್ಯವಾಗುತ್ತದೆ. ಲಾಕ್‌ಡೌನ್‌ನಿಂದ ಹೊರಬರುವ ಕಾರ್ಯತಂತ್ರವನ್ನು ಜೀವನೋಪಾಯಗಳನ್ನು ರಕ್ಷಣೆ ಮತ್ತು ಅರ್ಥವ್ಯವಸ್ಥೆಗೆ ಉತ್ತೇಜನೆಯನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಲಾಗುತ್ತದೆ.



ಸೋಂಕಿನಿಂದ ಗುಣಮುಖರಾಗಿ ಹೊರ ಬರುತ್ತಿರುವ 93 ಮತ್ತು 88 ವರ್ಷ ವಯಸ್ಸಿನ ದಂಪತಿ

ನಮ್ಮ ಆರೋಗ್ಯ ವ್ಯವಸ್ಥೆಯ ಶಕ್ತಿ.

ಸಿದ್ಧತೆ– ಇದು ಕೇರಳದ ಯಶಸ್ಸಿನ ಪ್ರಮುಖ ಪದ, ಮತ್ತು ಕಲಿಯಬೇಕಾದ ಪ್ರಮುಖ ಪಾಟ. ನಾವು ಕೊವಿಡ್‌ಗೆ ಸಿದ್ಧವಾಗಿರುವಲ್ಲಿ ಅತ್ಯಂತ ಮಹತ್ವದ ಏಕೈಕ ಅಂಶವೆಂದರೆ ನಮ್ಮ ಆರೋಗ್ಯ ವ್ಯವಸ್ಥೆಯ ಶಕ್ತಿ. ಜಗತ್ತಿನಾದ್ಯಂತ ನಾವು ಮಹಾಮಾರಿಯ ಬಿಕ್ಕಟ್ಟಿನ ಸಂದರ್ಭದಲ್ಲಿ ಆರೋಗ್ಯ ವಲಯದಲ್ಲಿ ಗಂಭೀರ ಮಾರುಕಟ್ಟೆ ವೈಫಲ್ಯಗಳನ್ನು ಕಾಣುತ್ತಿದ್ದೇವೆ. ಸರಕಾರಗಳ ಧೋರಣೆಗಳನ್ನು ರೂಪಿಸುವವರು ಸಾರ್ವಜನಿಕ ಆರೋಗ್ಯ ಜಾಲದ ಮಹತ್ವವವನು ಬಹಳ ಕಷ್ಟಪನಷ್ಟಗಳನ್ನು ಅನುಭವಿಸಿ ಕಲಿಯುತ್ತಿದ್ದಾರೆ.

ಕೇರಳದ ಆರೋಗ್ಯ ವ್ಯವಸ್ಥೆ ನಾವು ಪಡೆದಿರುವ ಬಹು ಹೆಮ್ಮೆಯ ಪರಂಪರೆ. ಪ್ರಸಕ್ತ ಎಡ ಸರಕಾರದ ಅಡಿಯಲ್ಲಿ ಅದು ಪುನರ್ಜನ್ಮ ಪಡೆದಿದೆ. ಈ ಸರಕಾರ ಕೇರಳ ಮೂಲರಚನೆ ಹೂಡಿಕೆ ನಿಧಿ ಮಂಡಳಿಯಿಂದ ಸುಮಾರು 4000 ಕೋಟಿ ರೂ.ಗಳ ಹೂಡಿಕೆಯಿಂದಾಗಿ ಮೂಲರಚನೆ ಮತ್ತು ಉಪಕರಣಗಳನ್ನು ಹೊಂದುವಲ್ಲಿ ದಾಪುಗಾಲಿಟ್ಟಿದೆ. 5775 ಹೊಸ ಹುದ್ದೆಗಳನ್ನು ಸೃಷ್ಟಿಸಲಾಗಿದೆ. 'ಆರ್ದ್ರಂ ಆರೋಗ್ಯ ಮಿಶನ್' ಆರಂಭಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕುಟುಂಬ ಆರೋಗ್ಯ ಕೇಂದ್ರಗಳಾಗಿ ರೂಪಾಂತರಿಸುವುದಕ್ಕೆ ಗಮನ ಕೇಂದ್ರೀಕರಿಸಲಾಗಿದೆ. ಇದರಲ್ಲಿ ಕೇರಳದ ವಿಶಿಷ್ಟ ರುಚಿಯೂ ಇದೆ– ಅದೆಂದರೆ, ರೋಗನಿರೋಧಕ ಮತ್ತು ಶಮನಕಾರಕ ಆರೋಗ್ಯಪಾಲನೆಯಲ್ಲಿ ಸಾಮೂಹಿಕ ಭಾಗವಹಿಸುವಿಕೆ.

ಇತ್ತೀಚೆಗೆ ಸ್ಫೋಟಗೊಂಡ ನಿಪಾಹ್ ಕಾಯಿಲೆಯನ್ನು ಯಶಸ್ವಿಯಾಗಿ ತಡೆಗಟ್ಟಿದ್ದು, ಮತ್ತು ಎರಡು ಪ್ರವಾಹೋತ್ತರ ಆರೋಗ್ಯ ಪರಿಸ್ಥಿತಿಗಳನ್ನು ನಿಭಾಯಿಸಿದ್ದು ಆರೋಗ್ಯ ಕಾರ್ಯಕರ್ತರಿಗೆ ಬಿಕ್ಕಟ್ಟಿನ ಪರಿಸ್ಥಿತಿಗಳನ್ನು ಎದುರಿಸುವಲ್ಲಿ ಒಂದು ತೆರನ ಸಮೂಹ ಸೋಂಕು ಪ್ರತಿರಕ್ಷಣೆಯನ್ನು ಒದಗಿಸಿದೆ. ವುಹಾನ್ ಮಹಾಮಾರಿಯ ಸುದ್ದಿ ಬಂದ ಕೂಡಲೇ ಕೇರಳ ಆರೋಗ್ಯ ವ್ಯವಸ್ಥೆ ತರಾತುರಿಯಿಂದ ಸಿದ್ಧತೆ ಆರಂಭಿಸಿತು – ಹತೋಟಿ ಕೋಷ್ಠಗಳನ್ನು ರಚಿಸಲಾಯಿತು, ಸಿದ್ಧತಾ ಕಸರತ್ತುಗಳನ್ನು ಸಂಘಟಿಸಲಾಯಿತು ಮತ್ತು ಮೊದಲ ಮಹಾಪೂರವನ್ನು ತಡೆಗಟ್ಟಲಾಯಿತು. ಕೊಲ್ಲಿ ಮತ್ತು

ಪುಟ 12 ನೋಡಿ

ಮುಖ್ಯಮಂತ್ರಿಗಳು ಕೊವಿಡ್ ಮಾಹಿತಿಗಳನ್ನು ನೀಡುವ ಪ್ರತಿದಿನ ಸಾಯಂಕಾಲದ ಪತ್ರಿಕಾಗೋಷ್ಠಿ ಟಿವಿಗಳಲ್ಲಿ ಪ್ರಸಾರವಾಗುತ್ತಿದ್ದು, ಇಂದು ಅತ್ಯಂತ ಹೆಚ್ಚು ಟಿವಿ ರೇಟಿಂಗ್‌ಗಳನ್ನು ಪಡೆದಿರುವ ಪ್ರಸಾರವಾಗಿದೆ.



ಜನಗಳಿಗೆ ಸಪ್ತಪದಿ....

ಪುಟ 7 ರಿಂದ

ಕೊನೆಯ ವರೆಗೂ ಅಗತ್ಯ ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳ ರಫ್ತು ಮುಂದುವರೆಯಿತು. ಅದರ ಪರಿಣಾಮಗಳನ್ನು ಈಗ ಎದುರಿಸಬೇಕಾಗಿ ಬಂದಿದೆ. ಆದರೆ ಈಗಿರುವ ಮುಖ್ಯ ಪ್ರಶ್ನೆ ಸರಕಾರ ಮುಂದೇನು ಮಾಡಬೇಕೆಂದಿದೆ ಎಂಬುದು ಎಂದು ಯೆಚುರಿ ಮಾರ್ಮಿಕವಾಗಿ ಹೇಳಿದರು.

ರಾಜ್ಯಗಳಿಗೆ ಅಗತ್ಯ ನೆರವು

ಈಗ ರಾಜ್ಯ ಸರಕಾರಗಳ ಮೇಲೆ ಹೆಚ್ಚಿನ ಹೊರೆ ಬೀಳುತ್ತಿರುವುದರಿಂದ, ಮತ್ತು ಕೇಂದ್ರ ಸರಕಾರದಿಂದ ಹಣಕಾಸಿನ ಮತ್ತು ಇತರ ಸಹಾಯ ಬರುತ್ತಿಲ್ಲವಾದ್ದರಿಂದ, ಸಿ.ಎಸ್.ಆರ್. ನಿಧಿ ಮುಂತಾದ ವಿಷಯಗಳಲ್ಲಿ ಪ್ರತಿಪಕ್ಷಗಳ ಮುಖ್ಯಮಂತ್ರಿಗಳನ್ನು ಅಣಿನೆರೆಸುವ ಮುತುವರ್ಜಿಯನ್ನು ತೆಗೆದುಕೊಳ್ಳುತ್ತೀರಾ ಎಂದು ಒಬ್ಬ ಪತ್ರಕರ್ತರು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸುತ್ತ ಯೆಚುರಿ ಈಗಾಗಲೇ ನಾವು ಸಿ.ಎಸ್.ಆರ್. (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ನಿಧಿಗಳು ಮುಖ್ಯ ಮಂತ್ರಿಗಳ ಪರಿಹಾರ ನಿಧಿಗಳಿಗೂ ತೆಗೆದುಕೊಳ್ಳಲು ಸಾಧ್ಯವಾಗುವಂತೆ ಕಂಪನಿ ಕಾಯ್ದೆಯ ಶೆಡ್ಯೂಲ್ 7ನ್ನು ತಿದ್ದುಪಡಿ ಮಾಡಬೇಕು ಎಂದೂ, ಪ್ರಧಾನ ಮಂತ್ರಿಗಳ ಹೊಸ ನಿಧಿಗೆ ಬರುತ್ತಿರುವ ನಿಧಿಗಳಿಂದ ರಾಜ್ಯಗಳಿಗೆ ವರ್ಗಾಯಿಸಬೇಕು ಎಂದೂ ಆಗ್ರಹಿಸುತ್ತಿದ್ದೇವೆ ಎಂದರು. ಅಲ್ಲದೆ, ಕೇರಳ ಎಡರಂಗ ಸರಕಾರದ ಹಣಕಾಸು ಮಂತ್ರಿಗಳು ಈ ತಿಂಗಳಲ್ಲಿ ಈ ಕುರಿತಂತೆ ಒಂದು ವೆಬಿನಾರ್(ಅಂತರ್ಜಾಲ ವಿಚಾರಸಂಕಿರಣ) ಏರ್ಪಡಿಸುತ್ತಿದ್ದಾರೆ, ಇದರಲ್ಲಿ ಬಿಜೆಪಿಯೇತರ ಸರಕಾರಗಳ ಹಣಕಾಸು ಮಂತ್ರಿಗಳು ಭಾಗವಹಿಸುತ್ತಾರೆ, ಬಿಜೆಪಿ ಮುಖ್ಯಮಂತ್ರಿಗಳಿಗೂ ಇದಕ್ಕೆ ಸ್ವಾಗತವಿದೆ ಎಂದು ಹೇಳಿದರು.

ಸರಕಾರ ಒಂದು ನವಪದಿಯನ್ನು ಅಂಗೀಕರಿಸಿ ಅದನ್ನು ಸಮರೋಪಾದಿಯಲ್ಲಿ ಜಾರಿಗೊಳಿಸಬೇಕು


ಪ್ರಧಾನ ಮಂತ್ರಿಗಳು ನಾವು ಒಂದು ಏಳಂಶಗಳ ಕಾರ್ಯಕ್ರಮವನ್ನು ಜಾರಿ ಮಾಡಬೇಕ್ರೆಂದು ವಿಶದಪಡಿಸಿದ್ದಾರೆ. ಅದನ್ನು ಅವರು ಸಪ್ತಪದಿ ಎಂದಿದ್ದಾರೆ. ಇದೀಗ ಸರಕಾರ ತಾನು ಜಾರಿ ಮಾಡಬೇಕಾದ ಒಂದು ಕಾರ್ಯಕ್ರಮವನ್ನು, ನಾವು ಎತ್ತಿರುವ ಪ್ರಶ್ನೆಗಳ ಆಧಾರದಲ್ಲಿ ಅಂಗೀಕರಿಸಬೇಕಾದ ಸಮಯ ಬಂದಿದೆ. ನಿಜ ಹೇಳಬೇಕೆಂದರೆ ಕೇಂದ್ರ ಸರಕಾರ, ಕನಿಷ್ಟ ಒಂದು ನವಪದಿಯನ್ನಾದರೂ ಅಂಗೀಕರಿಸಿ ಅದನ್ನು ಸಮರೋಪಾದಿಯಲ್ಲಿ ಜಾರಿ ಮಾಡಬೇಕು ಎಂದು ಸೀತಾರಾಂ ಯೆಚುರಿ ಹೇಳಿದ್ದಾರೆ. ಅವರು ಮುಂದಿಟ್ಟಿರುವ ಒಂಭತ್ತು ಕನಿಷ್ಟ ಕ್ರಮಗಳು ಹೀಗಿವೆ:

1. ಅಗತ್ಯ ಪಿ.ಪಿ.ಇ.ಗಳನ್ನು ಖರೀದಿಸಿ, ಒದಗಿಸುವುದು.
2. ತಪಾಸಣೆಗಳ ತ್ವರಿತ ವಿಸ್ತರಣೆ.
3. ತಕ್ಷಣವೇ ಎಲ್ಲ ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಬರದ ಜನಗಳಿಗೆ ರೂ.7500 ನಗದು ವರ್ಗಾವಣೆ.
4. ಆಹಾರದ ಅಗತ್ಯವಿರುವ ಎಲ್ಲರಿಗೂ ಆಹಾರ ಧಾನ್ಯಗಳ ಉಚಿತ ವಿತರಣೆ.
5. ಹಣಕಾಸು ಉತ್ತೇಜನೆ ಪ್ಯಾಕೇಜನ್ನು ಈಗಿರುವ 0.8% ಜಿ.ಡಿ.ಪಿ.ಯಿಂದ ಕನಿಷ್ಟ 5% ಜಿ.ಡಿ.ಪಿ.ಗೆ ಏರಿಸುವುದು.
6. ರಾಜ್ಯ ಸರಕಾರಗಳಿಗೆ ಉದಾರ ನಿಧಿ ಒದಗಿಸಿ ಬೆಂಬಲ.
7. ಘೋಷಿತ ಸಿ2+50% ಬೆಂಬಲ ಬೆಲೆಗಳಲ್ಲಿ ಕಟಾವು ಆಗಿರುವ ಬೆಳೆಗಳ ಖರೀದಿ, ಮತ್ತು ಮನರೇಗ ಸ್ಕೀಮಿನ ಅಡಿಯಲ್ಲಿ ದಾಖಲಾಗಿರುವ ಎಲ್ಲರಿಗೂ ಕೆಲಸವಿದ್ದರೂ, ಇಲ್ಲದಿದ್ದರೂ ಕೂಲಿ ಪಾವತಿ
8. ಕಾರ್ಮಿಕರನ್ನು ಉದ್ಯೋಗ ನಷ್ಟ, ಸಂಬಳ ಕಡಿತದಿಂದ ರಕ್ಷಿಸಲು ಉದ್ಯೋಗದಾತರಿಗೆ ಹಣಕಾಸು ನೆರವು.
9. ವಲಸೆ ಕಾರ್ಮಿಕರು ತಮ್ಮ ಮನೆಗಳಿಗೆ ಮರಳಲು ವ್ಯವಸ್ಥೆ.

ಒಂದು ಶತಮಾನದ ಹಿಂದೆ 1918–19ರಲ್ಲಿ 'ಸ್ಪಾನಿಶ್ ಫ್ಲೂ' ಎಂದು ಕರೆಯಲಾಗುವ ಇನ್‌ಫ್ಲುಯೆಂಜಾ ಎಂಬ ಈವರೆಗಿನ ಅತಿ ಭೀಕರ ಜಾಗತಿಕ ಪಿಡುಗು ಬಂದಿತ್ತು. ಅಕ್ಟೋಬರ್ ಕ್ರಾಂತಿಯ ಕೆಲವಾರಗಳಲ್ಲೇ ಇದು ಆರಂಭವಾಗಿತ್ತು. ಸಾರ್ವಜನಿಕ ಆರೋಗ್ಯ ಮತ್ತು ಶುಶ್ರೂಷೆಗೆ ವ್ಯವಸ್ಥೆ ಬೊಲ್ಶೇವಿಕ್ ಕ್ರಾಂತಿಕಾರಿ ಸರಕಾರ ತೆಗೆದುಕೊಂಡ ಮೊದಲ ಕ್ರಮವಾಗಿತ್ತು. ಇದಕ್ಕಾಗಿ ಸಾರ್ವಜನಿಕ ಆರೋಗ್ಯದ ಸಚಿವಾಲಯವನ್ನು ಸ್ಥಾಪಿಸಲಾಯಿತು. ಹರಡುತ್ತಿದ್ದ ಇನ್‌ಫ್ಲುಯೆಂಜಾ ಪಿಡುಗನ್ನು ನಿಯಂತ್ರಿಸುವುದೇ ಅದರ ಮೊದಲ ಆದ್ಯತೆಯಾಗಿತ್ತು. ಲೆನಿನ್ ಮತ್ತು ಹೊಸ ಸಮಾಜವಾದಿ ಪ್ರಭುತ್ವವು ಹೀಗೆ, ಸಾರ್ವಜನಿಕ ಆರೋಗ್ಯದ ಮೂಲಕ ಪ್ರಯೋಗ ನಡೆಸಿ ಸಾಂಕ್ರಾಮಿಕ ರೋಗದ ವಿರುದ್ಧ ಯುದ್ಧ ಸಾರಿದವರಲ್ಲಿ ಮೊದಲಿಗರಾಗಿದ್ದರು. ಇಂದಿನ ಪ್ರಮುಖ ಸಾಮ್ರಾಜ್ಯಶಾಹಿ ಶಕ್ತಿಯ ನಡೆಗೆ ಎಷ್ಟು ತದ್ವಿರುದ್ಧವಾಗಿದೆ!

150ನೇ ಜನ್ಮದಿನದ ಸಂದರ್ಭದಲ್ಲಿ ಲೆನಿನ್ ಅವರನ್ನು ನೆನೆಯುತ್ತ..........

ಪ್ರಕಾಶ್ ಕಾರಟ್ (ಅನು: ಎಸ್.ಕೆ.ಗೀತಾ)



ಏಪ್ರಿಲ್ 22, 2020 ಇಪ್ಪತ್ತನೇ ಶತಮಾನದ ಮಹಾನ್ ಕ್ರಾಂತಿಕಾರಿ ನಾಯಕ ವ್ಲಾದಿಮಿರ್ ಇಲ್ಯಿಚ್ ಲೆನಿನ್‌ರ 150ನೆಯ ಜಯಂತಿ. ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ನಂತರ ಮಾರ್ಕ್ಸ್‌ವಾದದ ತತ್ವ ಮತ್ತು ಆಚರಣೆಗೆ ಅತಿ ದೊಡ್ಡ ಕೊಡುಗೆ ನೀಡಿದ ನಾಯಕರೆಂದರೆ ಲೆನಿನ್. ಸಾಮ್ರಾಜ್ಯಶಾಹಿಯ ಕುರಿತಾದ ಅವರ ವಿಶ್ಲೇಷಣೆಯಂತಹ ಪ್ರಮುಖ ಸೈದ್ಧಾಂತಿಕ ಮುನ್ನಡೆಯು, ಅಕ್ಟೋಬರ್ 1917 ರಲ್ಲಿ ಜಗತ್ತಿನಲ್ಲೇ ಪ್ರಪ್ರಥಮವಾಗಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿಗೆ ವೇದಿಕೆಯನ್ನು ಸಜ್ಜುಗೊಳಿಸಿತು.

ಕೈಗಾರಿಕಾ ಶ್ರಮಿಕರು, ವಸಾಹತುಗಳ ಮತ್ತು ದಮನಿತ ದೇಶಗಳ ಜನತೆಯನ್ನು ಒಳಗೊಂಡಂತಹ ಕ್ರಾಂತಿಕಾರಿ ರಣನೀತಿಯೊಂದನ್ನು ಲೆನಿನ್ ರೂಪಿಸಿದ್ದರು. ಈ ರಣನೀತಿಯ ಇನ್ನೊಂದು ಪ್ರಮುಖ ಅಂಶವೆಂದರೆ ರೈತ–ಕಾರ್ಮಿಕ ವರ್ಗಗಳ ಐಕ್ಯತೆ. ಅವರು ದುಡಿಯುವ ವರ್ಗದ ಮುಂಚೂಣಿಯಲಿರುವ ಕ್ರಾಂತಿಕಾರಿ ಪಕ್ಷದ ಪಾತ್ರದ ಪ್ರವರ್ತಕರಾಗಿದ್ದರು.

ಲೆನಿನ್‌ರು ಎಲ್ಲ ರೀತಿಯ ಸುಧಾರಣಾವಾದ ಮತ್ತು ವರ್ಗ ಸಖ್ಯತೆಯ ರೂಪಗಳಿಗೆ ವಿರೋಧಿಸುತ್ತಾ ದುಡಿಯುವ ವರ್ಗದ ಕ್ರಾಂತಿಕಾರಿ ಗುಣಲಕ್ಷಣಗಳನ್ನು ಕಾಪಾಡಲು ಅವಿರತ ಹೋರಾಟ ನಡೆಸಿದ್ದರು. ಅಲ್ಪಾವಧಿಗೆ ಮಾತ್ರ ಹೊಸದಾಗಿ ಸ್ಥಾಪಿತವಾಗಿದ್ದ ಸೋವಿಯತ್ ಯೂನಿಯನ್‌ನ ನಾಯಕರಾಗಿದ್ದರೂ, ಅವರು ಅಸಂಖ್ಯಾತ ಅಡೆತಡೆಗಳ ನಡುವೆಯೂ ಸಮಾಜವಾದಿ ರಚನೆಗೆ ಸ್ಪಷ್ಟ ನಿರ್ದೇಶನ ನೀಡಲು ಶ್ರಮಿಸಿದರು. ಅದು ಭವಿಷ್ಯಕ್ಕೆ ಅತ್ಯುಪಯುಕ್ತ ಅನುಭವವಾಗಿತ್ತು.

ಈ ಸಂಕ್ಷಿಪ್ತ ಶ್ರದ್ಧಾಂಜಲಿಯಲ್ಲಿ ಸಾಮ್ರಾಜ್ಯಶಾಹಿಯನ್ನು ಅರಿಯುವಲ್ಲಿ ಲೆನಿನ್‌ರ ಮೂಲ ಕೊಡುಗೆ, ಅದರ ಪ್ರಸ್ತುತತೆ ಹಾಗೂ ರೋಗರುಜಿನಗಳ ವಿರುದ್ಧ ಹೋರಾಟದಲ್ಲಿ ಅವರ ಮತ್ತು ಯುವ ಸೋವಿಯತ್‌ನ ಕೊಡುಗೆಗಳ ಬಗ್ಗೆ ತಿಳಿದುಕೊಳ್ಳೋಣ.

ಇಂದಿನ ಸಾಮ್ರಾಜ್ಯಶಾಹಿ

ಬಂಡವಾಳಶಾಹಿಯು ಜಗತ್‌ವ್ಯಾಪಿ ವ್ಯವಸ್ಥೆಯಾಗಿ ಸ್ಥಾಪಿತವಾಗುವುದು ಎಂಬ ಮುನ್ನೋಟವನ್ನು ಮಾರ್ಕ್ಸ್ ಹೊಂದಿದ್ದರೂ, ಅದು ಏಕಸ್ವಾಮ್ಯದ ಬಂಡವಾಳಶಾಹಿಯ ಹಂತಕ್ಕೆ ಬೆಳೆದಿದ್ದು ಅವರ ಜೀವಿತಾವಧಿಯ ನಂತರವೇ. ಲೆನಿನ್‌ರ ಸೈದ್ಧಾಂತಿಕ ಗ್ರಹಿಕೆಯು, ಏಕಸ್ವಾಮ್ಯದ ಬಂಡವಾಳದ ಅಂತರ್ಗತವಾದ ಕಾರಣದಿಂದಾಗಿಯೇ ಹೇಗೆ ಸಾಮ್ರಾಜ್ಯಶಾಹಿಯು ಜಗತ್‌ವ್ಯಾಪಿ ವ್ಯವಸ್ಥೆಯಾಗಿ ಅಭಿವೃದ್ಧಿಗೊಂಡಿದೆಯೆಂಬುದನ್ನು ಅರಿಯಲು ಸಹಕಾರಿಯಾಗಿತ್ತು. ಹಾಗಾಗಿ ಸಾಮ್ರಾಜ್ಯಶಾಹಿಯ ಸಿದ್ಧಾಂತವನ್ನು ಜಾಗತಿಕ ಶ್ರಮಿಕರ ಕ್ರಾಂತಿಯ ರಣನೀತಿ ಮತ್ತು ತಂತ್ರಗಳೊಂದಿಗೆ ಸಮ್ಮಿಳಿತಗೊಳಿಸಲು ಅವರಿಗೆ ಸಾಧ್ಯವಾಗಿತ್ತು.

ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನರಿಗಿದ್ದ ಆಳವಾದ ತಿಳಿವಿನ ಕಾರಣದಿಂದಾಗಿ, ಸಮಾಜವಾದಿ ಕ್ರಾಂತಿಯು ಕೇವಲ ಬಂಡವಾಳಶಾಹಿ ವ್ಯವಸ್ಥೆ ಸಂಪೂರ್ಣವಾಗಿ ಬೆಳೆದ ಹಂತಕ್ಕೆ ತಲುಪಿರುವ ಸಮಾಜಗಳಲ್ಲಿ ಮಾತ್ರವೇ ಸಾಧ್ಯವಿದೆಯೆಂಬ ಸಾಂಪ್ರದಾಯಿಕ ತಿಳಿವನ್ನು ತಿರಸ್ಕರಿಸಿದ ಮೊದಲ ಮಾರ್ಕ್ಸ್‌ವಾದಿ ಅವರಾದರು. ಸಾಮ್ರಾಜ್ಯಶಾಹಿಯ ಯುಗದಲ್ಲಿ ಅಸಮಾನ ಬಂಡವಾಳಶಾಹಿ ವ್ಯವಸ್ಥೆಯ ಬೆಳವಣಿಗೆಯಿಂದಾಗಿ, ಸಮಾಜವಾದಿ ಕ್ರಾಂತಿಯು ಅತ್ಯಂತ ಹಿಂದುಳಿದಿರುವ ಬಂಡವಾಳಶಾಹಿ ದೇಶದಲ್ಲೇ ಯಶಸ್ವಿಯಾಗುವ ಸಾಧ್ಯತೆಯಿದೆಯೆಂದು ಲೆನಿನ್ ಗಮನಿಸಿದರು. ಸಾಮ್ರಾಜ್ಯಶಾಹಿ ಯುಗದಲ್ಲಿ, ಬಂಡವಾಳಶಾಹಿ ಶೋಷಣೆಯ ಜಗತ್‌ವ್ಯಾಪಿ ಸರಪಳಿಯ ಒಡೆಯಬಹುದಾದ ಅತ್ಯಂತ ದುರ್ಬಲ ಕೊಂಡಿಯಿರುವಲ್ಲಿ ಈ ಕ್ರಾಂತಿ ಫಲಿಸಬಲ್ಲದು. ವಿವಿಧ ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಪೈಪೋಟಿಯ ಕಾರಣದಿಂದಾಗಿ, ಮೊದಲ ವಿಶ್ವ ಸಮರ ನಡೆದಾಗ ಝಾರ್ ಆಳುತ್ತಿದ್ದ ರಷ್ಯ ಅಂತಹ ದುರ್ಬಲ ಕೊಂಡಿಯೆಂದು ಗುರುತಿಸಿದ್ದು ಲೆನಿನ್.

ವ್ಬಂದ್ಬವ್ರ್ದಿದ್ದ ರಾಷ್ಟ್ರಗಳ ದುಡಿಯುವ ವರ್ಗದ ಹೋರಾಟಗಳು ಮತ್ತು ವಸಾಹತು ದೇಶಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಜನತೆ ನಡೆಸುತ್ತಿದ್ದ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಸಂಯೋಜಿಸುವುದಕ್ಕೆ ಲೆನಿನ್‌ರ ಸಾಮ್ರಾಜ್ಯಶಾಹಿಯ ಈ ತಿಳುವಳಿಕೆ ಬುನಾದಿ ಹಾಕಿತ್ತು.

ಇಂದಿನ ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಎದುರಿಸಲೂ ಲೆನಿನ್‌ರ ಸಾಮ್ರಾಜ್ಯಶಾಹಿಯ ತಿಳುವಳಿಕೆ ಮತ್ತು ಸಿದ್ಧಾಂತವೇ ಬುನಾದಿ. ಲೆನಿನ್‌ರು ಸಾಮ್ರಾಜ್ಯಶಾಹಿಯನ್ನು ವಿಶ್ಲೇಷಿಸಿದ ಸಮಯದಿಂದ ಇಂದಿನವರೆಗೆ ಹಣಕಾಸು ಬಂಡವಾಳದ ಗುಣಲಕ್ಷಣಗಳು ಬಹಳಷ್ಟೂ ಬದಲಾಗಿವೆ. ಕಳೆದ ಮೂರು ದಶಕಗಳಲ್ಲಂತೂ ಬಂಡವಾಳದ ಸಾಂದ್ರೀಕರಣ ಮತ್ತು ಕೇಂದ್ರೀಕರಣದಲ್ಲಿ ಅಗಾಧ ಪ್ರಮಾಣದ ಹೆಚ್ಚಳವುಂಟಾಗಿದೆ. ತನ್ನ ಲಾಭದ ಹುಡುಕಾಟದಲ್ಲಿ ಈ ಹಣಕಾಸು ಬಂಡವಾಳವು ಜಗತ್ತಿನಾದ್ಯಂತ ತಡೆರಹಿತ ಅವಕಾಶಗಳಿಗಾಗಿ ಒತ್ತಾಯಿಸುತ್ತದೆ. ಹಣಕಾಸು ಬಂಡವಾಳ ಮತ್ತು ನವ–ಉದಾರೀಕರಣ ನೀತಿಗಳ ಜೊತೆಗೂಡಿ ಹಲವು ಸ್ವತಂತ್ರ ದೇಶಗಳ ಆರ್ಥಿಕ ಮತ್ತು ರಾಜಕೀಯ ಸ್ವಾಯತ್ತತೆಗೆ ತೀವ್ರ ಅಪಾಯ ತಂದೊಡ್ಡಿ ದುಡಿಯುವ ಜನರ ಬದುಕಿನ ಮೇಲೆ ತೀವ್ರ ದಾಳಿಗಳನ್ನು ಮಾಡಿದೆ.

ಈ ಬದಲಾವಣೆಯು ಸಾಮ್ರಾಜ್ಯಶಾಹಿಯ ದರೋಡೆಕೋರ, ಆಕ್ರಮಣಕಾರಿ ಗುಣವನ್ನು ಕಡಿಮೆ ಮಾಡಿದೆಯೆಂದೆಲ್ಲ. ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ವೈರುಧ್ಯಗಳು ಅವುಗಳ ನಡುವೆ ಯುದ್ಧಕ್ಕೆ ದಾರಿ ಮಾಡಿಲ್ಲ, ನಿಜ. ಆದರೆ ಈ ಶಕ್ತಿಗಳ ನಾಯಕನಾದ ಅಮೇರಿಕಾವು ವಿವಿಧ ರಾಷ್ಟ್ರಗಳ ವಿಮೋಚನಾ ಚಳುವಳಿಗಳ ಮೇಲೆ ಯುದ್ಧ ಸಾರಿದೆ. ಸಾಮ್ರಾಜ್ಯಶಾಹಿ ಕೂಟಗಳು ಇತರೆ ದೇಶಗಳ ಮೇಲೆ ತಮ್ಮ ಅಧಿಪತ್ಯ ಸಾರಲು ಮತ್ತು ಅವುಗಳನ್ನು ಹತ್ತಿಕ್ಕಲು ಯುದ್ಧ ನಡೆಸಿವೆ. ಅಮೇರಿಕಾವು ತನ್ನ ಅಧಿಪತ್ಯಕ್ಕೆ ಅಡ್ಡಿ ಪಡಿಸುವ ರಾಷ್ಟ್ರಗಳ ಮೇಲೆ ಆರ್ಥಿಕ ದಿಗ್ಬಂಧನ ಮತ್ತು ದಮನಕಾರಿ ನಿರ್ಬಂಧಗಳನ್ನು ಬಳಸುತ್ತದೆ.

ಅಭಿವೃದ್ಧಿಶೀಲ ದೇಶಗಳಲ್ಲಿನ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿ, ಅವುಗಳನ್ನು ಕಸಿದುಕೊಂಡು ಶೋಷಿಸುವ ಮೂಲಕ ಬಂಡವಾಳದ ಅಪಹರಣ ಮತ್ತು ಶೇಖರಣೆಯ ಕ್ರಮಗಳಲ್ಲಿ ಸಾಮ್ರಾಜ್ಯಶಾಹಿಯ ದರೋಡೆಕೋರತನವನ್ನು ಕಾಣಬಹುದಾಗಿದೆ. ನವ ಉದಾರೀಕರಣದಡಿಯಲ್ಲಿ ಮೂಲಭೂತ ಸೇವೆಗಳಾದ ಶಿಕ್ಷಣ ಮತ್ತು ಆರೋಗ್ಯವನ್ನು ಖಾಸಗೀಕರಣ ಮಾಡಲಾಗಿದೆ. ಸಾರ್ವಜನಿಕ ಬಳಕೆಗೆ ಸೇರಿದ ನೀರು ಮತ್ತು ಶಕ್ತಿ ಸಂಪನ್ಮೂಲಗಳನ್ನು ಖಾಸಗಿಯವರ ಹಿಡಿತಕ್ಕೆ ತಂದು, ಎಲ್ಲ ದುಡಿಯುವ ಜನತೆಯನ್ನು ತೀವ್ರವಾಗಿ ಶೋಷಿಸಲಾಗುತ್ತಿದೆ ಎಂಬುದರಲ್ಲೂ ಸಾಮ್ರಾಜ್ಯಶಾಹಿಯ ದರೋಡೆಕೋರತನವನ್ನು ಕಾಣಬಹುದು.

1918–19 ರ ಫ್ಲೂ ಪಿಡುಗು:


ಇಡೀ ಜಗತ್ತು ಕೋವಿಡ್–19 ರ ಪಿಡುಗಿನಲ್ಲಿ ಸಿಲುಕಿರುವ ಸಂದರ್ಭದಲ್ಲಿ ಲೆನಿನ್‌ರ 150 ನೆಯ ಹುಟ್ಟು ಹಬ್ಬ ಬಂದಿದೆ. ಜಗತ್ತಿನ 185 ದೇಶಗಳು ಈ ವೈರಸ್‌ನಿಂದ ಪೀಡಿತವಾಗಿವೆ. ಏಪ್ರಿಲ್ 15 ರ ವೇಳೆಗೆ ಜಗತ್ತಿನಾದ್ಯಂತ ಸುಮಾರು ಇಪ್ಪತ್ತು ಲಕ್ಷ ಜನ ಬಾಧೆಗೆ ಒಳಗಾಗಿದ್ದಾರೆ.

ಒಂದು ಶತಮಾನದ ಹಿಂದೆ 1918–19ರಲ್ಲಿ ಬಹುದೊಡ್ಡ ಪಿಡುಗು ಉಂಟಾಗಿತ್ತು. ಅದೆಂದರೆ ಇನ್‌ಫ್ಲುಯೆಂಜಾ (ಅದು ಸ್ಪೈನ್ ನಲ್ಲಿ ಆರಂಭವಾಗಿರದಿದ್ದರೂ ಅದನ್ನು ತಪ್ಪಾಗಿ 'ಸ್ಪಾನಿಷ್ ಫ್ಲೂ' ಎಂದು ಕರೆಯಲಾಗುತ್ತಿತ್ತು) ಈ ಪೀಡೆಯು ಸುಮಾರು 5 ರಿಂದ 10 ಕೋಟಿ ಜನರನ್ನು ಬಲಿ ತೆಗೆದುಕೊಂಡಿತ್ತು. ಮೊದಲ ಮಹಾಯುದ್ಧದಲ್ಲಿ ಭಾಗಿಯಾಗಿದ್ದ ಸೈನಿಕರಿಗೆ ಸೋಂಕು ತಗಲಿದ್ದರಿಂದ ಮತ್ತು ಎಲ್ಲೆಡೆ ಓಡಾಡುತ್ತಿದ್ದ ಸೈನ್ಯದ ತುಕಡಿಗಳಿಂದಾಗಿ ಈ ಕಾಯಿಲೆ ಜಾಗತಿಕವಾಗಿ ಹರಡಿತ್ತು. ಬ್ರಿಟಿಷರ್ ಆಡಳಿತದಲ್ಲಿದ್ದ ಭಾರತವೂ ಇದಕ್ಕೊಂದು ಪ್ರಮುಖ ಬಲಿಯಾಗಿತ್ತು. ಯುದ್ಧನಿರತ ಸೈನಿಕರು ಭಾರತಕ್ಕೆ ಮರಳಿದಾಗ ಈ ಕಾಯಿಲೆಯಿಂದ ಸುಮಾರು 1.6–1.8 ಕೋಟಿ ಜನ ಸತ್ತಿದ್ದರೆಂದು ಅಂದಾಜು ಮಾಡಲಾಗಿದೆ.

ಅಕ್ಟೋಬರ್ ಕ್ರಾಂತಿಯ ಕೆಲವಾರಗಳಲ್ಲೇ ಈ ರೋಗ ಆರಂಭವಾಗಿತ್ತು. ಎಲ್ಲ ಹಗೆತನವನ್ನೂ ಕೊನೆಗೊಳಿಸಿ ಶಾಂತಿಗೆ ದಾರಿ ಮಾಡಿಕೊಡಬೇಕೆಂದು ಲೆನಿನ್ ಆಳ್ವಿಕೆಯಲ್ಲಿದ್ದ ರೈತ–ಕಾರ್ಮಿಕ ಸರ್ಕಾರದ ಪರವಾಗಿ ಯುದ್ಧನಿರತ ಶಕ್ತಿಗಳಿಗೆ ಮನವಿ ಮಾಡಿದ್ದರು. ಆದರೆ ಒಂದೆಡೆ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಾ ಹಾಗೂ ಇನ್ನೊಂದೆಡೆ ಜರ್ಮನಿಯ ಮಿತ್ರ ರಾಷ್ಟ್ರಗಳು ಈ ಮನವಿಯನ್ನು ತಳ್ಳಿ ಹಾಕಿದ್ದವು. ಜಯದ ಅವಕಾಶ ಕಂಡಿದ್ದ ಬ್ರಿಟನ್ ಮತ್ತು ಮಿತ್ರರಾಷ್ಟ್ರಗಳು ಯುದ್ಧ ಮುಂದುವರೆಸಲು ಉತ್ಸುಕವಾಗಿದ್ದವು. ಶಾಂತಿ ಒಪ್ಪಂದ ಮಾಡಿಕೊಂಡಿದ್ದರೆ ಇನ್‌ಫ್ಲುಯೆಂಜಾ ವಿರುದ್ಧ ಹೋರಾಟ ಸಾಧ್ಯವಿತ್ತು. ಅಕ್ಟೋಬರ್ 1918 ರಲ್ಲಿ ಎರಡನೆಯ ಹಂತದ ಇನ್‌ಫ್ಲುಯೆಂಜ ಭುಗಿಲೆದ್ದಾಗ ಹತ್ತಾರು ಸಾವಿರಾರು ಸೈನಿಕರು ಕ್ಷಿಪ್ರ ಸಾವಿಗೀಡಾದರು.

ಮೊದಲ ಮಹಾಯುದ್ಧದ ಈ ಕರಾಳ ಇತಿಹಾಸ ಸಾಮ್ರಾಜ್ಯಶಾಹಿಯ ಅಮಾನವೀಯ ಮುಖವನ್ನು ತೋರುತ್ತದೆ. ರೋಗ ಪೀಡಿತರು ಮತ್ತು ಸಾವಿಗೀಡಾಗುತ್ತಿದ್ದವರ ಬಗ್ಗೆ ಇರಬೇಕಿದ್ದ

ಪುಟ 10 ನೋಡಿ



ಲಾಕ್‌ಡೌನ್ ನಿಂದಾಗಿ ಸಂಕಷ್ಟದಲ್ಲಿರುವ

ಆಟೋರಿಕ್ಷಾ ಚಾಲಕರಿಗೆ ಸಹಾಯ ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ

ಬೆಂಗಳೂರು ನಗರದಲ್ಲಿ 2 ಲಕ್ಷಕ್ಕಿಂತ ಹೆಚ್ಚು ಆಟೋರಿಕ್ಷಾಗಳಿದ್ದು ಪ್ರಯಾಣಿಕರಿಗೆ ಸೇವೆ ನೀಡುತ್ತಿವೆ. ಈ ರಿಕ್ಷಾಗಳನ್ನು ನಂಬಿಕೊಂಡು ಚಾಲಕರು ಮತ್ತು ಅವರ ಕುಟುಂಬ ವರ್ಗದವರು ಸೇರಿ ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ತಮ್ಮ ಬದುಕು ಕಟ್ಟಿಕೊಂಡು ಬೆಂಗಳೂರು ನಗರದಲ್ಲಿ ವಾಸಮಾಡುತ್ತಿದ್ದಾರೆ.

ಈಗಾಗಲೇ, ದುಬಾರಿ ಬಾಡಿಗೆ, ದುಬಾರಿ ಬಡ್ಡಿ, ಆರೋಗ್ಯ, ಮಕ್ಕಳ ವಿದ್ಯಾಭ್ಯಾಸದಿಂದಾಗಿ ಹೈರಾಣಾಗಿರುವ ಆಟೋ ಚಾಲಕರ ಕುಟುಂಬದವರು ಮಾನ್ಯ ಸರ್ಕಾರಗಳಿಂದ ಈ ವರ್ಗಕ್ಕೆ ಇಲ್ಲಿಯವರೆವಿಗೂ ಯಾವುದೇ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡದೇ ವಂಚಿಸಿವೆ. ಬೆಂಗಳೂರು ನಗರದಲ್ಲಿ ಈ ದಿನದ ಸಂಪಾದನೆ, ಅದೇ ದಿನ ಮಾತ್ರ ಬದುಕಲು ಸಾಧ್ಯವಾಗಿದೆ ಉಳಿತಾಯ ಮಾಡಲು ಸಾಧ್ಯವಾಗುತ್ತಿಲ್ಲ.

ಈಗ ಕೊರೋನ ವೈರಸ್‌ನಿಂದ ಇಡಿ ಪ್ರಪಂಚವೇ ಬೆಚ್ಚಿ ಬಿದ್ದಿದೆ. ಲಕ್ಷಾಂತರ ಸಾವು ನೋವುಗಳು ಸಂಭವಿಸುತ್ತಿವೆ. ನಮ್ಮ ದೇಶದಲ್ಲಿಯು ಕೂಡ ಈ ವೈರಸ್ ಮಹಾಮಾರಿಯನ್ನು ಓಡಿಸಲು ಅಗತ್ಯ ಸೂಕ್ತ ಕ್ರಮ ತೆಗೆದುಕೊಂಡು ಲಾಕ್‌ಡೌನ್ ಮಾಡಿ ಜಾರಿ ಮಾಡಿದೆ. ನಮ್ಮ ರಾಜ್ಯ ಸರ್ಕಾರವು ಕೂಡ ಚಾಚು ತಪ್ಪದೆ ಜಾರಿಮಾಡಿ 25 ದಿವಸ ಕಳೆದಿದೆ. ನಂತರ ಮೇ 3 ರ ವರೆಗೆ ಆದೇಶ ಮಾಡಿ ಕಟ್ಟುನಿಟ್ಟಾಗಿ ಜಾರಿ ಮಾಡಿದೆ. ಈ ಜಾರಿಯಿಂದಾಗಿ ಜನಗಳು ಮನೆಯಿಂದ ಹೊರಗೆ ಬಂದಂತಹ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಆಟೋರಿಕ್ಷಾ ಚಾಲಕರು, ಕಡು ಬಡವರು ಬದುಕು ಸಾಗಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರವು ಎಪಿಎಲ್ ಮತ್ತು ಬಿಪಿಎಲ್ ಕಾರ್ಡುದಾರರಿಗೆ 2 ತಿಂಗಳು ಪಡಿತರ ನೀಡುತ್ತಿದ್ದರು. ಬೇರೆ ಖರ್ಚಿಗೆ (ತರಕಾರಿ, ದಿನಸಿ) ಹಣವಿಲ್ಲದಂತಾಗಿದೆ.

ಈಗಾಗಲೇ ಆಟೋರಿಕ್ಷಾ ಚಾಲಕರಿಗೆ ದೆಹಲಿ, ಆಂದ್ರಪ್ರದೇಶ, ತೆಲಂಗಾಣ, ಕೇರಳ ಸರ್ಕಾರಗಳು ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ 5 ಸಾವಿರ ಹಣವನ್ನು ಚಾಲಕರಿಗೆ ಸಹಾಯ ಮಾಡಿವೆ. ಅದೇ ರೀತಿ ದಿನಸಿ ಸಾಮಾಗ್ರೀ, ಆಹಾರಗಳನ್ನು, ಸರ್ಕಾರದಿಂದ ನೀಡಿ ಈ ಲಾಕ್‌ಡೌನ್ ನಿಂದ ಕುಟುಂಬಗಳಿಗೆ ಸಹಾಯಮಾಡಿದೆ.

ಅದೇ ರೀತಿ ಸಂಕಷ್ಟದಲ್ಲಿರುವ ಕರ್ನಾಟಕದ ಆಟೋರಿಕ್ಷಾ ಚಾಲಕರಿಗೆ ಈ ಕೂಡಲೇ ಘನ ಸರ್ಕಾರವು ಸಹಾಯ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಸಿರಗುಪ್ಪ ತಾಲುಕುನಲ್ಲಿ ಸಿಪಿಎಂ ಪಕ್ಷದಿಂದ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು



ಬೇಡಿಕೆಗಳು:

1. ಸಂಕಷ್ಟದಲ್ಲಿರುವ ಆಟೋರಿಕ್ಷಾ ಚಾಲಕರಿಗೆ ಅವಶ್ಯವಿರುವ ದಿನಸಿ, ಆಹಾರ ಸಾಮಾಗ್ರೀಗಳನ್ನು ಕೂಡಲೇ ನೀಡಲು ಕ್ರಮ ವಹಿಸಬೇಕು.
2. ಮನೆ ಬಾಡಿಗೆ, ಔಷಧಿ ಹಾಗೂ ತರಕಾರಿ, ದಿನಸಿ ಸಾಮಾಗ್ರೀ ಖರ್ಚಿಗಾಗಿ 6 ಸಾವಿರ ಹಣವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೀಡಬೇಕು.
3. ಚಾಲಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಸಂಪೂರ್ಣ ವಿನಾಯಿತಿ ನೀಡಬೇಕು.
4. ಮನೆ ಬಾಡಿಗೆ, ವಾಹನಗಳ ಇಎಂಐ ಕಂತುಗಳು ಇನ್ನಿತರೇ ಖರ್ಚುಗಳನ್ನು ಮನ್ನಾ ಮಾಡಲು ಆದೇಶ ಜಾರಿ ಮಾಡಬೇಕು.
5. ವಿದ್ಯುತ್ ಶುಲ್ಕ, ನೀರಿನ ಶುಲ್ಕ, 3 ತಿಂಗಳುಗಳ ಕಾಲ ಮನ್ನಾ ಮಾಡಬೇಕು.
6. ಈ ಸಂಕಷ್ಟದಿಂದ ಪಾರಾಗಲು 50 ಸಾವಿರ ಹಣವನ್ನು ಬ್ಯಾಂಕ್ ಮತ್ತು ಸಹಕಾರ ಸಂಘಗಳಿಂದ ಸಾಲ ಸೌಲಭ್ಯ ಒದಗಿಸಬೇಕು.

ಸಿ.ಎನ್. ಶ್ರೀನಿವಾಸ್ (14–04–2020 ರ ಪತ್ರ)

150ನೇ ಜನ್ಮದಿನದ ಸಂದರ್ಭದಲ್ಲಿ ಲೆನಿನ್ ಅವರನ್ನು ನೆನೆಯುತ್ತ......... ಪುಟ 9 ರಿಂದ

ಮಾನವೀಯ ಕಾಳಜಿಯನ್ನು ಸಾಮ್ರಾಜ್ಯಶಾಹಿಯ ಅಧಿಪತ್ಯದ ಲಾಲಸೆ ನುಂಗಿಹಾಕಿತ್ತು.

ರಷ್ಯಾದಲ್ಲಿ ಇದೇ ಸಮಯದಲ್ಲಿ ಆಂತರಿಕ ಯುದ್ಧ ನಡೆದಿತ್ತು. ಕ್ರಾಂತಿ ಮತ್ತು ದುಡಿಯುವ ವರ್ಗದ ಅಧಿಕಾರವನ್ನು ಇಲ್ಲವಾಗಿಸಲು ಪ್ರತಿಕ್ರಾಂತಿ ಶಕ್ತಿಗಳು ಅವಮಾನವೀಯ ದಾಳಿ ಆರಂಭಿಸಿದ್ದವು. ಇದೇ ಅವಧಿಯಲ್ಲಿ ಬರಗಾಲ ಮತ್ತು ಸಾಂಕ್ರಾಮಿಕ ರೋಗಗಳು ಹರಡಿದವು. ಇನ್‌ಫ್ಲುಯೆಂಜಾದಿಂದ ಎಷ್ಟು ಜನ ಸತ್ತರೋ ತಿಳಿಯದು, ಅಂದಿನ ಯುವ ಸರ್ಕಾರದ ಯುವ ನಾಯಕನಾಗಿದ್ದ 34 ಕ್ಕೂ ಚಿಕ್ಕ ಪ್ರಾಯದ ಬೊಲ್ಶೆವಿಕ್ ನಾಯಕ ಯಾಕೊವ್ ಸ್ವೆರ್ಡ್ಲೋವ್ ಇದಕ್ಕೆ ಬಲಿಯಾದ ಪ್ರಮುಖ. ಮೊದಲ ಮಹಾಯುದ್ಧ ಮುಗಿಯುತ್ತಿದ್ದಂತೆ ಎಲ್ಲ ಸಾಮ್ರಾಜ್ಯಶಾಹಿ ಶಕ್ತಿಗಳೂ ರಷ್ಯಾದ ಮೇಲೆ ದಾಳಿ ನಡೆಸಿ ಕ್ರಾಂತಿಯನ್ನು ಮುರಿಯುವತ್ತ ತಮ್ಮ ಗಮನ ಹರಿಸಿದವು. ಪ್ರತಿಕಾಂತಿ ಶಕ್ತಿಗಳನ್ನು ಬೆಂಬಲಿಸಿ ಹನ್ನೊಂದು ದೇಶಗಳು ತಮ್ಮ ಪಡೆಗಳನ್ನು ಕಳಿಸಿದ್ದವು. ತಮ್ಮ ರಾಷ್ಟ್ರಗಳಲ್ಲಿ ಹರಡುತ್ತಿದ್ದ ಪಿಡುಗಿನ ಬಗ್ಗೆ ಅವರಿಗೆ ಗಮನವಿರಲಿಲ್ಲ, ಅವರ ಗಮನವಿದ್ದದ್ದು ರಷ್ಯಾದ ಕ್ರಾಂತಿಯನ್ನು ತಡೆಯುವತ್ತ.

ಸಾರ್ವಜನಿಕ ಆರೋಗ್ಯ ರಕ್ಷಣೆಯ ಪ್ರವರ್ತಕ

ಲೆನಿನ್ ಕೌನ್ಸಿಲ್ ಆಫ್ ಕೊಮಿಸಾರ್ಸ್ (ಸಚಿವ ಸಂಪುಟದಂತೆ)ನ ಅಧ್ಯಕ್ಷರಾಗಿದ್ದರು. ಇದು ಕ್ರಾಂತಿಕಾರಿ ಸರ್ಕಾರದ ಪ್ರಧಾನಿ ಪಟ್ಟಕ್ಕೆ ಸಮಾನವಾದುದು. ಸಾರ್ವಜನಿಕ ಆರೋಗ್ಯ ಮತ್ತು ಶುಶ್ರೂಷೆಯು ಅವರು ತೆಗೆದುಕೊಂಡ ಮೊದಲ ಕ್ರಮವಾಗಿತ್ತು. ಸಾರ್ವಜನಿಕ ಆರೋಗ್ಯದ ಸಚಿವಾಲಯವನ್ನು (ಪೀಪಲ್ಸ್ ಕೊಮಿಸರೇಟ್ ಆಫ್ ಪಬ್ಲಿಕ್ ಹೆಲ್ತ್) ಜುಲೈ 1918ರಲ್ಲಿ ಸ್ಥಾಪಿಸಲಾಯಿತು. ಹರಡುತ್ತಿದ್ದ ಇನ್‌ಫ್ಲುಯೆಂಜಾ ಪಿಡುಗನ್ನು ನಿಯಂತ್ರಿಸುವುದೇ ಅದರ ಮೊದಲ ಆದ್ಯತೆಯಾಗಿತ್ತು. 1920ರಲ್ಲಿ ಲೆನಿನ್ "ಈ ಕಾಯಿಲೆಯನ್ನೆದುರಿಸುವಲ್ಲಿ ನಮ್ಮೆಲ್ಲ ದೃಢ ನಿಶ್ಚಯ ಮತ್ತು ಆಂತರಿಕ ಯುದ್ಧವನ್ನೆದುರಿಸಿದ ಅನುಭವ ಬಳಕೆಯಾಗಬೇಕು" ಎಂದು ಬರೆದಿದ್ದರು.

ಲಾರಾ ಸ್ಪಿನ್ನಿಯವರು 2017 ರಲ್ಲಿ ಸ್ಪಾನಿಷ್ ಫ್ಲೂನ ಕುರಿತಾಗಿ ಬರೆದಿರುವ "ಪೇಲ್ ರೈಡರ್" ಎಂಬ ಆಸಕ್ತಿಕಾರಕ ಕೃತಿಯಲ್ಲಿ ಸೋವಿಯತ್‌ನ ಈ ನಿರ್ಧಾರದ ಪ್ರಾಮುಖ್ಯತೆಯ ಬಗ್ಗೆ ಬರೆಯಲಾಗಿದೆ. "1920 ರಲ್ಲಿ ಒಂದು ಕೇಂದ್ರೀಕೃತ, ಸಂಪೂರ್ಣ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಜಾರಿಗೆ ತಂದ ಪ್ರಥಮ ರಾಷ್ಟ್ರ ರಷ್ಯಾ. ಅದು ಗ್ರಾಮೀಣ ಜನತೆಯನ್ನು ಒಳಗೊಳ್ಳದ ಕಾರಣ ಸಾರ್ವತ್ರಿಕವಾಗಿರಲಿಲ್ಲ. ಆದರೂ ಅದೊಂದು ಬಹುದೊಡ್ಡ ಸಾಧನೆಯಾಗಿತ್ತು ಮತ್ತು ಆ ಸಾಧನೆಯ ಹಿಂದಿದ್ದ ಶಕ್ತಿ ಲೆನಿನ್".

ವೈದ್ಯರು ಅಥವ ಚಿಕಿತ್ಸಕರು ಹೇಗಿರಬೇಕೆಂಬ ಅವರ ದೃಷ್ಟಿಕೋನವು 1924 ರಲ್ಲಿ ಸರ್ಕಾರವು ವೈದ್ಯಕೀಯ ಶಾಲೆಗಳಿಗೆ ನೀಡಿದ ನಿರ್ದೇಶನದಿಂದ ತಿಳಿಯುತ್ತದೆ. "ವೈದ್ಯರೆಂದರೆ ಖಾಯಿಲೆಗೆ ಕಾರಣವಾಗುವ ವೃತ್ತಿ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಭ್ಯಸಿಸಿ ಖಾಯಿಲೆಗೆ ಔಷಧಿ ನೀಡುವಂತಹವರು ಮಾತ್ರವಲ್ಲ, ಖಾಯಿಲೆಗಳನ್ನು ತಡೆಗಟ್ಟುವಂತಹವರೂ ಆಗಿರಬೇಕು" ಎಂದೂ ನಿರ್ದೇಶಿಸಿದ್ದರು. ಲೆನಿನ್‌ರ ಪಾಲಿಗೆ ಔಷಧವೆಂಬುದು ಕೇವಲ ಪ್ರಯೋಗಾತ್ಮಕ ಅಥವ ಜೈವಿಕವಾದುದಲ್ಲ. ಅದು ಸಾಮಾಜಿಕವಾದುದೂ ಆಗಿತ್ತು. ಇದೇ ಸಮಯದಲ್ಲಿ ಸೋಂಕುಶಾಸ್ತ್ರ – ರೋಗದ ಲಕ್ಷಣ, ಕಾರಣ ಮತ್ತು ಪರಿಣಾಮಗಳನ್ನು ಅಧ್ಯಯನವನ್ನು – ಒಂದು ವಿಜ್ಞಾನವೆಂದು ಗುರುತಿಸಲಾಯ್ತು. ಸಾರ್ವಜನಿಕ ಆರೋಗ್ಯಕ್ಕೆ ಇಂತಹ ಅಧ್ಯಯನ ಬುನಾದಿಯಾಗುವ ಮಹತ್ವವನ್ನು ಅರಿಯಲಾಯಿತು. (ಲಾರಾ ಸ್ಪಿನ್ನಿ, "ಪೇಲ್ ರೈಡರ್, ದ ಸ್ಪಾನೀಷ್ ಫ್ಲೂ 1918 ಅಂಡ್ ಹೌ ಇಟ್ ಚೇಂಜ್ಡ್ ದಿ ವರ್ಲ್ಡ್").

ಲೆನಿನ್ ಮತ್ತು ಹೊಸ ಸಮಾಜವಾದಿ ಪ್ರಭುತ್ವವು ಹೀಗೆ ಸಾರ್ವಜನಿಕ ಆರೋಗ್ಯದ ಮೂಲಕ ಪ್ರಯೋಗ ನಡೆಸಿ ಸಾಂಕ್ರಾಮಿಕ ರೋಗದ ವಿರುದ್ಧ ಯುದ್ಧ ಸಾರಿದ್ದವರಲ್ಲಿ ಮೊದಲಿಗರಾಗಿದ್ದರು. ಇಂದಿನ ಪ್ರಮುಖ ಸಾಮ್ರಾಜ್ಯಶಾಹಿ ಶಕ್ತಿಯ ನಡೆಗೆ ಎಷ್ಟು ತದ್ವಿರುದ್ಧವಾಗಿದೆ! ಪಿಡುಗಿರಲಿ ಇಲ್ಲದಿರಲಿ, ಸಾಮ್ರಾಜ್ಯಶಾಹಿ ಅಮೆರಿಕಾ ಕ್ಯೂಬಾ, ವೆನಿಜುವೆಲ ಮತ್ತು ಇರಾನ್ ಗಳ ವಿರುದ್ಧ ಆರ್ಥಿಕ ಮತ್ತು ರಾಜಕೀಯ ದಾಳಿ ನಡೆಸುತ್ತಲೇ ಇದೆ. ತನ್ನದೇ ಮಿತ್ರ ರಾಷ್ಟ್ರಗಳಿಗೂ ಇಲ್ಲದಂತೆ ಎಲ್ಲ ಆರೋಗ್ಯ ಸಲಕರಣೆಗಳನ್ನೂ ತಾನೇ ವಶಪಡಿಸಿಕೊಳ್ಳ ಬಯಸುತ್ತದೆ. ಜರ್ಮನಿಗೆ ತೆರಳಬೇಕಿದ್ದ ಮುಖಕವಚಗಳನ್ನು ತನಗಾಗಿ ತರಿಸಿಕೊಂಡ ಅಮೆರಿಕದ ನಡೆಯನ್ನು ಬರ್ಲಿನ್‌ನ ಆಂತರಿಕ ಮಂತ್ರಿವರ್ಯರು "ಆಧುನಿಕ ಕಡಲ್ಗಳ್ಳತನವೆಂದು" ಧಿಕ್ಕರಿಸಿದ್ದಾರೆ. ಅಮೆರಿಕೆಯ ಅತಿದುಬಾರಿ ಖಾಸಗೀ ಆರೋಗ್ಯ ಸೇವೆಗಳ ಕಾರಣದಿಂದ ಅಲ್ಲಿ ಸಾವಿರಾರು ಜನ ಸಾಯುತ್ತಿರುವಾಗ, ಟ್ರಂಪ್ ವಿಶ್ವ ಆರೋಗ್ಯ ಸಂಸ್ಥೆಗೆ ದೇಶದ ವಂತಿಗೆಯನ್ನು ನಿಲ್ಲಿಸಿದ್ದಾರೆ. ಏಕೆಂದರೆ ಈ ಸಂಸ್ಥೆಯು ಕೊರೊನ ವೈರಸ್‌ನ ಹರಡುವಿಕೆಯನ್ನು ಮುಚ್ಚಿಡಲು ಚೀನಾದ ಜೊತೆ ಕೈಗೂಡಿಸಿದೆಯೆಂದು ಆರೋಪಿಸುತ್ತಿದ್ದಾರೆ.

ಜಗತ್ತು ಕೊರೊನಾ ಪಿಡುಗಿನಿಂದ ಪೀಡಿತವಾಗಿರುವ ಈ ಕಾಲದಲ್ಲಿ ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನ್‌ರ ದೂರದೃಷ್ಟಿಯ ತಿಳುವಳಿಕೆಯನ್ನು ನೆನೆಯೋಣ; ರಷ್ಯಾದಲ್ಲಿ ಮಾನವೀಯ ವ್ಯವಸ್ಥೆಯಾದ ಸಮಾಜವಾದವನ್ನು ತರಲು ಅವರು ನಡೆಸಿದ ಪ್ರಯತ್ನಗಳನ್ನು ಸ್ಮರಿಸೋಣ.

ಬಡವರ ಸಿಟ್ಟು ರಟ್ಟೆಗೆ ಬಂದರೆ .. .. .. ಪುಟ 6 ರಿಂದ

ಇಂತಹ ರಾಜ್ಯ ಸರ್ಕಾರಗಳ ಸ್ವಾಯತ್ತತೆಯನ್ನು ಕೇಂದ್ರವು ದಮನ ಮಾಡುತ್ತಿದೆ. ಇದು ನಿಲ್ಲಬೇಕು. ರಾಜ್ಯಗಳ ಅಧಿಕಾರವನ್ನು ಸಂವಿಧಾನಬದ್ಧವಾಗಿ ಬಲಪಡಿಸಬೇಕು.

- ಎರಡು ವರ್ಷಗಳ ಹಿಂದೆ ಆರ್.ಬಿ.ಐ ಬಳಿಯಿದ್ದ ಬಂಡವಾಳವನ್ನು(ಸುಮಾರು ರೂ. 90000 ಕೊಟಿ) ಬಳಿದುಕೊಂಡು ಕೇಂದ್ರವು ನುಂಗಿಬಿಟ್ಟಿತು. ಅದು ಇದ್ದಿದ್ದರೆ ಇಂದು ನಾವು ಎದುರಿಸುತ್ತಿರುವ ಬಿಕ್ಕಟ್ಟಿನ ಸಂದರ್ಭದಲ್ಲಿ ನೆರವಿಗೆ ದೊರೆಯುತ್ತಿತ್ತು.
- ಸಮಸ್ಯೆಯಲ್ಲದ ಸಮಸ್ಯೆಗಳನ್ನುಸಮಸ್ಯೆಗಳನ್ನಾಗಿ ಸೃಷ್ಟಿಸಿ ಮುಗ್ದ ಜನರ ಬದುಕನ್ನು, ಸಮಾಜದ ಆರೋಗ್ಯವನ್ನು ಹಾಳುಗೆಡವುದನ್ನು ಕೇಂದ್ರ ನಿಲ್ಲಿಸಬೇಕು.
- 'ದುಡಿಮೆಗಾರರ ಭಾರತವೇ ನಿಜವಾದ ಭಾರತ' ಎನ್ನುವುದನ್ನು ಮನದಟ್ಟು ಮಾಡಿಕೊಂಡು ಬಂಡವಳಿಗರ(ಸುಡೋ ವೆಲ್ತ್ ಕ್ರಿಯೆಟರ್ಸ್‌ಗಳ) ವೈಭವೀಕರಣವನ್ನು ನಿಲ್ಲಿಸಬೇಕು.
- ಸಾಂಕೇತಿಕ ಕ್ರಮಗಳಿಂದ ಕರೋನಾವನ್ನಾಗಲಿ ಅಥವಾ ಆರ್ಥಿಕ ದುರಂತವನ್ನಾಗಲಿ ತಡೆಯುವುದು–ಪರಿಹರಿಸುವುದು ಸಾಧ್ಯವಿಲ್ಲ. ಬಡವರ ಸಿಟ್ಟು ರಟ್ಟೆಗೆ ಬರುವ ಮುನ್ನ ಸರ್ಕಾರ ಎಚ್ಚೆತ್ತುಕೊಂಡು ಆರ್ಥಿಕ ಪುನಶ್ಚೇತನ ಹಾಗೂ ಕೋವಿಡ್ ಪರಿಹಾರದ ಬಗ್ಗೆ ವಾರ್‌ರೂಮ್ ಮೂಲಕ ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಲೇಬರ್ ಕೋಡ್ ಕ್ರಮಗಳ ಅನುಷ್ಠಾನವನ್ನು ತಡೆಹಿಡಿದು ಕಾರ್ಮಿಕ ಸಂಘಟನೆಗಳ ಶೋಷಣೆಯನ್ನು ಸರ್ಕಾರ ನಿಲ್ಲಿಸಬೇಕು. ಲೇಬರ್ ಕೋಡ್ ಅನುಷ್ಠಾನದ ಸಮಯ ಇದಲ್ಲ.
- ಕೋವಿಡ್ ದುರಂತದಿಂದಾಗಿ 'ಹಸಿವು' ಬ್ರಹ್ಮರಾಕ್ಷಸದಂತೆ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಇದನ್ನು ಎದುರಿಸುವುದು–ನಿವಾರಿಸುವುದು ನಮಗೆ ಆದ್ಯತೆಯ ಸಂಗತಿಯಾಗಬೇಕು. ಹಸಿವನ್ನು ನಿವಾರಿಸಿದ್ದೇವೆ ಎಂಬ ಒಳಜಂಬದ ಮಾತುಗಳನ್ನು ನಿಲ್ಲಿಸಬೇಕು.
- ನಮ್ಮದು ರೂ.224.89 ಲಕ್ಷ ಕೋಟಿ ಜಿಡಿಪಿಯ ಆರ್ಥಿಕತೆ. ನಮ್ಮ 2020–2021ರ ಬಜೆಟ್ ಗಾತ್ರ ರೂ.30.42 ಲಕ್ಷ ಕೋಟಿ. ಇಂತಹ ಭಾರತಕ್ಕೆ ಸರಿಸುಮಾರು ರೂ. 5 ಲಕ್ಷ ಕೋಟಿ ಗಾತ್ರದ 'ದುಡಿಮೆಗಾರ ಭಾರತ'ದ ರಕ್ಷಣೆಗೆ ಪ್ಯಾಕೇಜ್ ಕೈಗೊಳ್ಳುವುದು ನಮಗೆ ಕಷ್ಟವಾಗಬಾರದು.

ಶತಮಾನೋತ್ಸವ ಲೇಖನ ಮಾಲೆ-22

ಬಂಗಾಳದ ಬರಗಾಲ: ಜನಸಾಮಾನ್ಯರು ಮತ್ತು ದೇಶದ ಸೇವೆಯಲ್ಲಿ ಕಮ್ಯುನಿಸ್ಟರು

ಬಂಗಾಳದ ಬರಗಾಲ ಕುರಿತು ಪಕ್ಷವು ಅಖಿಲ ಭಾರತ ಮಟ್ಟದಲ್ಲಿ ನಡೆಸಿದ ಪ್ರಚಾರಾಂದೋಲನ ಮತ್ತು ಪರಿಹಾರ ಕಾರ್ಯವು ಭಾರತೀಯ ರಾಜಕೀಯದ ಮೇಲೆ ಪರಿಣಾಮ ಬೀರಿತು. ಬರಗಾಲ, ಬೆಲೆಏರಿಕೆ ಮತ್ತು ಹೊಟ್ಟೆಗಿಲ್ಲದೇ ಸಾಯುವ ಸ್ಥಿತಿ ಬಂಗಾಳದಲ್ಲಿ ತೀವ್ರವಾಗಿತ್ತಾದರೂ, ದೇಶದಾದ್ಯಂತ ಅದು ಸಾಮಾನ್ಯವಾಗಿತ್ತು. ಪ್ರತಿಯೊಂದು ಪ್ರಾಂತದಲ್ಲೂ ಅದರದೇ ಆದ ಗುಣ ಲಕ್ಷಣಗಳಿಗೆ ಅನುಸಾರವಾಗಿ ಅದು ಕಾಣಿಸಿಕೊಂಡಿತ್ತು. ದೇಶದ ಎಲ್ಲಾ ಕಡೆಗಳಲ್ಲಿಯೂ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಬಿಕ್ಕಟ್ಟು ಎದ್ದುಕಾಣುತ್ತಿತ್ತು. ಭಾರತದಲ್ಲಿ ಆಗ ಅಸ್ತಿತ್ವದಲ್ಲಿದ್ದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು ಬ್ರಿಟಿಷರ ಆಳ್ವಿಕೆ ಕೊನೆಗೊಂಡ ನಂತರ ಬದಲಾಯಿಸುವುದೊಂದೇ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದು ಪ್ರಗತಿಪರ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಮನಸ್ಸುಳ್ಳ ಜನರಿಗೆ ಮನದಟ್ಟಾಗಿತ್ತು. ಆದಷ್ಟು ಬೇಗ ಈ ಕೆಲಸವನ್ನು ಈಡೇರಿಸಬೇಕು ಎಂಬ ವಿಚಾರದಲ್ಲಿ ಹಲವಾರು ಜನವಿಭಾಗಗಳಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್



ಬ್ರಿಟಿಶ್ ಆಳ್ವಿಕೆ ಸೃಷ್ಟಿಸಿದ ಬರ



ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಪೀಪಲ್ಸ್ ವಾರ್' ನಲ್ಲಿ ಬರ ಕುರಿತ ಪ್ರತ್ಯಕ್ಷ ವರದಿ-ಸಾವಿನ ಸಾಲುಗಳು

1943ರಲ್ಲಿ ಬಂಗಾಳವು ಭಾರತದ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಬರಗಾಲವನ್ನು ಎದುರಿಸಿತು. ಬಂಗಾಳ, ಒರಿಸ್ಸಾ, ಬಿಹಾರ ಮತ್ತು ಅಸ್ಸಾಂಗಳಲ್ಲಿ ಭೀಕರ ಪರಿಸ್ಥಿತಿ ಉಂಟಾಗಿತ್ತು. ಹಸಿವಿನ ಸಾವುಗಳು, ಅಭಾವ ಮತ್ತು ಸರ್ಕಾರಿ ಆಡಳಿತದ ವೈಫಲ್ಯದ ಕಾಲವೆಂದೇ ಈ ಅವಧಿಯನ್ನು ಗುರುತಿಸಲಾಗುತ್ತದೆ. ಆಹಾರ ಬೆಲೆಗಳು 300% ನಿಂದ 1000%ನಷ್ಟು ಏರಿದ್ದವು. ಜನಸಾಮಾನ್ಯರಿಗೆ ಆಹಾರ ಸಿಗುವುದೇ ದುಸ್ತರವಾಗಿತ್ತು. ಆಹಾರಕ್ಕಾಗಿ ಜನರ ಸರತಿಸಾಲುಗಳು ದಿನನಿತ್ಯದ ಲಕ್ಷಣಗಳಾಗಿದ್ದವು. ಪತ್ರಿಕಾ ವರದಿಗಳ ಪ್ರಕಾರ, 12.5 ಕೋಟಿ ಜನರು ಹೊಟ್ಟೆಗಿಲ್ಲದೇ ಸತ್ತರು ಮತ್ತು ಅನೇಕ ಜನ ತಮ್ಮ ಜೀವ ಉಳಿಸಿಕೊಳ್ಳಲು ಕಕ್ಕೆ ಬೀಜ ಮತ್ತು ಎಲೆಗಳನ್ನು ತಿನ್ನುತ್ತಿದ್ದರು. ಇಂತಹ ಗೋಳಿನ ಸನ್ನಿವೇಶದಲ್ಲಿ, ಕಮ್ಯುನಿಸ್ಟ್ ಪಕ್ಷ ವಹಿಸಿದ ಪಾತ್ರ ವಿಶೇಷ ಉಲ್ಲೇಖ ಯೋಗ್ಯವಾದದ್ದು.

ಕಮ್ಯುನಿಸ್ಟ್ ಪಕ್ಷವು 1943ರ ಸ್ವಾತಂತ್ರ್ಯ ದಿನ(ಆಗ ಜನವರಿ 26ರಂದು)ದ ಸಂದರ್ಭದಲ್ಲಿ ಹೊರತಂದ ತನ್ನ ಪ್ರಣಾಳಿಕೆಯಲ್ಲಿ ಈ ಬರಗಾಲವನ್ನು ಭಾರತದ ಭೀಕರ ಆಂತರಿಕ ಗಂಡಾಂತರವೆಂದು ಮತ್ತು ಅದು ಇಡೀ ದೇಶದ ಮೇಲೆ ಕರಿನೆರಳನ್ನು ಹರಡಿದೆ ಎಂದು ಸಾರಿತು. "ಆಹಾರವಿಲ್ಲದೇ ಬಂಗಾಳದ 50 ಲಕ್ಷ ಜನರು ಅದಾಗಲೇ ಅಳಿದುಹೋಗಿದ್ದಾರೆ. ಕಾಂಗ್ರೆಸ್ಸಿಗರು ನಮ್ಮೆಲ್ಲಾ ಜನರನ್ನು ಒಟ್ಟುಗೂಡಿಸಿ, ಎಲ್ಲ ಹಿಂದೂಗಳು ಮತ್ತು ಮುಸ್ಲಿಮರು ತಮ್ಮ ತಮ್ಮ ಕುಟುಂಬಗಳ ಅನ್ನವನ್ನು ಮತ್ತು ಮಕ್ಕಳ ಹಾಲನ್ನು ರಕ್ಷಿಸಿಕೊಳ್ಳಬೇಕೆಂದು ಕರೆ ಕೊಡದಿದ್ದರೆ ಇದೇ ದುರ್ಗತಿ ಪ್ರತಿಯೊಂದು ಪ್ರಾಂತಕ್ಕೂ, ಇಡೀ ಭಾರತಕ್ಕೂ ಕಾದಿದೆ" ಎಂದು ಹೇಳಿತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಐಕ್ಯತೆಗಾಗಿ, ಒಂದು ಐಕ್ಯ ರಂಗಕ್ಕಾಗಿ ಮನವಿ, ಪಕ್ಷದ ಪ್ರಚಾರಾಂದೋಲನದ ಪ್ರಮುಖ ಅಂಶವಾಗಿತ್ತು. ಈ ಜಂಟಿ ಪ್ರಯತ್ನವನ್ನು ಆ ಸಮಯದಲ್ಲಿ ಬಲಹೀನಗೊಂಡಿದ್ದ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬೆಸೆಯುವ ಒಂದು ಸೇತುವಾಗಿಯೂ ಕಾಣಲಾಗಿತ್ತು. "ಆಹಾರ ಹೋರಾಟದ ಮುಂಚೂಣಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೆಲಸಮಾಡುವುದು ರಾಷ್ಟ್ರೀಯ ಮುಖಂಡರ ಬಿಡುಗಡೆಯ ಚಳುವಳಿಯನ್ನು ಬೆಂಬಲಿಸಬೇಕು ಎಂದು ಮುಸ್ಲಿಮರಿಗೆ ಮನವರಿಕೆಯಾಗುವ ದಿಕ್ಕಿನಲ್ಲಿ ಬಹು ಮಹತ್ವದ ತರ್ಕವಾಗುತ್ತದೆ; ನಾವು ನಮ್ಮ ದೇಶಬಾಂಧವರ ಸೇವೆಯಲ್ಲಿ ಜೊತೆಯಾಗಿ ಮಾಡುವ ಕೆಲಸಗಳು ಲೀಗಿನ ಬಗ್ಗೆ ಮತ್ತು ಅದರ ಬೇಡಿಕೆಗಳ ಬಗ್ಗೆ ಕಾಂಗ್ರೆಸ್ಸಿಗರ ತಪ್ಪುತಿಳುವಳಿಕೆಯನ್ನು ಹೋಗಲಾಡಿಸುತ್ತದೆ. ಆಹಾರಕ್ಕಾಗಿ ಸಂಗ್ರಾಮವು ನಿಜವಾಗಿಯೂ ಅಧಿಕಾರ ಮತ್ತು ಸ್ವಾತಂತ್ರ್ಯಕ್ಕಾಗಿನ ಸಂಗ್ರಾಮವಾಗಿ ಬಿಡುತ್ತದೆ" ಎಂದ ಆ ಪ್ರಣಾಳಿಕೆ 'ಆಹಾರಕ್ಕಾಗಿ, ರಕ್ಷಣೆಗಾಗಿ ಮತ್ತು ರಾಷ್ಟ್ರೀಯ ಮುಖಂಡರ ಬಿಡುಗಡೆಗಾಗಿ ನಮ್ಮ ಜನರ, ಕಾಂಗ್ರೆಸ್‌ನ ಮತ್ತು ಲೀಗಿನ ಅಬೇಧ್ಯ ಐಕ್ಯತೆಯತ್ತ ಮುನ್ನಡೆಯೋಣ.' ಎನ್ನುವ ಕರೆಯೊಂದಿಗೆ ತನ್ನ ಮನವಿಯನ್ನು ಕೊನೆಗೊಳಿಸಿತ್ತು.

ಆಹಾರ ಸಮಸ್ಯೆ, ಯುದ್ಧ ಮತ್ತು ಯುದ್ಧದಿಂದ ಹುಟ್ಟಿದ ಸಮಸ್ಯೆಗಳ ಬಗ್ಗೆ ಕೂಡ ಪಕ್ಷದ ಧೋರಣೆಯು ಸರ್ಕಾರ ಮತ್ತು ಇತರ ರಾಜಕೀಯ ಪಕ್ಷಗಳಿಗಿಂತ ಭಿನ್ನವಾಗಿತ್ತು. ಅದು ಕಾರ್ಮಿಕರ, ರೈತರ ಮತ್ತು ಇತರೆ ಸಾಮಾನ್ಯ ಜನವಿಭಾಗಳ ದಿನನಿತ್ಯದ ಬದುಕಿನ ಸಮಸ್ಯೆಗಳ ಪರಿಹಾರಕ್ಕೆ ತಳಕುಹಾಕಿಕೊಂಡಿತ್ತು.

ಬೆಲೆ ನಿಯಂತ್ರಣ, ಆಹಾರ ಧಾನ್ಯಗಳು ಹಾಗೂ ಇತರೆ ಅಗತ್ಯ ವಸ್ತುಗಳ ವಿತರಣೆಗಳಿಗೆ ಸಂಬಂಧಪಟ್ಟಂತೆ ಪಕ್ಷವು ಸರ್ಕಾರಕ್ಕೆ ಸಹಕಾರ ನೀಡುತ್ತಿದ್ದಾಗಲೂ ಸಹ ಅದರ ದುಷ್ಕೃತ್ಯಗಳ ವಿರುದ್ಧ ಚಳುವಳಿ ನಡೆಸಿತು ಮತ್ತು ಜನರನ್ನು ಅದರ ವಿರುದ್ಧ ಅಣಿನೆರೆಸಿತು. ಅಗತ್ಯ ವಸ್ತುಗಳ ಸಂಗ್ರಹ ಮತ್ತು ವಿತರಣೆ ಕೆಲಸಗಳಲ್ಲಿ ಆ ಉದ್ದೇಶಕ್ಕಾಗಿಯೇ ಪ್ರತ್ಯೇಕ ಸಂಘಟನೆಗಳನ್ನು ಹುಟ್ಟುಹಾಕಿ ಪಕ್ಷವು ಕ್ರಿಯಾಶೀಲವಾಗಿ ಭಾಗವಹಿಸಿತು. ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂಬ ಧ್ಯೇಯಮಂತ್ರವನ್ನು ಪಕ್ಷವು ಪಟ್ಟು ಹಿಡಿದು ಮುಂದುವರಿಸಿತು.

ದೊಡ್ಡ ಭೂಮಾಲಕರು, ಸಗಟು ವ್ಯಾಪಾರಿಗಳು ಮತ್ತು ಇತರ ಪಟ್ಟಭದ್ರ ಹಿತಾಸಕ್ತಿಗಳ ಲಾಭಕೋರತನವನ್ನು ತಡೆಯದೆ ಆಹಾರದ ಅಭಾವ ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸುವುದು ಸಾಧ್ಯವಿಲ್ಲ ಎಂದು ಕಮ್ಯುನಿಸ್ಟ್ ಪಕ್ಷವು ಸ್ಪಷ್ಟವಾಗಿ ಹೇಳಿತ್ತು. ದೊಡ್ಡ ಭೂಮಾಲಕರು ಮತ್ತು ಇತರರ ದಾಸ್ತಾನುಗಳನ್ನು ವಶಕ್ಕೆ ಪಡೆದು ಜನರಿಗೆ ವಿತರಿಸಬೇಕೆಂಬ ಪ್ರಾಯೋಗಿಕ ಸಲಹೆಗಳನ್ನು ಮುಂದಿಟ್ಟಿತು. ಬರಗಾಲ ಪೀಡಿತ ಪ್ರದೇಶಗಳಿಂದ ಆಹಾರಧಾನ್ಯಗಳನ್ನು ಬೇರೆ ಕಡೆಗೆ ರವಾನೆ ಮಾಡುವುದನ್ನು ತಡೆಯಬೇಕು ಎಂದು ಒತ್ತಾಯ ಮಾಡುವುದರ ಜತೆಯಲ್ಲೇ ಅಧಿಕಾರಿಗಳು ಮಾಡಲು ಸಿದ್ಧರಿಲ್ಲದ ಕಡೆಗಳಲ್ಲಿ ಆ ಕೆಲಸ ಕೈಗೊಳ್ಳಲು ಸ್ವಯಂಸೇವಕ ಸಂಘಟನೆಗಳನ್ನು ರಚಿಸಿತು. ಸ್ವಯಂಸೇವಕ ಸಂಘಟನೆಗಳು ಆಹಾರ ಧಾನ್ಯಗಳು ಮತ್ತಿತರ ಅಗತ್ಯ ವಸ್ತುಗಳನ್ನು ಕಳ್ಳದಾಸ್ತಾನು ಮಾಡುತ್ತಿದ್ದ ವರ್ತಕರು ಮತ್ತು ಭೂಮಾಲಕರ ವಿರುದ್ಧ ಕೂಡ ಕಾರ್ಯಾಚರಣೆ ಮಾಡಿದವು. ಭೂಮಾಲಕರು, ಸಗಟುವ್ಯಾಪಾರಿಗಳ ಸುಲಿಗೆಗಳ ವಿರುದ್ಧ ಮತ್ತು ಈ ಸುಲಿಗೆಗಾರರಿಗೆ ಕುಮ್ಮಕ್ಕು ನೀಡುತ್ತಿದ್ದ ಬ್ರಿಟಿಷ್ ಆಳರಸರ ವಿರುದ್ಧ ಚಳುವಳಿಯನ್ನು ಕಟ್ಟಿಬೆಳೆಸಲು ಕಮ್ಯುನಿಸ್ಟ್ ಪಕ್ಷವು ಕ್ರಿಯಾಶೀಲವಾಗಿ ತೊಡಗಿಕೊಂಡಿತ್ತು.

ಬಂಗಾಳದ ಬರಗಾಲ ಕುರಿತು ಪಕ್ಷವು ಅಖಿಲ ಭಾರತ ಮಟ್ಟದಲ್ಲಿ ನಡೆಸಿದ ಪ್ರಚಾರಾಂದೋಲನ ಮತ್ತು ಪರಿಹಾರ ಕಾರ್ಯವು ಭಾರತೀಯ ರಾಜಕೀಯದ ಮೇಲೆ ಪರಿಣಾಮ ಬೀರಿತು. ಬಂಗಾಳ ಬರಗಾಲಕ್ಕೆ ಸಂಬಂಧಪಟ್ಟ ಆಂದೋಲನದ ಸಮಯದಲ್ಲಿ ಪಕ್ಷದ ಧೋರಣೆಯು ಎಂತಹ ಸಂದರ್ಭದಲ್ಲಿಯೂ ಮತ್ತು ಯಾವುದೇ ಪರಿಸ್ಥಿತಿಯಲ್ಲೂ ಜನರ ಸೇವೆ ಸಲ್ಲಿಸಬೇಕು ಎಂಬುದಾಗಿತ್ತು.

ಬಂಗಾಳದಲ್ಲಿ ಪರಿಹಾರ ಕಾರ್ಯ ಸಂಘಟಿಸುವ ಸಲುವಾಗಿ ಪಕ್ಷವು ದೇಶದ ಎಲ್ಲಾ ಕಡೆಗಳಿಂದಲೂ ಆಹಾರ ಧಾನ್ಯಗಳನ್ನು ಕಲೆ ಹಾಕಿತು, ಹಣ ಸಂಗ್ರಹ ಮಾಡಿತು ಮತ್ತು ಅಗತ್ಯ ವಸ್ತುಗಳನ್ನು ಒಟ್ಟುಗೂಡಿಸಿತು. ಬಂಗಾಳದಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲು ಸ್ವಯಂಸೇವಕರನ್ನು ಮತ್ತು ವೈದ್ಯರುಗಳ ತಂಡವನ್ನೂ ಅಣಿನೆರೆಸಿತು. ಈ ಪರಿಹಾರ ಚಟುವಟಿಕೆಗಳಲ್ಲಿ ಪಕ್ಷದ ತೊಡಗಿಸಿಕೊಂಡದ್ದು ಜನರೊಂದಿಗೆ ಸಂಪರ್ಕ ಸಾಧಿಸಲು ಮತ್ತು ಜನರ ವಿಶ್ವಾಸ ಮತ್ತು ನಂಬಿಕೆ ಗಳಿಸುವಲ್ಲಿಯೂ ಸಹಾಯ ಮಾಡಿತು. ಬರಗಾಲ, ಬೆಲೆ ಏರಿಕೆ ಮತ್ತು ಹೊಟ್ಟೆಗಿಲ್ಲದೇ ನರಳುವ ಸಂತ್ರಸ್ತರಿಗೆ ಎಲ್ಲಾ ರೀತಿಯ ನೆರವು ಒದಗಿಸುವ ಮೂಲಕ ಭೂಮಾಲಕರ, ಕಳ್ಳಸಂತೆಕೋರರ ಮತ್ತು ಆಳುವವರ ಪಟ್ಟಭದ್ರ ವರ್ಗ ಹಿತಾಸಕ್ತಿಗಳನ್ನು ಬಯಲುಮಾಡಬೇಕಾದ್ದು ತನ್ನ ತಕ್ಷಣದ ಕೆಲಸ ಎಂದು ಕಮ್ಯುನಿಸ್ಟ್ ಪಕ್ಷ ಭಾವಿಸಿತು.

ಬರಗಾಲ, ಬೆಲೆಏರಿಕೆ ಮತ್ತು ಹೊಟ್ಟೆಗಿಲ್ಲದೇ ಸಾಯುವ ಸ್ಥಿತಿ ಬಂಗಾಳದಲ್ಲಿ ತೀವ್ರವಾಗಿತ್ತಾದರೂ, ದೇಶದಾದ್ಯಂತ ಅದು ಸಾಮಾನ್ಯವಾಗಿತ್ತು. ಪ್ರತಿಯೊಂದು ಪ್ರಾಂತದಲ್ಲೂ ಅದರದೇ ಆದ ಗುಣ ಲಕ್ಷಣಗಳಿಗೆ ಅನುಸಾರವಾಗಿ ಅದು ಕಾಣಿಸಿಕೊಂಡಿತ್ತು. ದೇಶದ ಎಲ್ಲಾ ಕಡೆಗಳಲ್ಲಿಯೂ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಬಿಕ್ಕಟ್ಟು ಎದ್ದುಕಾಣುತ್ತಿತ್ತು. ಭಾರತದಲ್ಲಿ ಆಗ ಅಸ್ತಿತ್ವದಲ್ಲಿದ್ದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು ಬ್ರಿಟಿಷರ ಆಳ್ವಿಕೆ ಕೊನೆಗೊಂಡ ನಂತರ ಬದಲಾಯಿಸುವುದೊಂದೇ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದು ಪ್ರಗತಿಪರ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಮನಸ್ಸುಳ್ಳ ಜನರಿಗೆ ಮನದಟ್ಟಾಗಿತ್ತು. ಆದಷ್ಟು ಬೇಗ ಈ ಕೆಲಸವನ್ನು ಈಡೇರಿಸಬೇಕು ಎಂಬ ವಿಚಾರದಲ್ಲಿ ಹಲವಾರು ಜನವಿಭಾಗಗಳಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ.

ಯುದ್ಧದ ಸಮಯದಲ್ಲಿ ಮತ್ತು ನಂತರ ತಲೆದೋರಿದ ಬರಗಾಲ, ಅಗತ್ಯ ವಸ್ತುಗಳ ಬೆಲೆಗಳಲ್ಲಿ ಏರಿಕೆ, ವೇತನದಾರರ ನಿಜ ಆದಾಯದಲ್ಲಿನ ಕುಸಿತ ಮತ್ತು ಇತರ ಸಂಕಷ್ಟಗಳು ಕಾರ್ಮಿಕರ ಮತ್ತು ಮಧ್ಯಮ-ವರ್ಗದ ನೌಕರರ ಸಂಘಟಿತ ಹೋರಾಟಗಳಿಗೆ ಚಾಲನೆ ನೀಡಿದವು. ಯುದ್ಧದ ಸಮಯದಲ್ಲಿ ಕಾಣಿಸಿಕೊಂಡಿದ್ದ ಆಹಾರದ ಅಭಾವವು 1945ರ ಹೊತ್ತಿಗೆ ಉಲ್ಬಣಗೊಂಡಿತು. ವೈಸ್‌ರಾಯ್ ಲಾರ್ಡ್ ವೇವೆಲ್ ಪ್ರಕಾರ ಈ ಬರಗಾಲದಿಂದ 10 ಕೋಟಿ ಜನರು ಬಾಧಿತರಾಗಿದ್ದರು.


ಯುದ್ಧ ಮುಗಿದ ಕೂಡಲೇ ಭಾರಿ ದೊಡ್ಡ ರೀತಿಯಲ್ಲಿ ಆಹಾರಕ್ಕಾಗಿ ಆರಂಭವಾದ ಕಾರ್ಮಿಕರ

ಪುಟ 14 ನೋಡಿ

ಜನರಕ್ಷಾ ಸಮಿತಿಯಿಂದ ಬರಪೀಡಿತರಿಗೆ ಆಹಾರ ಮತ್ತು ಬಟ್ಟೆ ಹಂಚಿಕೆ



ಮಹಿಳಾ ಆತ್ಮರಕ್ಷಾ ಸಮಿತಿ ನೇತೃತ್ವದಲ್ಲಿ ಬರಪೀಡಿತ ಮಹಿಳೆಯರ ಅಸೆಂಬ್ಲಿ ಘೇರಾವೊ



ಕಳ್ಳ ದಾಸ್ತಾನುಗಳನ್ನು ಹೊರಗೆಳೆಯುತ್ತಿರುವ ವಿದ್ಯಾರ್ಥಿ ಕಾರ್ಯಕರ್ತರು



ಕೇರಳ ಕೊವಿಡ್–19ನ್ನು ಜಗ್ಗಿಸುತ್ತಿದೆ, ಹೇಗೆ?

ಪುಟ 8 ರಿಂದ

ಯುರೋಪಿನಿಂದ ವಲಸಿಗರು ಮರಳುತ್ತಿದ್ದಂತೆ ಪರಿಸ್ಥಿತಿ ಕೈಮೀರಿ ಹೋಗುವಂತೆ ಕಂಡಿತು. ಆದರೆ ಈಗ ಈ ಸಮರವನ್ನು ಯಶಸ್ವಿಯಾಗಿ ಕೊನೆಗೊಳಿಸಲಾಗಿದೆ. ಪ್ರತಿದಿನ ಐಸೊಲೇಷನ್(ದೂರೀಕರಿಸಿಟ್ಟ) ಆಸ್ಪತ್ರೆಗಳಿಂದ ಗುಣಮುಖರಾದ ರೋಗಿಗಳು ತಮ್ಮ ಆರೋಗ್ಯಪಾಲಕರೊಂದಿಗೆ ಹೊರಬರುತ್ತಿರುವ ದೃಶ್ಯಗಳನ್ನು ನಾವು ನೋಡುತ್ತಿದ್ದೇವೆ. ಅತ್ಯಂತ ದೊಡ್ಡ ಕರತಾಡನ 93 ಮತ್ತು 88 ವರ್ಷ ವಯಸ್ಸಿನ ದಂಪತಿಗೆ ಮೀಸಲಾಯಿತು. ಗಂಭೀರ ಮತ್ತು ಕ್ಲಿಷ್ಟ ಆರೋಗ್ಯ ಪರಿಸ್ಥಿತಿಯಲ್ಲಿದ್ದ ಇವರನ್ನು ಅಕ್ಷರಶಃ ಸಾವಿನ ದವಡೆಯಿಂದ ಹೊರಗೆಳೆದು ತರಲಾಯಿತು.

ಆರೋಗ್ಯ ಸಿಬ್ಬಂದಿಯ ಹುರುಪು ಅತ್ಯುನ್ನತ ಮಟ್ಟದಲ್ಲಿದೆ. ವಿಶೇಷ ತರಬೇತಿ, ಸುರಕ್ಷಾ ಉಡುಗೆಗಳು, ವೈಜ್ಞಾನಿಕ ಡ್ಯೂಟಿ ಆವರ್ತಗಳು, ಮತ್ತು ಬುಮುಖ್ಯವಾಗಿ, ಸಮಾಜದಿಂದ ತಾದಾತ್ಮ್ಯ ಹಾಗೂ ಸೌಹಾರ್ದತೆ, ಇವೆಲ್ಲವೂ ಅವರ ಹುರುಪನ್ನು ಶಿಖರಕ್ಕೇರಿಸಿವೆ. ಆರೋಗ್ಯ ಮಂತ್ರಿ ಕೆ.ಕೆ. ಶೈಲಜಾ ಟೀಚರ್, ತಮ್ಮನ್ನು ಕೇವಲ ಪರಾಮರ್ಶೆ ಸಮಿತಿಗಳಿಗಷ್ಟೇ ಸೀಮಿತ ಗೊಳಿಸಿಕೊಂಡಿಲ್ಲ, ಮುಂಚೂಣಿಯಲ್ಲಿ ಕೆಲಸ ಮಾಡುತ್ತಿರುವವರನ್ನು ವೈಯಕ್ತಿವಾಗಿ ತಲುಪುತ್ತಿದ್ದಾರೆ.

ಪ್ರತಿಂಯೊಂದು ಕೊವಿಡ್ ಸೋಂಕಿನ ಮಾರ್ಗ–ನಕಾಶೆ(ರೂಟ್‌ಮ್ಯಾಪ್) ಸಿದ್ಧಪಡಿಸಿ ಅದಕ್ಕೆ ಪ್ರಚಾರ ನೀಡಲಾಗಿದೆ, ಅವರ ಸಂಪರ್ಕಕ್ಕೆ ಬಂದಿರಬಹುದಾದವರನ್ನು ಎಚ್ಚರಿಸಲಾಗಿದೆ. ತೀವ್ರ ತಪಾಸಣೆ, ಗುರುತಿಸುವುದು, ಪ್ರತ್ಯೇಕಗೊಳಿಸಿಡುವುದು ಮತ್ತು ಶುಶ್ರೂಷೆ ಈ ಕ್ರಿಯಾ–ಆವರ್ತಗಳ ಪಾಲನೆ ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಕೇರಳದ ತಪಾಸಣಾ ಪ್ರಮಾಣ ದೇಶದಲ್ಲೇ ಅತಿ ಹೆಚ್ಚು. 'ಸಾಮಾಜಿಕ ಅಂತರ' ಎಂಬುದನ್ನು ಪ್ರೋತ್ಸಾಹಿಸುವಲ್ಲಿ 'ಬ್ರೇಕ್ ದಿ ಚೈನ್' ಪ್ರಚಾರಾಂದೋಲನ ಯಶಸ್ವಿಯಾಗಿದೆ. ಇದು, ನಿಜವಾಗಿಯೂ, ಒಂದು ಅತ್ಯಂತ ಮಹತ್ವದ ಪಾಟ. ಕೇವಲ ಲಾಕ್‌ಡೌನಿನಿಂದಲೇ ಕೊವಿಡ್ ಹರಡಿಕೆಯನ್ನು ತಡೆಯಲು ಸಾಧ್ಯವಿಲ್ಲ. ಅದು ಕುಟುಂಬಗಳೊಳಗೆ, ಶಯನಾಲಯ(ಡಾರ್ಮಿಟರಿ)ಗಳೊಳಗೆ ದ್ವಿಗುಣ ಗೊಳ್ಳುತ್ತದೆ, ರಾಷ್ಟ್ರೀಯ ಮಟ್ಟದಲ್ಲಿ ಇದುವರೆಗೆ ಸೋಂಕು ತಪಾಸಣೆ ಅತ್ಯಂತ ಅಸಮರ್ಪಕವಾಗಿದೆ.

ಪ್ರಭುತ್ವದ ಕರ್ತವ್ಯ.

ಲಾಕ್‌ಡೌನ್ ಜೀವನೋಪಾಯಗಳನ್ನು ಧ್ವಂಸ ಮಾಡುತ್ತದೆ. ಆದ್ದರಿಂದ ಆದಾಯ ವರ್ಗಾವಣೆ ಮತ್ತು ಉಚಿತ ರೇಷನ್‌ಗಳ ಮೂಲಕ ಬದುಕುಳಿಯುವುದನ್ನು ಖಾತ್ರಿಪಡಿಸುವುದು ಪ್ರಭುತ್ವದ ಕರ್ತವ್ಯ. ಜನಧನ್ ಖಾತೆಗಳಿಗೆ 500ರೂ. ವರ್ಗಾವಣೆ, ಮತ್ತು ಹೆಚ್ಚುವರಿ 5 ಕೆಜಿ ಧಾನ್ಯ ರೇಷನ್ ಏನೇನೂ ಸಾಲದು. ಕೇಂದ್ರದ ಪ್ಯಾಕೇಜಿನ ಒಂದು ಪ್ರಮುಖ ಭಾಗವಾದ ಕಟ್ಟಡ ಕಾರ್ಮಿಕರಿಗೆ ಪಾವತಿ, ವಾಸ್ತವವಾಗಿ ರಾಜ್ಯ ಮಟ್ಟದ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಗಳಿಂದ ಪಡೆದ ಹಣ.

ತದ್ವಿರುದ್ಧವಾಗಿ, ಕೇರಳದಲ್ಲಿ 55 ಲಕ್ಷ ಹಿರಿಯ ನಾಗರಿಕರು ಮತ್ತು ವಂಚಿತ ವಿಭಾಗಗಳವರು ರೂ.8500 ಕಲ್ಯಾಣ ಪಾವತಿಯಾಗಿ ಪಡೆದಿದ್ದಾರೆ. ಅಷ್ಟೇ ಸಂಖ್ಯೆಯ ಕಾರ್ಮಿಕರು ಕಲ್ಯಾಣ ನಿಧಿಗಳಿಂದ ತಲಾ ರೂ.1000–3000 ಪಡೆದಿದ್ದಾರೆ. ಪ್ರತಿಯೊಂದು ಕಟುಂಬಕ್ಕೆ ಒಂದು ಆಹಾರ ಪೊಟ್ಟಣವನ್ನು ಒದಗಿಸಲಾಗಿದೆ. ರೂ. 2000 ಬಡ್ಡಿರಹಿತ ಉಪಭೋಗ ಸಾಲಗಳನ್ನು ವಿತರಿಸಲಾಗಿದೆ. ಅಲ್ಲದೆ, ಸ್ಥಳೀಯ ಆಡಳಿತಗಳು ಸುಮಾರು 4 ಲಕ್ಷ ಊಟಗಳನ್ನು ಪ್ರತಿದಿನ ಸಾಮುದಾಯಿಕ ಅಡುಗೆ ಕೇಂದ್ರಗಳಿಂದ ತೀರಾ ಅಗತ್ಯವಿರುವವರಿಗೆ ಹಂಚಿವೆ. ವಲಸೆ ಕಾರ್ಮಿಕರ ಶಿಬಿರಗಳ ಮೇಲ್ವಿಚಾರಣೆ, ಹೊಸ ಶಿಬಿರಗಳನ್ನು ರಚಿಸುವುದು, ಶಿಬಿರದಲ್ಲಿ ಇರುವವರಿಗೆ ಔಷಧಿಗಳು ಮತ್ತು ಆಹಾರವನ್ನು ಖಾತ್ರಿಪಡಿಸುವುದು ಕೂಡ ಈ ಸ್ಥಳೀಯ ಸರಕಾರಗಳ ಕರ್ತವ್ಯವಾಗಿದೆ.

ರಾಜ್ಯ ಸರಕಾರವೊಂದರಿಂದಲೇ ಅಲ್ಲ.

ಇವೆಲ್ಲ ಹೇಗೆ ಸಾಧ್ಯವಾಯಿತು? ದಯವಿಟ್ಟು ಗಮನಿಸಿ, ಇದು ಆದದ್ದು ಕೇವಲ ರಾಜ್ಯ ಸರಕಾರವೊಂದರಿಂದಲೇ ಅಲ್ಲ. ಕೇರಳವನ್ನು ವಿಶಿಷ್ಟಗೊಳಿಸಿರುವುದು ರಾಜ್ಯ ಸರಕಾರದ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸ್ಥಳೀಯ ಸರಕಾರಗಳು, ಸಹಕಾರಿ ಸಂಸ್ಥೆಗಳು, ಮಹಿಳಾ ನೆರೆಹೊರೆ ಗುಂಪುಗಳು (ಕುಡುಂಬಶ್ರೀ) ಮತ್ತು ನಾಗರಿಕ ಸಮಾಜದ ಸಂಘಟನೆಗಳೊಂದಿಗೆ ಸಮಗ್ರೀಕರಿಸಿದರಿಂದ ಉಂಟಾಗಿರುವ ಸಮಷ್ಟಿ ಶಕ್ತಿಯೇ. ಈ ಆಗಸ್ಟ್ ಕೇರಳದಲ್ಲಿ ಸ್ಥಳೀಯ ಸರಕಾರಗಳನ್ನು ರೂಪಾಂತರಗೊಳಿಸಿದ ಜನತಾ ಯೋಜನೆಯ ಪ್ರಚಾರಾಂದೋಲನದ 25ನೇ ವರ್ಷ ಆರಂಭವಾಗುತ್ತಿದೆ. ಪ್ರವಾಹಗಳು ಮತ್ತು ಮಹಾಮಾರಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಸಾಮರ್ಥ್ಯಕ್ಕೆ ಸಾಕ್ಷಿಗಳಾಗಿವೆ.

ಇದು ತಾಂತ್ರಿಕ ಸಮಿತಿಗಳು ಮತ್ತು ರಾಜ್ಯಮಟ್ಟದಲ್ಲಿ ಕೆಲಸ ಮಾಡುವ ಗುಂಪುಗಳನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸಂಯೋಜಿಸುವುದರೊಂದಿಗೆ ನಡೆಸಿರುವ ಒಂದು ಬಹುಸ್ತರೀಯ ಯೋಜನಾ ಪ್ರಕ್ರಿಯೆಯ ಉದಾಹರಣೆ. ಮುಖ್ಯಮಂತ್ರಿಗಳು ಕೊವಿಡ್ ಸಮರದ ಮಾಹಿತಿಗಳನ್ನು ನೀಡುವ ಪ್ರತಿದಿನ ಸಾಯುಂಕಾಲದ ಪತ್ರಿಕಾಗೋಷ್ಠಿ ಟಿವಿಗಳಲ್ಲಿ ಪ್ರಸಾರವಾಗುತ್ತಿದ್ದು, ಇಂದು ಅತ್ಯಂತ ಹೆಚ್ಚು ಟಿವಿ ರೇಟಿಂಗ್‌ಗಳನ್ನು ಪಡೆದಿರುವ ಪ್ರಸಾರವಾಗಿದೆ. ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ಸಂದೇಶ ಪ್ರಸಾರವಾಗುವುದು ಬಹಳ ಮಹತ್ವದ್ದಾಗಿದೆ. ಈ ದೈನಂದಿನ ಮಾಹಿತಿ ನೀಡಿಕೆಗಳಿಂದಾಗಿ ಈ ಬಿಕ್ಕಟ್ಟಿನಲ್ಲಿ ಗೊಂದಲ ಉಂಟಾಗದಂತೆ ತಪ್ಪಿಸಲು ನಮಗೆ ಸಾಧ್ಯವಾಗಿದೆ.

ಸಾಕಷ್ಟು ಹಣಕಾಸು ಸಂಪನ್ಮೂಲಗಳ ಅಭಾವ ರಾಜ್ಯ ಸರಕಾರ ಎದುರಿಸುತ್ತಿರುವ ಅತ್ಯಂತ ದೊಡ್ಡ ಅಡ್ಡಿ. ರಾಜ್ಯದ ಸ್ವಂತ ಆದಾಯುಗಳು ಒಣಗಿ ಹೋಗಿವೆ. ಕೇಂದ್ರ ಸರಕಾರದಿಂದ ಜಿಎಸ್‌ಟಿ ಪರಿಹಾರಗಳ ಪಾವತಿ ನಾಲ್ಕು ತಿಂಗಳುಗಳ ಬಾಕಿ ಬರಬೇಕಾಗಿದೆ. ಎಸ್‌ಎಲ್‌ಆರ್ ಬಾಂಡುಗಳಿಗೆ ಸಾಲವನ್ನು ನಿಲ್ಲಿಸಲಾಗಿದೆ. ಲಾಕ್‌ಡೌನ್‌ನಿಂದ ಹೊರಬಂದ ನಂತರ ಆರ್ಥಿಕ ಉತ್ತೇಜನಕ್ಕಿರಲಿ, ಪರಿಹಾರಕ್ಕೂ ಸಾಕಷ್ಟು ಸಂಪನ್ಮೂಲಗಳಿಲ್ಲ. ಕೇಂದ್ರ ಸರಕಾರ ತನ್ನ ಹೆಜ್ಜೆ ಮುಂದಿಟ್ಟು ರಾಜ್ಯಗಳಿಗೆ ಸಾಕಷ್ಟು ಹಣಕಾಸು ಅವಕಾಶಗಳು ಸಿಗು ೦ತೆ ಮಾಡಬೇಕಾಗಿದೆ. ದುರದೃಷ್ಟವಶಾತ್, ದೇಶ ಒಂದು ಆರ್ಥಿಕ ಕುಸಿತವನ್ನು ಎದುರಿಸುತ್ತಿರುವಾಗ ರಾಜ್ಯ ಸರಕಾರಗಳು ತಮ್ಮ ವೆಚ್ಚಗಳನ್ನು ಕಡಿತ ಮಾಡುವುದೇ ಒಳ್ಳೆಯದು ಎಂಬುದು ಕೇಂದ್ರ ಸರಕಾರದ ಆಶಯವಿದ್ದಂತಿದೆ. ಇದು ಮುಠ್ಠಾಳ ಅರ್ಥಶಾಸ್ತ್ರ.

ಕೇರಳ ಕೊವಿಡ್–19ರ ವಿರುದ್ಧ ಭಾರತೀಯರ ಸಮರವನ್ನು ಆರಂಭಿಸಿದ ಮೊದಲ ರಾಜ್ಯ. ಈ ಸಮರದಲ್ಲಿ ಈಗಲೂ ಅದು ಮುಂಚೂಣಿಯಲ್ಲಿದೆ.

ಡಬ್ಲ್ಯು.ಹೆಚ್.ಓ ಮತ್ತು ಕೇಂದ್ರ ಸರ್ಕಾರದ ಆರೋಗ್ಯ ಹಾಗೂ ಕೇಂದ್ರ ಕುಟುಂಬ ಕಲ್ಯಾಣ ಸಚಿವಾಲಯದ ನಿರ್ದೇಶನಗಳು ಬಂದ ಕೂಡಲೇ ಜನವರಿ 18, 2020 ರಿಂದಲೇ ಅದನ್ನು ಎದುರಿಸುವ ಕಾರ್ಯಾಚರಣೆ ಆರಂಭಿಸಿತು. ಅದರಿಂದಾಗಿ ದೇಶದಲ್ಲಿ ಮೊದಲ ಸೋಂಕು ಪತ್ತೆಯಾದದ್ದು ಕೇರಳದಲ್ಲೆ ಜನವರಿ 30ರಂದು. **ಆ ವೇಳೆಗಾಗಲೇ ಎಲ್ಲ 14 ಜಿಲ್ಲೆಗಳಲ್ಲೂ ಕೊವಿಡೊ ನಿಯಂತ್ರಣ ಕೊಠಡಿಗಳು ಕಾರ್ಯಾರಂಭ ಮಾಡಿದ್ದವು. ಅಂದಿನಿಂದ ಪ್ರತಿದಿನ ಸ್ವತಃ ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಮಂತ್ರಿಗಳೇ ಪತ್ರಿಕಾ ಗೋಷ್ಠಿಗಳಲ್ಲಿ ಮಾಹಿತಿಗಳನ್ನು ಕೊಡುತ್ತಿದ್ದಾರೆ..**

ಬೇರೆಡೆಗಳಲ್ಲಿ 'ಸಾಮಾಜಿಕ ಅಂತರ'ದ ಮಾತು ಇದ್ದರೆ, ಇಲ್ಲಿ "ದೈಹಿಕ ಅಂತರ– ಸಾಮಾಜಿಕ ಐಕ್ಯತೆ" ಯ ಕರೆಯೊಂದಿಗೆ ಕೊರೊನ ವೈರಾಣುವಿನ ಪ್ರಸರಣವನ್ನು ತಡೆಯಲು "ಬ್ರೇಕ್ ದಿ ಚೈನ್"" ಪ್ರಚಾರಾಂದೋಲನದ ಮೂಲಕ ಸೋಂಕಿನ ಪ್ರಸರಣವನ್ನು ತಡೆಗಟ್ಟುವ ವ್ಯಾಪಕ ಪ್ರಯತ್ನವನ್ನು ನಡೆಸಲಾಯಿತು.

ಆದರೆ ಆಗ ನಿರ್ದೇಶನಗಳನ್ನು ಕಳಿಸಿದ್ದ ಕೇಂದ್ರ ಸರಕಾರ ನಮಸ್ತೆ ಟ್ರಂಫ್ ಸಂಭ್ರಮದಲ್ಲಿ ಮಗ್ನವಾಗಿತ್ತು.

ಆದ್ದರಿಂದ ಸೋಂಕು ಪತ್ತೆಯಾದ ಸಂಖ್ಯೆಯಲ್ಲಿ ಕೇರಳ ಮೊದಲ ಸ್ಥಾನದಲ್ಲಿತ್ತು.

ಮಾರ್ಚ್ 11 ರಂದು ಡಬ್ಲ್ಯು.ಹೆಚ್.ಓ ಇದು ಮಹಾಮಾರಿ(ಪಾಂಡೆಮಿಕ್) ಎಂದು ಘೋಷಿಸಿತು.

ಆಗಲೂ ಮಾರ್ಚ್ 13 ರಂದೂ ಕೇಂದ್ರ ಆರೋಗ್ಯ ಮಂತ್ರಾಲಯ ದೇಶದಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿ ಇನ್ನೂ ಇಲ್ಲ ಎಂದಿತು. ಆಗ ಆಳುವ ಪಕ್ಷ ಮಧ್ಯಪ್ರದೇಶದಲ್ಲಿ ಚುನಾಯಿತ ಸರಕಾರವನ್ನು ಉರುಳಿಸಲು ಶಾಸಕರನ್ನು ಮುಂಬೈಗೆ ಒಯ್ಯುವುದರಲ್ಲಿ ಮಗ್ನವಾಗಿತ್ತು.

ಪ್ರಧಾನ ಮಂತ್ರಿಗಳು ಕೊವಿಡ್–19ರ ಬಗ್ಗೆ ದೇಶವನ್ನುದ್ದೇಶಿಸಿ ಮೊದಲ ಪ್ರಸಾರ ಭಾಷಣ ಮಾಡಿದ್ದು ಮಾರ್ಚ್ 19ರಂದು.

ಈ ನಡುವೆ ಮಾರ್ಚ್ 14 ರಂದು ಪತ್ತೆಯಾದ 90 ಕೇಸುಗಳಲ್ಲಿ 21 ಕೇರಳದ್ದಾಗಿದ್ದು, ಮಹಾರಾಷ್ಟ್ರದಲ್ಲೂ ಆ ವೇಳೆಗೆ 21 ಸೋಂಕುಗಳು ಪತ್ತೆಯಾಗಿದ್ದವು. ಮಾರ್ಚ್ 15 ರಂದು ಮೊದಲ ಬಾರಿಗೆ ಕೇರಳ ಮೊದಲ ಸ್ಥಾನದಿಂದ ಕೆಳಗಿಳಿಯಿತು. ಮಹಾರಾಷ್ಟ್ರ ಮೊದಲ ಸ್ಥಾನಕ್ಕೇರಿತು.

ಮಾರ್ಚ್ 28ರಂದು ಕೇರಳದಲ್ಲಿ ಮೊದಲ ಕೊವಿಡ್ ಸಾವು ಸಂಭವಿಸಿತು. ಅದರೆ ಆ ವೇಳೆಗಾಗಲೇ ದೇಶದ ಇತರೆಡೆಗಳಲ್ಲಿ 20 ಸಾವುಗಳು ಸಂಭವಿಸಿದ್ದವು.

ನಂತರ ಎಪ್ರಿಲ್ 1 ರವರೆಗೂ ಸೋಂಕು ಪತ್ತೆಯಾದ ಪ್ರಕರಣಗಳ ಸಂಖ್ಯೆಯಲ್ಲಿ ಮೊದಲ ಎರಡು ಸ್ಥಾನಗಳಲ್ಲಿ ಮಹಾರಾಷ್ಟ್ರ ಮತ್ತು ಕೇರಳವೇ ಇದ್ದವು. ಮಹಾರಾಷ್ಟ್ರ ಈಗಲೂ 2334 ರೊಂದಿಗೆ ಮೊದಲ ಸ್ಥಾನದಲ್ಲೇ ಇದೆ. ಕೇರಳ 378ರೊಂದಿಗೆ ಹತ್ತನೇ ಸ್ಥಾನದಲ್ಲಿದೆ.

ಎಪ್ರಿಲ್ 1 ರಂದು ಕೇರಳ ಮೂರನೇ ಸ್ಥಾನಕ್ಕೆ ಇಳಿಯಿತು. ಎಪ್ರಿಲ್ 2 ರಂದು 4 ನೇಸ್ಥಾನಕ್ಕೆ, 5 ರಂದು 5ನೇ ಸ್ಥಾನಕ್ಕೆ, 7 ರಂದು 7ನೇ ಸ್ಥಾನಕ್ಕೆ, 8ರಂದು 9 ನೇ ಸ್ಥಾನಕ್ಕೆ ಮತ್ತು ಎಪ್ರಿಲ್ 10ರಂದು 10ನೇ ಸ್ಥಾನಕ್ಕೆ ಇಳಿದಿದೆ.


- ದೇಶದಲ್ಲಿ ಸೋಂಕು ಪತ್ತೆಯ ಕೆಲಸ ಈಗಲೂ ಬಹಳ ಸೀಮಿತವಾಗಿಯೇ ನಡೆಯುತ್ತಿದೆ. ಅದಕ್ಕೆ ಹೋಲಿಸಿದರೆ ಕೇರಳದಲ್ಲಿ ಅದು ಹೆಚ್ಚು ವ್ಯಾಪಕವಾಗಿ ನಡೆಯುತ್ತಿದೆ.
- ಕೇರಳದ ಜನಸಂಖ್ಯೆ ದೇಶದ ಜನಸಂಖ್ಯೆಯ 2.5ಶೇ.ದಷ್ಟು, ಆದರೆ ಇದುವರೆಗೆ ಆಗಿರುವ ಸೋಂಕು ತಪಾಸಣೆಯಲ್ಲಿ 7.5% ದಷ್ಟು ಕೇರಳದಲ್ಲೇ ಆಗಿದೆ.
- ಇಡೀ ದೇಶದಲ್ಲಿ ಈಗ ಮೂರು ವಾರಗಳ ಲಾಕ್ ಡೌನ್ ಕೊನೆಯಲ್ಲಿ ಸೋಂಕು ಪತ್ತೆಯಾದವರ ಸಂಖ್ಯೆ ಸುಮಾರು 10ಶೇ. ದರದಲ್ಲಿ ಏರುತ್ತಿದ್ದರೆ, ಕೇರಳದಲ್ಲಿ ಹೆಚ್ಚು ವ್ಯಾಪಕವಾದ ಪತ್ತೆ ಪ್ರಯತ್ನ ನಡೆದಾಗಿಯೂ ಆ ಪ್ರಮಾಣ ಇದೀಗ 2ಶೇ.ಕ್ಕೆ ಇಳಿದಿದೆ.


ಅಂದರೆ ಕೇರಳದ ಮಾದರಿಯನ್ನು ಅನುಸರಿಸಿದ್ದರೆ ಸಂಪೂರ್ಣ ಲಾಕ್ ಡೌನ್ ಮುಂದುವರೆಸುವ, ಜನಗಳ ಸಂಕಷ್ಟಗಳನ್ನು ಮುಂದುವರೆಸುವ ಅಗತ್ಯವಿರುತ್ತಿರಲಿಲ್ಲ.


- ಇಡೀ ದೇಶದಲ್ಲಿ ಮೊದಲ ಬಾರಿಗೆ ಕೊರೊನ ವೈರಸ್ ಸೋಂಕು ಕೇರಳದಲ್ಲೇ ದಾಖಲಾಗಿದ್ದರೂ ಇದುವರೆಗೆ ದಾಖಲಾಗಿರುವ ಕೊವಿಡ್ 324 ಸಾವುಗಳಲ್ಲಿ ಕೇರಳದಲ್ಲಿ ಆಗಿರುವುದು 3 ಮಾತ್ರ., ಅಂದರೆ 1ಶೇ.ಕ್ಕಿಂತಲೂ ಕಡಿಮೆ.
- ಸೋಂಕು ತಗಲಿದವರ ಸಂಖ್ಯೆಗೆ ಹೋಲಿಸಿದರೆ ಸಾವುಗಳ ಪ್ರಮಾಣ ಇಡೀ ದೇಶದಲ್ಲಿ ಸುಮಾರು 3.5 ಶೇ., ಕೇರಳದಲ್ಲಿ ಅದು 0.8%.
- ಸೋಂಕು ಪತ್ತೆಯಾದವರಲ್ಲಿ ಗುಣಮುಖರಾದವರ ಪ್ರಮಾಣ ದೇಶದಲ್ಲಿ ಸುಮಾರು 11ಶೇ. ಕೇರಳದಲ್ಲಿ ಇದು ಈಗ 50%ವನ್ನು ದಾಟಿದೆ.


ಅಂದರೆ ಗುಣಮುಖರಾದವರ ಸಂಖ್ಯೆ ಶುಶ್ರೂಷೆ ಪಡೆಯುವವರ ಸಂಖ್ಯೆಗಿಂತ ಹಚ್ಚಾಗಿರುವ ಮೊದಲ ರಾಜ್ಯ ಕೇರಳ ಎಂಬ ಹೊಸದೊಂದು ದಾಖಲೆಯನ್ನು ನಿರ್ಮಿಸಿದೆ.


ಆದರೂ, ಸಮರ ಇನ್ನೂ ಮುಗಿದಿಲ್ಲ, ನಾವು ಎಚ್ಚರದಿಂದಲೇ ಇರುತ್ತೇವೆ, ನಮ್ಮ ಕೆಲಸಗಳನ್ನು ಮುಂದುವರೆಸುತ್ತೇವೆ ಎಂದು ಕೇರಳದ ಎಲ್‌ಡಿಎಫ್ ಸರಕಾರದ ಮುಖಂಡರು ಹೇಳುತ್ತಿದ್ದಾರೆ.











ಅರ್ಥವ್ಯವಸ್ಥೆಯ ಕ್ರಿಮಿನಲ್ ಅಸಮರ್ಥ ನಿರ್ವಹಣೆ



ಈ ಸರ್ಕಾರ ಬಿಕ್ಕಟ್ಟಿನ ನಿರ್ವಹಣೆ ಕುರಿತು ನುರಿತ ಆರ್ಥಿಕ ತಜ್ಞರ ಅಭಿಪ್ರಾಯಗಳನ್ನು ತೆಗೆದುಕೊಳ್ಳುತ್ತಿಲ್ಲ. ಈ ಸರ್ಕಾರದ ಚಿಂತನೆಯೇ ಅರ್ಥವಾಗುತ್ತಿಲ್ಲ. ಇದಕ್ಕೆ ಸಮಸ್ಯೆಯ ಸ್ಪಷ್ಟವಾದ ಅಂದಾಜೇ ಇದ್ದಂತಿಲ್ಲ. ಹೀಗಾಗಿ ಏನು ಮಾಡಬೇಕೆಂದು ಅಂದಾಜಿಲ್ಲದೆ ಸಮಸ್ಯೆಯನ್ನು ಎದುರಿಸಲು ಹೊರಟಿರುವಂತಿದೆ. ಇಂತಹ ಭೀಕರ ಅಸಮರ್ಥ ಆರ್ಥಿಕ ನಿರ್ವಹಣೆಯನ್ನು ಇದುವರೆಗೂ ನೋಡಿಲ್ಲ. ಇದೊಂದು ಕ್ರಿಮಿನಲ್ ಅಸಮರ್ಥ ನಿರ್ವಹಣೆಯಾಗಿದೆ. ಏಕೆಂದರೆ ಇದರಿಂದ ಜನರ ಜೀವಗಳು ಬಲಿಯಾಗುತ್ತಿವೆ. ಪರಿಹಾರದ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಿಲ್ಲ, ಎಲ್ಲ ಹೊಣೆಗಾರಿಕೆಯನ್ನು ಜನರ ಮೇಲೆ ಮತ್ತು ರಾಜ್ಯ ಸರ್ಕಾರಗಳ ಮೇಲೆ ಹಾಕುತ್ತದೆ.

ಪ್ರೊ. ಜಯತಿ ಘೋಷ್ ಕನ್ನಡಕ್ಕೆ: ಡಾ.ಕೆ.ಪ್ರಕಾಶ್

ಕೋವಿಡ್–19 ಬಿಕ್ಕಟ್ಟು ತೀವ್ರವಾದ ನಿರುದ್ಯೋಗ ಮತ್ತು ಹಸಿವಿನ ಸಮಸ್ಯೆಗೆ ಕಾರಣವಾಗಲಿದೆ. ಭಾರತದಲ್ಲಿ ಶೇ.90 ಕ್ಕೂ ಹೆಚ್ಚು ಜನ ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ಇವರ ಪೈಕಿ ಶೇ.80 ರಷ್ಟು ಜನ ಕೆಲಸ ಕಳೆದುಕೊಂಡಿರಬಹುದು. ಇವರಲ್ಲಿ ಅನೇಕರು ಹಸಿವಿನ ಸಮಸ್ಯೆಯಿಂದ ಭಾಧಿತರಾಗಿದ್ದಾರೆ. ಹಸಿವಿನ ಕಾರಣಕ್ಕೇ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಆರ್ಥಿಕತೆ ಗಂಭೀರ ಬಿಕ್ಕಟ್ಟಿಗೆ ಸಿಲುಕಿದೆ. ಹಸಿವಿನ ಸಾವುಗಳಿಗೆ ಕಾರಣವಾಗುತ್ತಿರುವ ಪೂರೈಕೆಯ ಸಮಸ್ಯೆಯನ್ನು ನಾವಿಂದು ಎದುರಿಸುತ್ತಿದ್ದೇವೆ. ಸರ್ಕಾರ ಆಹಾರ ಪೂರೈಕೆಯನ್ನು ಸರಿಯಾಗಿ ನಿರ್ವಹಿಸಲಿಲ್ಲ. ಆದ್ದರಿಂದ ಆರ್ಥಿಕತೆ ಪುನಶ್ಚೇನಗೊಳ್ಳುವುದು ಹೇಗೆಂಬ ಚಿಂತೆ ಕಾಡುತ್ತಿದೆ.

ಕೇಂದ್ರ ಸರ್ಕಾರ ಲಾಕ್‌ಡೌನ್ ನಂತರದಲ್ಲಿ 1.70 ಲಕ್ಷ ಕೋಟಿ ರೂಗಳ ಉತ್ತೇಜನ ಪ್ಯಾಕೇಜ್ ಘೋಷಿಸಿದೆ. ಈ ಮೊತ್ತ ಭಾರತದಂತಹ ಬೃಹತ್ ಆರ್ಥಿಕತೆಗೆ ಸಹಾಯವಾಗುತ್ತದೆಯೇ? ಇಲ್ಲವೇ ಇಲ್ಲ. ಈ ಪ್ಯಾಕೇಜಿನಲ್ಲಿ ಸುಮಾರು 50 ಸಾವಿರ ಕೋಟಿ ರೂಗಳು ಈಗಾಗಲೇ ತೀರ್ಮಾನಿಸಲಾಗಿದ್ದ ಬಜೆಟ್ ವೆಚ್ಚಗಳ ಭಾಗವಾಗಿ ಘೋಷಿಸಲಾಗಿದೆ. ಈ ಪ್ಯಾಕೇಜ್ ಭಾರತದ ಜಿಡಿಪಿಯ ಶೇ.0.5 ಕ್ಕಿಂತಲೂ ಕಡಿಮೆಯಿದೆ. ನಮ್ಮ ಆರ್ಥಿಕತೆಯ ಪ್ರಮಾಣವನ್ನು ಪರಿಗಣಿಸಿದಾಗ ಇದು ಯಾವ ಮೂಲೆಗೂ ಸಾಲುವುದಿಲ್ಲ. ಅಸಲಿಗೆ ಇಡೀ ಆರ್ಥಿಕತೆಯನ್ನು ಸ್ಥಬ್ದಗೊಳಿಸಲಾಗಿದೆ. ನೂರಾರು ಮಿಲಿಯನ್ ಶ್ರಮಜೀವಿಗಳನ್ನು ಕೆಲಸದಿಂದ ತೆಗೆಯಲಾಗಿದೆ. ಇದರಿಂದ ಬೃಹತ್ತಾದ ಅನಾಹುತ ಸಂಭವಿಸಲಿದೆ. ಪ್ರಸಕ್ತ ಬಿಕ್ಕಟ್ಟಿನ ಪ್ರಮಾಣಕ್ಕೆ ಕನಿಷ್ಟವೆಂದರೂ ಜಿಡಿಪಿಯ ಶೇ.5 ರಿಂದ ಶೇ.7 ರವರೆಗೆ ಪ್ಯಾಕೇಜ್ ಘೋಷಿಸಬೇಕಾಗಿದೆ. ಈ ತಕ್ಷಣದ ಬಿಕ್ಕಟ್ಟನ್ನು ಎದುರಿಸಲು ಜಗತ್ತಿನ ಹಲವಾರು ದೇಶಗಳು ತಂತಮ್ಮ ಜಿಡಿಪಿಗಳ ಶೇ.5 ರಿಂದ ಶೇ.20 ರಷ್ಟು ಹಣದ ಪ್ಯಾಕೇಜುಗಳನ್ನು ಘೋಷಿಸಿವೆ.

ನಾವು ಇದುವರೆಗೂ ಕಂಡರಿಯದ ಆರ್ಥಿಕ ಬಿಕ್ಕಟ್ಟಿನ ಸವಾಲನ್ನು ಎದುರಿತ್ತಿದ್ದೇವೆ. ಅದರಲ್ಲೂ ವಲಸೆ ಮತ್ತು ದಿನಗೂಲಿ ಕಾರ್ಮಿಕರು ಅಪಾರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ಆದಾಯ ನಿಂತು ಹೋಗಿದೆ, ತಿನ್ನಲು ಆಹಾರವಿಲ್ಲದಂತಾಗಿದೆ ಮತ್ತು ನಿಲ್ಲಲು ಸೂರಿಲ್ಲದಂತಾಗಿದೆ. ಮುಂಬೈ, ಸೂರತ್, ಅಹ್ಮದಾಬಾದ್ ಮುಂತಾದ ಕಡೆಗಳಲ್ಲಿ ವಲಸೆ ಕಾರ್ಮಿಕರು ಲಾಕ್‌ಡೌನ್ ಇದ್ದರೂ ಅದನ್ನು ಕಡೆಗಣಿಸಿ ಬೀದಿಗೆ ಬಂದಿದ್ದಾರೆ. ಪ್ರತಿನಿತ್ಯ ದುಡಿದು ಜೀವನ ಸಾಗಿಸುತ್ತಿದ್ದ ದಿನಗೂಲಿಗಳು, ವಲಸೆ ಕಾರ್ಮಿಕರು ಮತ್ತು ಇತರೆ ಅನೌಪಚರಿಕ ವಲಯದ ಕಾರ್ಮಿಕರ ಈ ಆರ್ಥಿಕ ಬಿಕ್ಕಟ್ಟು ಸಾಮಾಜಿಕ ಬಿಕ್ಕಟ್ಟಾಗಿ ಪರಿವರ್ತನೆಯಾಗಬಹುದು. ನಗರಗಳಲ್ಲಿ ವಲಸೆ ಕಾರ್ಮಿಕರ ಸಮಸ್ಯೆಗಳು ಕಣ್ಣಿಗೆ ರಾಚುತ್ತಿವೆ. ಇದರ ಜೊತೆಗೆ ನಗರಗಳ ವಲಸಿಗರಲ್ಲದ ಕಾರ್ಮಿಕರು, ಗ್ರಾಮೀಣ ಪ್ರದೇಶಗಳ ದುಡಿಮೆಗಾರರು ತಮ್ಮ ಜೀವನೋಪಾಯಗಳನ್ನು ಕಳೆದುಕೊಂಡಿದ್ದಾರೆ. ಇವರೆಲ್ಲರೂ ಜೀವ ಉಳಿಸಿಕೊಳ್ಳುವ ಕನಿಷ್ಟ ಮಟ್ಟದ ಜೀವನಗಳನ್ನು ನಡೆಸುತ್ತಿದ್ದಾರೆ. ಈ ಆರ್ಥಿಕ ದುರಂತದ ಪ್ರಮಾಣ ಎಂದೂ ಕಂಡರಿಯದ ವಿದ್ಯಮಾನವಾಗಿದೆ. ಮತ್ತು ಇದನ್ನು ತಡೆಗಟ್ಟದಿದ್ದರೆ ಇದು ಅತ್ಯಂತ ಸುಲಭವಾಗಿ ಒಂದು ದುರಂತವಾಗಿ ಪರಿಣಮಿಸಬಹುದು.

ಮೋದಿಯವರ ಎರಡನೇ ಉತ್ತೇಜನದ ಪ್ಯಾಕೇಜ್ ತಕ್ಷಣಕ್ಕೆ ಕನಿಷ್ಟವೆಂದರೂ ಎರಡು ಪ್ರಮುಖ ಅಂಶಗಳನ್ನು ಒಳಗೊಳ್ಳಬೇಕು. ಮೊದಲನೆಯದಾಗಿ, ಭಾರತ ಆಹಾರ ನಿಗಮದ ಗೋಡೌನ್‌ಗಳಲ್ಲಿ 7.7 ಕೋಟಿ ಆಹಾರದ ದಾಸ್ತಾನು ಶೇಖರಣೆಯಾಗಿದೆ. ಜೊತೆಗೆ ಈಗ ರಬಿ ಬೆಳೆಗಳಿಂದ ಲೆವಿ ಸಂಗ್ರಹವಾಗಲಿದೆ. ಭಾರತದ ಭವಿಷ್ಯದ ಆಹಾರಕ್ಕೆ ಬಫರ್ ದಾಸ್ತಾನು 2.1 ಕೋಟಿ ಟನ್ ಆಹಾರ ಇದ್ದರೆ ಸಾಕು. ಆದ್ದರಿಂದ ತಕ್ಷಣವೇ ನಮ್ಮ ಎಫ್.ಸಿ.ಐ. ಗೋಡೌನ್‌ಗಳಿಂದ ಸರ್ಕಾರ ತಕ್ಷಣವೇ 5 ಕೋಟಿ ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ಬಿಡುಗಡೆ ಮಾಡಬೇಕು. ಇದನ್ನು ರಾಜ್ಯಗಳಿಗೆ ವಿತರಿಸಬೇಕು. ರಾಜ್ಯಗಳು ಜನರಿಗೆ ಉಚಿತವಾಗಿ ತಲಾ 10 ಕೆಜಿಯಂತೆ ಹಂಚಬೇಕು ಮತ್ತು ಆ ಮೂಲಕ ಅಹಾರ ಭದ್ರತೆಯನ್ನು ಕಲ್ಪಿಸಬೇಕು. ವಲಸೆ ಕಾರ್ಮಿಕರಿಗೆ ಮತ್ತು ಇತರ ಆಹಾರವಿಲ್ಲದ ಅಸಹಾಯಕರಿಗೆ ಕಿಚನ್‌ಗಳನ್ನು ನಡೆಸಿ ಆಹಾರ ನೀಡಬೇಕು.

ಎರಡನೆಯದಾಗಿ, ಜನರ ಆದಾಯ ಗಳಿಕೆಯನ್ನು ತಡೆಯಬಾರದು. ಈಗ ತಕ್ಷಣಕ್ಕೆ ಕೆಲಸಗಳಿಲ್ಲದಿರುವುದರಿಂದ ಅವರುಗಳಿಗೆ ಹಣ ವರ್ಗಾವಣೆಯನ್ನು ಮಾಡಬೇಕು. ಇದನ್ನು ಹಲವು ರೀತಿಗಳಲ್ಲಿ ಮಾಡಬಹುದು. ರೇಷನ್ ಕಾರ್ಡುಗಳು ಇರುವವರಿಗೆ, ಕಾರ್ಡ್ ಇಲ್ಲದೆ ಆಹಾರಕ್ಕೆ ಆಶ್ರಯಿಸಿರುವವರಿಗೆ ಹಣವನ್ನು ವರ್ಗಾವಣೆ ಮಾಡಬೇಕು. ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಎಲ್ಲರಿಗೂ ತಿಂಗಳಿಗೆ 20 ದಿನಗಳ ಕೆಲಸದಂತೆ ಮೂರು ತಿಂಗಳ ಹಣವನ್ನು ಸರ್ಕಾರವೇ ನೀಡಬೇಕು. ಇದಲ್ಲದೆ ಪೆನ್ಶನ್‌ಗಳು, ಇತರೆ ಸ್ಕೀಮ್‌ಗಳ ಮೂಲಕವೂ ನೀಡಲು ಸಾಧ್ಯವಿದೆ. ಈ ವ್ಯಾಪ್ತಿಗೆ ಬರದಿರುವವರಿಗೆ ಯಾವ ರೀತಿ ಕೊಡಬಹುದೆಂದು ರಾಜ್ಯ ಸರ್ಕಾರಗಳು ಹೇಳಬೇಕು. ಒಟ್ಟಾರೆಯಾಗಿ ಹಣ ವರ್ಗಾವಣೆ ಮಾಡಲೇಬೇಕು. ಜೀವಗಳನ್ನು ಉಳಿಸುವ ಹೆಸರಲ್ಲಿ ಜೀವಗಳನ್ನು ತೆಗೆಯಬಾರದು.

ಮಧ್ಯಮ ವರ್ಗಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳಿಗೆ ಸಾಲದ ಕಂತುಗಳ ಮರುಪಾವತಿ ತಡೆಯನ್ನು ರಿಜರ್ವ್ ಬ್ಯಾಂಕ್ ಘೋಷಿಸಿದೆ. ಆದರೆ ನಿಜವಾದ ಅರ್ಥದಲ್ಲಿ ಅದರಿಂದ ಜನರಿಗೆ ಯಾವುದೇ ಪ್ರಯೋಜನವಿಲ್ಲ. ಸಾಲದ ಕಂತುಗಳನ್ನು ಈಗ ಕಟ್ಟುವ ಬದಲು ಮೂರು ತಿಂಗಳು ಬಿಟ್ಟು ಬಡ್ಡಿಯನ್ನೂ ಸೇರಿಸಿ ಕಟ್ಟಬೇಕು. ಇದರಿಂದ ಜನರಿಗೆ ಯಾವ ಪ್ರಯೋಜನವಿದೆ. ಸಾಲದ ಕಂತುಗಳ ಮರುಪಾವತಿ ತಡೆ ಜನರಿಗೆ ಪ್ರಯೋಜನವಾಗಬೇಕೆಂದರೆ ಬಡ್ಡಿಯನ್ನು ರದ್ದು ಮಾಡಿ ಸಾಲದ ಕಂತುಗಳನ್ನು ನಿಧಾನಕ್ಕೆ ಕಟ್ಟುವಂತೆ ಹೇಳುವುದು. ಬಡ್ಡಿಯ ಹಣವನ್ನು ಸರ್ಕಾರ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ತುಂಬಿ ಕೊಡಬೇಕು. ಜಗತ್ತಿನಾದ್ಯಂತ ಈಗ ಆಗುತ್ತಿರುವುದು ಈ ರೀತಿಯಲ್ಲಿಯೇ. ಆದ್ದರಿಂದ ನಮ್ಮ ಕೇಂದ್ರ ಬ್ಯಾಂಕ್ ಈ ಬಗ್ಗೆ ಸ್ಪಷ್ಟವಾದ ಕ್ರಮಗಳಿಗೆ ಮುಂದಾಗಬೇಕು.

ಡೆನ್ಮಾರ್ಕ್ ದೇಶವು ಅಲ್ಲಿರುವ ಖಾಸಗಿ ಸಂಸ್ಥೆಗಳಲ್ಲಿರುವವರೂ ಸೇರಿದಂತೆ ಎಲ್ಲ ಕೆಲಸಗಾರರಿಗೂ ಶೇ.70 ರಷ್ಟು ವೇತನಗಳನ್ನು ನೀಡುವುದಾಗಿ ಪ್ರಕಟಿಸಿದೆ, ಅದೇ ರೀತಿ ಇಂಗ್ಲೆಂಡ್ ಜನರ ಬಳಿ ಹಣದ ಹರಿವು ಇರಬೇಕೆಂಬ ಕಾರಣಕ್ಕೆ ಶೇ.80 ರಷ್ಟು ಸಹಾಯವನ್ನು ಘೋಷಿಸಿದೆ. ಆದರೆ ಭಾರತ ಸರ್ಕಾರವು ಇಲ್ಲಿನ ಸಮಸ್ಯೆಯ ಗಾತ್ರ ಮತ್ತು ಅಗಾಧತೆಗೆ ಹೋಲಿಸಿದರೆ ಯಾವುದೇ ಸಹಾಯವನ್ನು ಮಾಡುತ್ತಿಲ್ಲ. ನಮ್ಮಲ್ಲಿ ಎಂಎಸ್‌ಎಂಇ'ಗಳಲ್ಲಿ (ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ) ಇರುವವರನ್ನೂ ಸೇರಿಸಿದರೆ ಶೇ.15 ರಷ್ಟು ಮಾತ್ರ ರೆಗ್ಯುಲರ್ ಕೆಲಸಗಳಲ್ಲಿ ಇರುವುದು. ಎಂಎಸ್‌ಎಂಇ'ಗಳಲ್ಲಿರುವವರು ಅರಬರೆ ವೇತನಗಳನ್ನು ಪಡೆಯುತ್ತಿದ್ದಾರೆ. ಅವರಿಗೆ ಉಳಿದ ವೇತನದ ಸಹಾಯವನ್ನು ನೀಡಬೇಕಾಗುತ್ತದೆ. ಇನ್ನು ನಮ್ಮ ಅರ್ಧಕ್ಕಿಂತ ಹೆಚ್ಚಿನ ಶ್ರಮಶಕ್ತಿಯು ಸ್ವಯಂ–ಉದ್ಯೋಗಿಗಳಾಗಿದ್ದಾರೆ. ಅವರೀಗ ಉದ್ಯೋಗವಿಲ್ಲ ಮತ್ತು ಆದಾಯವಿಲ್ಲ ಎಂದಾಗಿ ಅತಂತ್ರರಾಗಿದ್ದಾರೆ. ಇವರಿಗೆ ಸರ್ಕಾರ ಏನಾದರೂ ಮಾಡಲೇಬೇಕು. ಆದ್ದರಿಂದಲೇ ಈ ಸಂದರ್ಭಕ್ಕೆ ಹಣ ವರ್ಗಾವಣೆ ಒಂದೇ ಪರಿಹಾರ ಎಂದು ನಾನು ಹೇಳುವುದು.

ಭಾರತದ ಆರ್ಥಿಕತೆಯ ಕುಸಿತದ ಬಗ್ಗೆ ದೊಡ್ಡ ಸಂಖ್ಯೆಯ ಅರ್ಥಶಾಸ್ತ್ರಜ್ಞರು, ಅಂತರರಾಷ್ಟ್ರೀಯ ರೇಟಿಂಗ್ ಏಜೆನ್ಸಿಗಳು, ಐಎಂಎಫ್, ವಿಶ್ವಬ್ಯಾಂಕ್‌ಗಳು ಗಂಭೀರ ಚಿತ್ರಣವನ್ನು ನೀಡಿವೆ. ಬಾರ್ಕ್ಲೇ ಸಮೀಕ್ಷಾ ಸಂಸ್ಥೆಯ ಪ್ರಕಾರ ಭಾರತದ ಭವಿಷ್ಯದ ಜಿಡಿಪಿ ದರ ಶೇ.0 ಇರಲಿದೆ. ಇದು ಆರ್ಥಿಕ ಬೆಳವಣಿಗೆಯ ಸ್ಥಗಿತತೆಯನ್ನು ಸೂಚಿಸುತ್ತದೆ. ಆದರೆ ನನ್ನ ಪ್ರಕಾರ ಜಿಡಿಪಿ ದರ ಸ್ಥಗಿತವಲ್ಲ, ನಕಾರಾತ್ಮಕವಾಗಿರಲಿದೆ. ನಾವು ಆರ್ಥಿಕ ಪ್ರಪಾತಕ್ಕೆ ಬೀಳಲಿದ್ದೇವೆ. ನಾವು ಎಷ್ಟು ಹಿಂದಿದ್ದೇವೆ ಎಂಬ ಬಗ್ಗೆ ಸರ್ಕಾರಕ್ಕೆ ಸ್ಪಷ್ಟವಾದ ಅಂದಾಜೇ ಇಲ್ಲವಾಗಿದೆ. ಹೀಗಾಗಿ ಸರ್ಕಾರಕ್ಕೆ ಏನು ಮಾಡಬೇಕೆಂದು ಅಂದಾಜಿಲ್ಲದೆ ಸಮಸ್ಯೆಯನ್ನು ಎದುರಿಸಲು ಹೊರಟಿದೆ. ಈಗಾಗಲೇ ಹೇಳಿದಂತೆ, ಜಗತ್ತಿನ ಎಲ್ಲಾ ದೇಶಗಳೂ ಕೋವಿಡ್–19 ಬಿಕ್ಕಟ್ಟಿನಿಂದ ಹೊರಬರಲು ತಮ್ಮ ಜಿಡಿಪಿಯ ಶೇ.5 ರಿಂದ ಶೇ.20 ರಷ್ಟು ಖರ್ಚು ಮಾಡುತ್ತಿರುವಾಗ, ಕೇಂದ್ರ ಸರ್ಕಾರ ಮಾಡುತ್ತಿರುವ ಖರ್ಚು ಯಾವುದಕ್ಕೂ ಸಾಲದಂತಾಗಿದೆ. ಮತ್ತೊಂದು ಅಂಶವೆಂದರೆ, ಸದ್ಯದ ಬಿಕ್ಕಟ್ಟನ್ನು ಮುಂಚೂಣಿಯಲ್ಲಿದ್ದು ನಿಭಾಯಿಸುತ್ತಿರುವ ರಾಜ್ಯ ಸರ್ಕಾರಗಳ ಬಳಿ ಹಣವಿಲ್ಲ. ಅವರು ತಮ್ಮ ಖರ್ಚುಗಳನ್ನು ಕಡಿತ ಮಾಡುತ್ತಿದ್ದಾರೆ. ಇದರಿಂದ ಒಟ್ಟಾರೆ ಎಲ್ಲ ರೀತಿಯ ಬೇಡಿಕೆ ಕುಸಿತವಾಗಿದೆ, ಪರಿಣಾಮವಾಗಿ ಪೂರೈಕೆಯೂ ಕುಸಿದು ಹೋಗಿದೆ. ನಮ್ಮ ಆಹಾರದ ಆರ್ಥಿಕತೆಯನ್ನು ತಪ್ಪಾಗಿ ನಿರ್ವಹಿಸಲಾಗಿದೆ. ನಾವು ಆಹಾರದ ಕೊರತೆಯನ್ನು ಅನುಭವಿಸುವಂತಾಗಿದೆ. ಜೊತೆಗೆ ರೈತರು ತಮ್ಮ ವಸ್ತುಗಳನ್ನು ಮಾರಲಾಗದಂತಹ ಪರಿಸ್ಥಿತಿಯಿದೆ. ಜೊತೆಗೆ ನಾವು ಹಲವಾರು ವಸ್ತುಗಳ ಉತ್ಪಾದನೆ ಮತ್ತು ವಿತರಣೆಯನ್ನು ನಿಲ್ಲಿಸಿಬಿಟ್ಟಿದ್ದೇವೆ. ಇದು ಸ್ಪಷ್ಟವಾಗಿ ಕುಸಿಯುತ್ತಿರುವ ಆರ್ಥಿಕತೆಯ ಲಕ್ಷಣವಾಗಿದೆ. ಇದು ಎಷ್ಟು ಬೇಗ ಮತ್ತು ವೇಗವಾಗಿ ಪುನಶ್ಚೇತನಗೊಳ್ಳುತ್ತದೆ ಎಂಬುದು ಸರ್ಕಾರದ ಕ್ರಮಗಳ ಮೇಲೆ ನಿಂತಿದೆ. ಆದರೆ ಇದುವರೆಗಿನ ಸರ್ಕಾರದ ಕ್ರಮಗಳು ಅತ್ಯಂತ ಕೆಟ್ಟದಾಗಿವೆ.


ಈ ಸರ್ಕಾರ ಬಿಕ್ಕಟ್ಟಿನ ನಿರ್ವಹಣೆ ಕುರಿತು ನುರಿತ ಆರ್ಥಿಕ ತಜ್ಞರ ಅಭಿಪ್ರಾಯಗಳನ್ನು ತೆಗೆದುಕೊಳ್ಳುತ್ತಿಲ್ಲ. ಈ ಸರ್ಕಾರದ ಚಿಂತನೆಯೇ ಅರ್ಥವಾಗುತ್ತಿಲ್ಲ. ನಾನೊಂದು ಮಾತು ಹೇಳಬಹುದು, ನಾನು ಇಂತಹ ಭೀಕರ ಅಸಮರ್ಥ ಆರ್ಥಿಕ ನಿರ್ವಹಣೆಯನ್ನು ಇದುವರೆಗೂ ನೋಡಿಲ್ಲ. ಇದೊಂದು ಕ್ರಿಮಿನಲ್ ಅಸಮರ್ಥ ನಿರ್ವಹಣೆಯಾಗಿದೆ. ಏಕೆಂದರೆ ಇದರಿಂದ ಜನರ ಜೀವಗಳು ಬಲಿಯಾಗುತ್ತಿವೆ.

ಆದ್ದರಿಂದ ಲಾಕ್‌ಡೌನ್‌ನ ಈ ಸಂದರ್ಭದಲ್ಲಿ, ತಕ್ಷಣದಲ್ಲೇ ಆಹಾರವನ್ನು ಮತ್ತು ಆದಾಯವನ್ನು ಒದಗಿಸಬೇಕು ಮತ್ತು ಪೂರೈಕೆಯನ್ನು ಖಾತ್ರಿಗೊಳಿಸಬೇಕು. ಪ್ರಧಾನ ಮಂತ್ರಿಗಳು ಆಗಾಗ ಬಂದು ನಾವು ಏನು ಮಾಡಬೇಕು ಎಂಬುದನ್ನು ಹೇಳುತ್ತಿದ್ದಾರೆ. ನಾವು ಅವರನ್ನು ಕೇಳಬಯಸುವುದೇನೆಂದರೆ, ಕಳೆದ ಮೂರು ವಾರಗಳಲ್ಲಿ ನೀವೇನು ಮಾಡಿದಿರಿ, ಏನನ್ನು ತಯಾರಿ ಮಾಡಿಕೊಂಡಿದ್ದಿರಿ, ಮುಂದಿನ 20 ದಿನಗಳ ಕಾಲ ಏನು ಮಾಡುತ್ತೀರಿ? ಲಾಕ್‌ಡೌನ್ ಹಿಂಪಡೆಯುವಾಗ ಎಂತಹ ವ್ಯವಸ್ಥೆ ಇರುತ್ತದೆ? ಈ ಬಗ್ಗೆ ನಿಮ್ಮ ಯೋಜನೆಯೇನಿದೆ? ಆದರೆ ಇವುಗಳ ಬಗ್ಗೆ ಸರ್ಕಾರ ಏನನ್ನೂ ನಮಗೆ ಹೇಳುತ್ತಿಲ್ಲ. ಹೀಗಾಗಿ ಇಂತಹ ಅಪಾರವಾದ ಬಿಕ್ಕಟ್ಟನ್ನು ನಾವೇ ಎದುರಿಸಬೇಕಾದ ಹೊಣೆಗಾರಿಕೆಯನ್ನು ಸರ್ಕಾರವೇ ಸೃಷ್ಟಿಸಿದ ಹಾಗೆ ಕಾಣುತ್ತದೆ. ನಾವು ಅನುಭವಿಸುತ್ತಿರುವ ಲಾಕ್‌ಡೌನ್ ಜಗತ್ತಿನಲ್ಲೇ ಅತ್ಯಂತ ಕರಾಳ ಮತ್ತು ದೀರ್ಘಾವಧಿಯದ್ದಾಗಿದೆ. ಸರ್ಕಾರವೇ ಇಂತಹ ಕ್ರೂರ ಲಾಕ್‌ಡೌನ್‌ನ್ನು ನಿರ್ಮಾಣ ಮಾಡುತ್ತದೆ ಮತ್ತು ಪರಿಹಾರದ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಿಲ್ಲ, ಎಲ್ಲ ಹೊಣೆಗಾರಿಕೆಯನ್ನು ಜನರ ಮೇಲೆ ಮತ್ತು ರಾಜ್ಯ ಸರ್ಕಾರಗಳ ಮೇಲೆ ಹಾಕುತ್ತದೆ, ರಾಜ್ಯ ಸರ್ಕಾರಗಳಿಗೆ ಹಣಕಾಸಿನ ನೆರವನ್ನು ತಡೆಹಿಡಿಯುತ್ತದೆ, ಕಳೆದ ವರ್ಷದ್ದೇ ಇನ್ನೂ 40 ಸಾವಿರ ಕೋಟಿ ರೂಗಳಷ್ಟು ಬಾಕಿ ರಾಜ್ಯ ಸರ್ಕಾರಗಳಿಗೆ ಕೊಡಬೇಕಾಗಿದೆ. ಹೀಗಾಗಿ ಇದನ್ನು ನಾನು ಕೇವಲ ಅಸಮರ್ಥ ನಿರ್ವಹಣೆ ಮಾತ್ರವಲ್ಲ ಕ್ರಿಮಿನಲ್ ನಿರ್ವಹಣೆ ಎಂದು ಕರೆಯುತ್ತೇನೆ. ಸರ್ಕಾರ ಈಗಲಾದರೂ ಭಾರತ ಮಾತ್ರವಲ್ಲ, ಜಗತ್ತಿನೆಲ್ಲೆಡೆಯೂ ಹೇಳುತ್ತಿರುವಂತೆ, ನುರಿತ ಆರ್ಥಿಕ ತಜ್ಞರ ಮಾತುಗಳನ್ನು ಕೇಳುತ್ತದೆ ಎಂದು ಭಾವಿಸುತ್ತೇನೆ.

ಆಗ್ರಾದ ರಸ್ತೆಯಲ್ಲಿ ಹಾಲಿನ ವಾಹನವೊಂದರಿಂದ ಚೆಲ್ಲಿದ ಹಾಲನ್ನು ಒಂದೆಡೆ ನಾಯಿಗಳು ನೆಕ್ಕುವ, ಇನ್ನೊಂದೆಡೆ ಮನುಷ್ಯನೊಬ್ಬ ಬೊಗಸೆಯಿಂದ ಸಂಗ್ರಹಿಸುವ ದೃಶ್ಯ(ಕೃಪೆ: the wire)

“ನೀನೂ ನಮ್ಮಂತೆ ರೆಡ್ ಝೋನ್‌ನಲ್ಲಿದ್ದೀಯಾ?’–ಸತೀಶ್ ಆಚಾರ್ಯ ಅವರ ವ್ಯಂಗ್ಯಚಿತ್ರ





ಬಂಗಾಳದ ಬರಗಾಲ: ಜನಸಾಮಾನ್ಯರು ಮತ್ತು ದೇಶದ ಸೇವೆಯಲ್ಲಿ ಕಮ್ಯುನಿಸ್ಟರು

ಪುಟ 11 ರಿಂದ

ಮುಷ್ಕರಗಳು ಮತ್ತು ಜನಪರ ಹೋರಾಟಗಳು ಜನರು ಮತ್ತು ಪೋಲಿಸರು ಹಾಗೂ ಮಿಲಿಟರಿ ಪಡೆಗಳ ನಡುವೆ ಪದೇ ಪದೇ ಕಾದಾಟಕ್ಕೆ ಕಾರಣವಾದವು. ಆಗಸ್ಟ್ 1945ರಲ್ಲಿ ವಾರಣಾಸಿಯಲ್ಲಿ 17 ಮತಪ್ರದರ್ಶಕರು ಹತರಾದರೆ, 2000 ಜನ ಬಂಧಿಸಲ್ಪಟ್ಟರು. ಬೊಂಬಾಯಿಯಲ್ಲಿ, ಸೆಪ್ಟೆಂಬರಿನಲ್ಲಿ ಮುಷ್ಕರದ ನಂತರ ದಂಗೆಯ ವಾತಾವರಣ ಸೃಷ್ಟಿಯಾಗಿತ್ತು. ಆದರೆ, ಪ್ರತಿಗಾಮಿ ರಾಜಕಾರಣಿಗಳು ಮತ್ತು ಆಳರಸರ ಪ್ರಯತ್ನಗಳಿಂದಾಗಿ ಅದಕ್ಕೆ ಹಿಂದೂ-ಮುಸ್ಲಿಂ ಗಲಾಟೆ ಎಂಬ ಬಣ್ಣ ಕೊಡುವಲ್ಲಿ ಯಶಸ್ವಿಯಾದರು. ಅದರಿಂದಾಗಿ ಉಂಟಾದ ಗಲಭೆಗಳಲ್ಲಿ ಹತ್ತಾರು ಜನ ಕೊಲಲ್ಪಟ್ಟರು ಮತ್ತು ನೂರಾರು ಜನ ಗಾಯಗೊಂಡರು.

ಈ ಹಿಂದಿನ ಸಾಮ್ರಾಜ್ಯಶಾಹಿ-ವಿರೋಧಿ ಜನಾಕ್ರೋಶಗಳಿಂದ ಭಿನ್ನವಾಗಿ, ಈಗ ಅದರಲ್ಲಿ ಭಾಗವಹಿಸುವ ಜನರು ಕಾರ್ಮಿಕರ ಮತ್ತು ದುಡಿಯುವ ಜನರ ಹೋರಾಟದ ಸಂಘಟನೆಗಳಿಂದ ಮತ್ತು ಅದಕ್ಕೆ ಕ್ರಾಂತಿಕಾರಿ ಕಣ್ನೋಟವನ್ನು ಒದಗಿಸಿದ ಎಡ ಶಕ್ತಿಗಳಿಂದ ಗಮನಾರ್ಹವಾಗಿ ಪ್ರಭಾವಿತರಾಗಿದ್ದರು. ಯುದ್ಧದ ಮತ್ತು 'ಭಾರತ ಬಿಟ್ಟು ತೊಲಗಿ' ಹೋರಾಟದ ಸಮಯದಲ್ಲಿ ಕಾಂಗ್ರೆಸ್ ನಾಯಕತ್ವದ ವಿರುದ್ಧ ಹೋಗಿ ಒಂದು ಸಾಮೂಹಿಕ ಪಕ್ಷವಾಗಿ ಬೆಳೆದಿದ್ದ ಕಮ್ಯುನಿಸ್ಟ್ ಪಕ್ಷ ಮತ್ತು 'ಭಾರತ ಬಿಟ್ಟು ತೊಲಗಿ' ಹೋರಾಟಕ್ಕೆ ಒಂದು ಸಂಘಟಿತ ನಾಯಕತ್ವ ಒದಗಿಸಿದ ಸಮಾಜವಾದಿಗಳು ಹಾಗೂ ಎಡಪಂಥೀಯರು ಯುದ್ಧಾನಂತರದ ಸಾಮ್ರಾಜ್ಯಶಾಹಿ-ವಿರೋಧಿ ಸಾಮೂಹಿಕ ಹೋರಾಟದಲ್ಲಿ ಗಣನೀಯ ಪಾತ್ರಗಳನ್ನು ವಹಿಸಲು ಸಮರ್ಥರಾದರು.

ಬೆಳೆಯುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಪ್ರಭಾವವನ್ನು ತಗ್ಗಿಸುವ ಸಲುವಾಗಿ, ನೆಹರೂ ಮತ್ತು ಕಾಂಗ್ರೆಸ್ಸಿನ ಉನ್ನತ ನಾಯಕರುಗಳು ಒಂದು ಪ್ರಬಲವಾದ ಕಮ್ಯುನಿಸ್ಟ್-ವಿರೋಧಿ ಪ್ರಚಾರವನ್ನು ಹರಿಬಿಟ್ಟರು. ಸಾಮೂಹಿಕ ಸಂಘಟನೆಗಳನ್ನು ಒಡೆಯುವ ಯೋಜನೆ ಹೊಂದಿದ್ದ ಸಮಾಜವಾದಿಗಳ ಬೆಂಬಲದೊಂದಿಗೆ ಕಮ್ಯುನಿಸ್ಟರಿಗೆ ಕಷ್ಟಗಳನ್ನು ಸೃಷ್ಟಿಮಾಡಿದರು. ಮತ್ತೊಮ್ಮೆ ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್ ನೇತೃತ್ವದಲ್ಲಿದ್ದವರಲ್ಲಿ ಗಣನೀಯ ವಿಭಾಗದ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳ ಪ್ರವಾಹದ ವಿರುದ್ಧ ನಡೆಯಬೇಕಾದ ಸನ್ನಿವೇಶವನ್ನು ಎದುರಿಸಬೇಕಾಯಿತು.

ಈ ಸಮಾಜವಾದಿ ಮತ್ತು ಎಡಪಂಥೀಯರಲ್ಲಿ ಅನೇಕರು ಕಾಂಗ್ರೆಸ್ಸಿನ ಬಲಪಂಥೀಯ ನಾಯಕರ ಸೈದ್ಧಾಂತಿಕ ಪ್ರಭಾವಕ್ಕೆ ಒಳಗಾಗಿದ್ದರು. 'ಭಾರತ ಬಿಟ್ಟು ತೊಲಗಿ' ಚಳುವಳಿಗೆ ವಿಶ್ವಾಸದ್ರೋಹ ಬಗೆದರು ಎಂದು ದೂಷಿಸುತ್ತಾ 'ಕಮ್ಯುನಿಸ್ಟರನ್ನು ಮೂಲೆಗುಂಪಾಗಿಸುವ' ಕಾಂಗ್ರೆಸ್ ನಾಯಕತ್ವದ ಪ್ರಯತ್ನಗಳ ಜತೆ ತಮ್ಮನ್ನು ಪೂರ್ಣವಾಗಿ ಗುರುತಿಸಿಕೊಂಡಿದ್ದರೂ, ಈ ಶಕ್ತಿಗಳು ಮುಷ್ಕರಗಳು ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ದೊಡ್ಡ ಅಲೆಗಳಲ್ಲಿ ಸಿಲುಕಿಕೊಂಡು, ಈ ಚಳುವಳಿಗಳಿಗೆ ಶಕ್ತಿ ಮತ್ತು ರಣೋತ್ಸಾಹ ತುಂಬಲು ಕಮ್ಯುನಿಸ್ಟರ ಜತೆ ಸಹಕರಿಸಲು ಮುಂದಾದರು.

ಎರಡನೇ ವಿಶ್ವ ಯುದ್ಧ ಮತ್ತು 'ಭಾರತ ಬಿಟ್ಟು ತೊಲಗಿ' ಚಳುವಳಿಯ ಕೊನೆಯ ಹೊತ್ತಿಗೆ, ಕಾಂಗ್ರೆಸ್ಸಿನ ರಾಜಕೀಯ ನಾಯಕತ್ವಕ್ಕೆ ಸವಾಲು ಒಡ್ಡುವ, ತನ್ನ ಸ್ವತಂತ್ರ ಕಾರ್ಮಿಕ ವರ್ಗದ ಧೋರಣೆ ಹಾಗೂ ಕಾರ್ಯಾಚರಣೆಯ ಕಾರ್ಯಕ್ರಮದೊಂದಿಗೆ, ಪಕ್ಷದ ಗಣನೀಯ ಪ್ರಭಾವ ಹೊಂದಿದ ಹಲವಾರು ಸಾಮೂಹಿಕ ಸಂಘಟನೆಗಳೊಂದಿಗೆ ಕಮ್ಯುನಿಸ್ಟ್ ಪಕ್ಷವು ದೇಶಾದ್ಯಂತ ವಿಸ್ತಾರಗೊಂಡಿತು.

ಕಮ್ಯುನಿಸ್ಟ್ ಪಕ್ಷವು ಕೇರಳ, ಆಂಧ್ರ ಮತ್ತು ಬಂಗಾಳ ಹಾಗೂ ಸ್ಥಳೀಯವಾಗಿ ಅನೇಕ ಪ್ರಾಂತಗಳಲ್ಲಿ ವ್ಯಾಪಕ ಜನಬೆಂಬಲವನ್ನು ಪಡೆದ ಒಂದು ಪಕ್ಷದ ಸ್ಥಾನಮಾನವನ್ನು ಗಳಿಸಿಕೊಂಡಿತ್ತು. ಭವಿಷ್ಯದಲ್ಲಿ ಕಾಂಗ್ರೆಸಿಗೆ ಸವಾಲೊಡ್ಡುವ ಸಾಮರ್ಥ್ಯ ಹೊಂದಿದ ಒಂದು ಪಕ್ಷವಾಗಿ ಮತ್ತು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿತ್ತು. ಕಾರ್ಮಿಕರು, ರೈತರು ಮತ್ತು ವಿದ್ಯಾರ್ಥಿಗಳಂತಹ ವಿವಿಧ ವಿಭಾಗಗಳ ಜನರಲ್ಲಿ ಗಣನೀಯ ಪ್ರಭಾವವನ್ನು ಹೊಂದಿದ್ದ ಪಕ್ಷದ ಬೆಳವಣಿಗೆಯು ಕಾಂಗ್ರೆಸ್ಸಿಗೆ ಒಂದು ಪ್ರಬಲ ಎದುರಾಳಿಯಾಗಿ ನಿಂತಿತ್ತು.

ಈ ಬೆಳವಣಿಗೆಗಳ ರಾಜಕೀಯ ಹಿನ್ನೆಲೆಗಳನ್ನೂ ಗಮನಿಸಬೇಕು. ಎರಡನೇ ವಿಶ್ವ ಯುದ್ಧದಲ್ಲಿ ಸೋವಿಯತ್ ಯೂನಿಯನ್ ವಹಿಸಿದ ಐತಿಹಾಸಿಕ ಪಾತ್ರವು ಸಮಾಜವಾದಿ ಸಿದ್ಧಾಂತವು ಮತ್ತಷ್ಟು ಹರಡಲು ಕಾರಣವಾಗಿತ್ತು. 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಪಾಲ್ಗೊಂಡಿದ್ದ ಯುವಜನಗಳು ಬಹುಪಾಲು ಕಮ್ಯುನಿಸಂನ ಕಡೆ ಒಲವು ಹೊಂದಿದ್ದರು. ಅಂತಹ ಭಾವನೆಗಳನ್ನು ಹೊಂದಿದ್ದ ಕಾಂಗ್ರೆಸ್ಸಿಗರು, ಕಾಂಗ್ರೆಸ್ ನಾಯಕತ್ವದ ಧೋರಣೆಯನ್ನು ಭಾವನಾತ್ಮಕವಾಗಿ ಮೈಗೂಡಿಸಿಕೊಳ್ಳಲು ಅಸಮರ್ಥರಾದವರು, ಏಕೆಂದರೆ ಕಮ್ಯುನಿಸ್ಟರು ಜನಸಮುದಾಯದ ನಡುವೆ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದರು.



ಭೀಕರ ಬಂಗಾಲ ಬರ-ಕಲಾವಿದರು ಕಂಡಂತೆ
-ಚಿತ್ರಪ್ರಸಾದ್ ಮತ್ತು ಜೈನುಲ್ ಅಬೆದಿನ್



ಮೊದಲ ಹೆಚ್‌ಸಿಕ್ಯು ಔಷಧಿಗಳ ರವಾನೆ ಅಮೆರಿಕ ತಲುಪಿದೆ!

ಪುಟ 2 ರಿಂದ

ರಫ್ತುಗಳ ಮೇಲೆ ಹಾಕಿದ್ದ ನಿಷೇಧಗಳನ್ನು ಅಮೆರಿಕ ಬಲವಂತದಿಂದ ತೆಗೆಸಿತ್ತು ಎಂಬುದೊಂದು ವ್ಯಂಗ್ಯವೇ ಸರಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಚೀನಾದಿಂದ ಭಾರತಕ್ಕೆ ಬರಬೇಕಾಗಿದ್ದ ಕೊರೊನ ತಪಾಸಣಾ ಕಿಟ್‌ಗಳ ರವಾನೆಯನ್ನು ಅಮೆರಿಕಾದತ್ತ ತಿರುಗಿಸಲಾಗಿದೆ ಎಂಬುದು ಈಗ ಬೆಳಕಿಗೆ ಬಂದಿದೆ.

ಇಂತಹ ವಸಾಹುಶಾಹೀ ಕಾಲದ "ಸಮುದ್ರಗಳ್ಳತನ"ಕ್ಕೆ ಬಲಿಯಾಗಿರುವುದು ಭಾರತ ಮಾತ್ರವೇ ಅಲ್ಲ! ತಮ್ಮ ದೇಶಗಳ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲೆಂದು ತರಿಸಿಕೊಳ್ಳುತ್ತಿದ್ದ ಪಿ.ಪಿ.ಇ.ಗಳನ್ನು ಮಧ್ಯದಲ್ಲೇ ಅಡ್ಡಗಟ್ಟಿರುವ ಅಮೆರಿಕಾದ ಈ ಪುಂಡಾಟಿಕೆಯನ್ನು ಜರ್ಮನಿ, ಫ್ರಾನ್ಸ್, ಕೆನಡ, ಬ್ರೆಝಿಲ್ ಮತ್ತು ಬಡ ಬಾರ್ಬಡೋಸ್ ಕೂಡ ತೀಕ್ಷ್ಣವಾಗಿ ತರಾಟೆಗೆ ತಗೊಂಡಿವೆ.

ಅಮೆರಿಕಾ ಕ್ಯೂಬಾದ ಮೇಲೆ ಹೇರಿರುವ ಕ್ರಿಮಿನಲ್ ಆರ್ಥಿಕ ನಿಷೇಧಗಳಿಂದಾಗಿ ಆ ದೇಶಕ್ಕೆ ಅಂತರ್ರಾಷ್ಟ್ರೀಯ ನೆರವು ಸಿಗದಂತೆ ತಡೆದಿರುವುದು ಮಾತ್ರವೇ ಅಲ್ಲ, ಕ್ಯೂಬಾ ಹಲವು ದೇಶಗಳಿಗೆ ಬೇಷರತ್ತಾಗಿ ನೀಡಿರುವ ಔಷಧಿಗಳು, ಡಾಕ್ಟರುಗಳು ಮತ್ತು ಆರೋಗ್ಯ ನೆರವುಗಳನ್ನು ಅವು ಸ್ವೀಕರಿಸದಂತೆಯೂ ತಡೆಗಟ್ಟುತ್ತಿದೆ. ಕ್ಯೂಬಾ ಕೋವಿಡ್‌ನ್ನು ಬೇರೆ ದೇಶಗಳಿಗಿಂತ ಹೆಚ್ಚು ಯಶಸ್ವಿಯಾಗಿ ಎದುರಿಸಿದೆ ಮಾತ್ರವೇ ಅಲ್ಲ, ಅಂತರ್ರಾಷ್ಟ್ರೀಯ ವೈದ್ಯಕೀಯ ಸೌಹಾರ್ದತೆಯ ನಿಷ್ಕಳಂಕ ದಾಖಲೆಯನ್ನೂ ಹೊಂದಿದೆ. ಅಮೆರಿಕ ಇರಾನಿನ ಮೇಲೆ ತಾನು ಏಕಪಕ್ಷೀಯವಾಗಿ ಹೇರಿರುವ ನಿರ್ಬಂಧಗಳನ್ನು ಉಲ್ಲೇಖಿಸಿ ಅದಕ್ಕೆ ಕೊಟ್ಟಿರುವ ನೆರವು ತಲುಪದಂತೆ ನಿಲ್ಲಿಸುವ ಕ್ರಿಮಿನಲ್ ಕೆಲಸ ಮಾಡಿದೆ, ಈ ಮೂಲಕ ಇರಾನ್ ಮೇಲೆ ಗಂಭೀರ ಮಾನವೀಯ ಬಿಕ್ಕಟ್ಟನ್ನು ಹೇರಿದೆ, ಅನಗತ್ಯವಾಗಿ ಹಲವು ಸಾವುಗಳು ಇದರಿಂದಾಗಿ ಸಂಭವಿಸುವಂತಾಗಿದೆ.

ಈ ರೀತಿಯಲ್ಲಿ ಸ್ವತಂತ್ರ ದೇಶಗಳ ಸಾರ್ವಭೌಮ ಹಕ್ಕುಗಳನ್ನು ಬುಡಮೇಲು ಮಾಡಲು ಅಮೆರಿಕಾ ಸಂಯುಕ್ತ ಸಂಸ್ಥಾನ ಏಕಪಕ್ಷೀಯವಾಗಿ ಬಲವಂತದ ವಿಧಾನಗಳನ್ನು ಬಳಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಅಮೆರಿಕಾದ ಈ ಮೊಂಡುತನ, ಜಾಗತಿಕ ಮಹಾಮಾರಿಯ ಎದುರು ಸೆಣಸುವಲ್ಲಿ ಅಂತರ್ರಾಷ್ಟ್ರೀಯ ಸಹಕಾರ ಬೇಕೆಂದು ವಿಶ್ವ ಆರೋಗ್ಯ ಸಂಘಟನೆ ಮತ್ತೆ-ಮತ್ತೆ ಮಾಡಿಕೊಳ್ಳುತ್ತಿರುವ ಮನವಿಗಳಿಗೆ ವಿರುದ್ಧವಾಗಿದೆ ಎಂದು ಅದು ಹೇಳಿದೆ.

ಮೋದಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯ ಈ ಹೊಲಸು ವರ್ತನೆಯಿಂದ ಪಾಠ ಕಲಿಯಬೇಕು ಎಂದಿರುವ ಪೊಲಿಟ್ ಬ್ಯುರೊ, ಅಮೆರಿಕಾವನ್ನು ಆಲಿಂಗಿಸಿಕೊಳ್ಳಲು ಅತ್ಯುನ್ನತ ಆದ್ಯತೆ ನೀಡುವುದರಿಂದ ಮಹಾಮಾರಿಯ ವಿರುದ್ಧ ಹೋರಾಟವನ್ನು ಗಟ್ಟಿಗೊಳಿಸುವಲ್ಲಿ ಭಾರತೀಯ ಜನತೆಗೆ ಯಾವುದೇ ಸಹಾಯ ಅಥವ ಪರಿಹಾರ ಸಿಗಲಾರದು ಎಂದು ಹೇಳಿದೆ.




ಮಾಲಕರಿಗೆ ಪ್ರಧಾನಿಗಳ ಮನವಿ ಸಾರ್ವಜನಿಕರ ಎದುರಿನ ಪ್ರವಚನವಷ್ಟೇ

ಪುಟ 2 ರಿಂದ

ಹೆಚ್ಚುತ್ತದೆ.

ಇವನ್ನೆಲ್ಲವನ್ನು ನಿರ್ದಿಷ್ಟ ಉದಾಹರಣೆಗಳೊಂದಿಗೆ ಮುಖ್ಯ ಕಾರ್ಮಿಕ ಕಾರ್ಯದರ್ಶಿಗಳಿಗೆ ತಿಳಿಸಲಾಗಿದೆ, ಸುಮಾರು 10 ಪತ್ರಗಳನ್ನು ಸಿಐಟಿಯು ಬರೆದಿದೆ. "ನೀವು ಕೊಡುವ ಸಲಹೆ-ಸೂಚನೆಗಳು, ನಿರ್ದೇಶನಗಳು ಪಾಲಿಸಬೇಕಾದಂತವುಗಳು. ಅವುಗಳನ್ನು ನಿರ್ಲಕ್ಷಿಸಿದರೆ, ಅವು ಕೇವಲ ಪ್ರವಚನಗಳಾಗಿ ಉಳಿಯುತ್ತವೆ" ಎಂದು ಅವರ ಗಮನಕ್ಕೆ ತರಲಾಗಿದೆ, ಪ್ರಧಾನ ಮಂತ್ರಿಗಳಿಗೂ 'ನಿಮ್ಮ ಮನವಿಯನ್ನು ಉಪೇಕ್ಷಿಸಲಾಗಿದೆ, ಅದರಿಂದಾಗಿ ನಿಮ್ಮ ಸಲಹೆ-ಸೂಚನೆ, ಮನವಿಗಳು ಜೇವಲ ಪ್ರವಚನಗಳಾಗಿ ಬಿಟ್ಟಿವೆ' ಎಂದು ಪತ್ರ ಬರೆಯಲಾಗಿದೆ. ರಾಜ್ಯಗಳ ಕಾರ್ಮಿಕ ಇಲಾಖೆಗಳಿಗೂ ಉದಾಹರಣೆ ಸಮೇತ ಪತ್ರಗಳನ್ನು ಬರೆಯಲಾಗಿದೆ. ಅದರೂ ಇದುವರೆಗೂ ಈ ಬಗ್ಗೆ ಯಾರೂ ಗಮನ ಹರಿಸಿಲ್ಲ.



ಇದು ಪ್ರಧಾನ ಮಂತ್ರಿಗಳ ಮನವಿ, ನಿರ್ದೇಶನ ಇತ್ಯಾದಿಗಳೆಲ್ಲವೂ ಕೇವಲ ಸಾರ್ವಜನಿಕರನ್ನು ಮೆಚ್ಚಿಸುವ ಮಾತುಗಳು ಮಾತ್ರ, ವಾಸ್ತವವಾಗಿ ಈ ಸರಕಾರಕ್ಕೆ ಕೋಟ್ಯಂತರ ಕಾರ್ಮಿಕರ ಬವಣೆಗಳು ಲೆಕ್ಕಕ್ಕೇ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದೆ, ಇದು ಅತ್ಯಂತ ಖಂಡನೀಯ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಹೇಳಿದ್ದಾರೆ.

ಸರಕಾರದ ಇಂತಹ ನಿಲುವಿನಿಂದಾಗಿ ಕಾರ್ಮಿಕರಿಗೆ ಕೆಲಸವಿಲ್ಲವಾಗಿದೆ, ಬದುಕು ನಡೆಸಲು ಆದಾಯವಿಲ್ಲದೆ, ಆಹಾರವಿಲ್ಲದೆ, ತಲೆಯ ಮೇಲೇ ಸೂರೂ ಇಲ್ಲದಂತಾಗಿ ಕಂಗಾಲಾಗಿದ್ದಾರೆ. ಹಲವೆಡೆಗಳಲ್ಲಿ ಬೇರೆ ದಾರಿಯಿಲ್ಲದೆ ಅವರು ಪ್ರತಿಭಟನೆಗಳಿಗೂ ಇಳಿದಿದ್ದಾರೆ. ಇದು ಲಾಕ್‌ಡೌನಿನ ಉದ್ದೇಶವನ್ನೇ ಹುಸಿಗೊಳಿಸಿದೆ. ಹೀಗಾಗಲು ದೇಶದ ಸಂಪತ್ತನ್ನು ಸೃಷ್ಟಿಸುವ ಈ ಕೋಟ್ಯಂತರ ಜನಗಳ ಬಗ್ಗೆ ಸರಕಾರದ ಸಂವೇದನಾ ಶೂನ್ಯತೆಯೆ ಹೊಣೆ. ಭಾಷಣಗಳಲ್ಲಿ ಮಾಲಕರಿಗೆ ಮನವಿ , ನಿರ್ದೇಶನಗಳನ್ನು ಕೊಡುವುದು, ಆದರೆ, ವಾಸ್ತವವಾಗಿ ಬುಡಮಟ್ಟದಲ್ಲಿ ಕಾರ್ಮಿಕರನ್ನು ಪ್ರಾಣಿಗಳಂತೆ ಕಾಣುವ ಈ ನಿಲುವು ಅತ್ಯಂತ ಖಂಡನೀಯ ಎಂದ ತಪನ್ ಸೆನ್ ಸಿಐಟಿಯು ,ಮತ್ತು ಇತರ ಕಾರ್ಮಿಕ ಸಂಘಟನೆಗಳು ಇದರ ವಿರುದ್ಧ ಚಳುವಳಿಗೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ದೇಣಿಗೆಯನ್ನು ಸ್ಥಗಿತಗೊಳಿಸುವುದಕ್ಕೆ ಕಾರಣವಾಗಿ ಡಬ್ಲ್ಯೂ.ಎಚ್.ಒ. ಕುರಿತಂತೆ ಟ್ರಂಪ್ ಮಾಡಿರುವ ಆರೋಪಗಳು ಎಂದಿನಂತೆ ಸುಳ್ಳುಗಳ ಸರಮಾಲೆಯಾಗಿದೆ. ಈ ಸಂಸ್ಥೆಯು ನಿಧಾನಗತಿಯ ಪ್ರತಿಕ್ರಿಯೆಯಿಂದಾಗಿ ಸಾವು–ಸೋಂಕಿತರ ಸಂಖ್ಯೆಯಲ್ಲಿ 20 ಪಟ್ಟು ಹೆಚ್ಚಾಗಿದೆ ಎಂಬ ಇವರ ಆರೋಪ ಸಂಪೂರ್ಣ ಸುಳ್ಳು. ಚೀನಾದಲ್ಲಿ ಸೋಂಕು ದೃಢಪಟ್ಟ ಮರುದಿನವೇ, ಜನವರಿ 1 ರಿಂದಲೇ ತಕ್ಷಣ ಸಾಂಕ್ರಾಮಿಕ ರೋಗವನ್ನು ಎದುರಿಸಲು ತುರ್ತು ಆಯೋಗವನ್ನು ಸ್ಥಾಪಿಸಿತು. ಅದೇ ತಿಂಗಳಲ್ಲಿ ಡಬ್ಲ್ಯೂ.ಎಚ್.ಒ. ವಿಶ್ವದಾದ್ಯಂತ ಆರೋಗ್ಯ ತುರ್ತುಸ್ಥಿತಿಯನ್ನು ಘೋಷಿಸಿ, ಮಾರ್ಗಸೂಚಿಗಳನ್ನು ಕಳಿಸಲು ಆರಂಭಿಸಿತು. ಈ ಸಂದರ್ಭದಲ್ಲಿ ಟ್ರಂಪ್ ಆಡಳಿತವು ಈ ಮಾರ್ಗಸೂಚಿಗಳನ್ನು ನಿರ್ಲಕ್ಷ್ಯ ಮಾಡಿತು. ಟ್ರಂಪ್ ಈ ರೀತಿ ನಿರ್ಲಕ್ಷ್ಯ ಮಾಡುವುದು ಮೊದಲೇನಲ್ಲ. ಯುಎಸ್ ಗೆ ಒದಗಿಸಿದ ಹಣದ ಬಗ್ಗೆಯೂ (30ರ ಬದಲು 50 ಕೋಟಿ ಡಾಲರು) ಟ್ರಂಪ್ ಸುಳ್ಳು ಹೇಳಿದ್ದಾರೆ. ಯು.ಎಸ್ ನ ಛೇಂಬರ್ ಆಫ್ ಕಾಮರ್ಸ್ ಮತ್ತು ಎರಡೂ ಪಕ್ಷಗಳ ಶಾಸಕರು, ಹಾಗೆಯೇ, ಜಗತ್ತಿನಾದ್ಯಂತ ಅನೇಕ ರಾಷ್ಟಗಳ ನಾಯಕರು ಟ್ರಂಪ್ ರ ಸುಳ್ಳುಗಳಿಂದ ತುಂಬಿದ್ದ ಹೇಳಿಕೆ ಮತ್ತು ನಿರ್ಣಯವನ್ನು ತೀವ್ರವಾಗಿ ಖಂಡಿಸಿದ್ದಾರೆ. ತಮ್ಮ ಆಡಳಿತದ ವೈಫಲ್ಯಗಳನ್ನು ಬಹಿರಂಗವಾದಾಗಲೆಲ್ಲಾ, ಇತರರನ್ನು ದೂಷಿಸುವ ಇಂತಹ ಹುಚ್ಚು ನಿರ್ಣಯಗಳನ್ನು ತೆಗೆದುಕೊಳ್ಳುವುದು ಟ್ರಂಪ್ ಅವರ ಹಳೆಯ ಚಾಳಿ.

ಟ್ರಂಪ್ ಘೋಷಣೆ, ವ್ಯಾಪಕ ಟೀಕೆ

ಡಬ್ಲ್ಯೂ.ಎಚ್.ಒ ಗೆ ಯು.ಎಸ್ ದೇಣಿಗೆ ಸ್ಥಗಿತ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕೋವಿಡ್–19 ಮಹಾಮಾರಿ ಜಗತ್ತಿನಲ್ಲಿ ತನ್ನ ಅಟಾಟೋಪ ಮುಂದುವರೆಸಿದೆ. ಒಟ್ಟು ಸೋಂಕಿತರ ಸಂಖ್ಯೆ 22 ಲಕ್ಷ ದಾಟಿದೆ. ಒಟ್ಟು ಸಾವುಗಳ ಸಂಖ್ಯೆ 1.5 ಲಕ್ಷ (ಎಪ್ರಿಲ್ 17ರ ರಾತ್ರಿ) ಆಗಿದೆ. ಯು.ಎಸ್ ನಲ್ಲಂತೂ ಉತ್ತುಂಗಕ್ಕೇರಿದೆ. ಪರಿಸ್ಥಿತಿ ಬಿಗಡಾಯಿಸಿ ದಿನದಿಂದ ದಿನಕ್ಕೆ ತೀರ ಹದಗೆಡುತ್ತಿದೆ. ಅಮೆರಿಕಾದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 6.8 ಲಕ್ಷ ದಾಟಿದೆ. ಸಾವಿನ ಸಂಖ್ಯೆಯು 35 ಸಾವಿರ ಮೀರಿದೆ. ಸಾವು–ಸೋಂಕಿನ ಎರಡೂ ಸಂಖ್ಯೆಯಲ್ಲಿ ಯು.ಎಸ್ ಮೊದಲ ಸ್ಥಾನದಲ್ಲಿದೆ. ಒಟ್ಟು ಸೋಂಕಿತರ ಸಂಖ್ಯೆಯಲ್ಲಿ ಮೂರನೇ ಒಂದು ಭಾಗ, ಒಟ್ಟು ಸಾವುಗಳ ಸಂಖ್ಯೆಯಲ್ಲಿ ಆರನೇ ಒಂದು ಭಾಗ. ಇಟಲಿ, ಸ್ಪೈನ್ ದೇಶಗಳನ್ನು ಹಿಂದಕ್ಕೆ ನೂಕಿದೆ. ಈ ಸಾವು–ಸೋಂಕಿನ ನೋವುಗಳು ಇನ್ನೂ ಹೆಚ್ಚಾಗುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ನ್ಯೂಯಾರ್ಕ್ ಒಂದರಲ್ಲಿಯೇ ಈಗಾಗಲೇ 12 ಸಾವಿರಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಹೀಗಾಗಿ ಕೋವಿಡ್–19ರ ಜಾಗತಿಕ "ಹಾಟ್ ಸ್ಪಾಟ್" ನಗರವಾಗಿ ನ್ಯೂಯಾರ್ಕ್ ಪರಿವರ್ತನೆಗೊಂಡಿದೆ. ಮಾತ್ರವಲ್ಲದೇ ಇದರಿಂದ ಅಧ್ಯಕ್ಷ ಟ್ರಂಪ್ ಅಸಹಾಯಕರಾಗಿ ಕೋಪೋದ್ರೇಕಗೊಂಡಿದ್ದಾರೆ. ಬಹುತೇಕ ಇವರ ಆಡಳಿತದ ಸದಸ್ಯರ ಮತ್ತು ಪ್ರಾಂತ್ಯಗಳ ಗವರ್ನರ್ ಗಳ ಮಾತನ್ನು ಆಲಿಸುವ ತಾಳ್ಮೆಯನ್ನು ಕಳೆದುಕೊಂಡಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಗೆ (ಡಬ್ಲ್ಯೂ.ಎಚ್.ಒ) ನೀಡುತ್ತಿದ್ದ ದೇಣಿಗೆಯನ್ನು ಸ್ಥಗಿತಗೊಳಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಡಬ್ಲ್ಯೂ.ಎಚ್.ಒ ಚೀನಾದ ಜೊತೆ ಕೈ ಜೋಡಿಸಿ ತಪ್ಪು ಮಾಹಿತಿಗಳನ್ನು ಒದಗಿಸಿದೆ. ಕೋವಿಡ್–19, "ಹರಡುವಿಕೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ" ಎಂಬ ಆಧಾರಗಳಿಲ್ಲದ ಆಪಾದನೆಗಳನ್ನು ಮಾಡಿದ್ದಾರೆ. ಇದರೊಂದಿಗೆ, ಜಿ–7 ರಾಷ್ಟಗಳು ಡಬ್ಲ್ಯೂ.ಎಚ್.ಒ.ದ ಕೆಲಸ ಕಾರ್ಯಗಳನ್ನು ವಿಮರ್ಶೆಗೆ ಒಳಪಡಿಸಬೇಕೆಂದು ಆಗ್ರಹಿಸಿದ್ದಾರೆ. ಇವರ ಈ ನಿರ್ಣಯ ಹುಚ್ಚು ಮತ್ತು ಹುಂಬತನಗಳ ಪರಾಕಾಷ್ಠೆ ಎಂಬ ಅಭಿಪ್ರಾಯ ವ್ಯಾಪಕವಾಗಿ ಕೇಳಿ ಬರುತ್ತಿದೆ.

ಟ್ರಂಪ್ ರ ಈ ನಿಲುವನ್ನು ಜಗತ್ತಿನಾದ್ಯಂತ ಉಗ್ರವಾಗಿ ಟೀಕಿಸಲಾಗಿದೆ. ಯು.ಎಸ್ ನ ಛೇಂಬರ್ ಆಫ್ ಕಾಮರ್ಸ್ ಮತ್ತು ಎರಡೂ ಪಕ್ಷಗಳ ಶಾಸಕರು, ಹಾಗೆಯೇ, ಜಗತ್ತಿನಾದ್ಯಂತ ಅನೇಕ ರಾಷ್ಟಗಳ ನಾಯಕರು ಟ್ರಂಪ್ ರ ಸುಳ್ಳುಗಳಿಂದ ತುಂಬಿದ್ದ ಹೇಳಿಕೆ ಮತ್ತು ನಿರ್ಣಯವನ್ನು ತೀವ್ರವಾಗಿ ಖಂಡಿಸಿದ್ದಾರೆ.


ಪ್ರಮುಖವಾಗಿ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟನಿಯೊ ಗುಟೆರೆಸ್ ರವರು, ಕೋವಿಡ್–19 ರ ವಿರುದ್ದ ಡಬ್ಲ್ಯೂ.ಎಚ್.ಒ. ಯುದ್ಧೋಪಾದಿಯಲ್ಲಿ ಹೋರಾಡುತ್ತಿದೆ. ಈ ಯುದ್ದವನ್ನು ಗೆಲ್ಲಲು ಜಗತ್ತಿನ ಎಲ್ಲಾ ಸೋಂಕು ಪೀಡಿತ ರಾಷ್ಡಗಳು ಒಂದಾಗಿ ಹೋರಾಡಬೇಕಾದ ಅಗತ್ಯವಿದೆ. ಹೀಗಾಗಿ, ಈ ಸಂಸ್ಥೆ ಯನ್ನು ಎಲ್ಲರೂ ಈಗ ಹೆಚ್ಚು ಬೆಂಬಲಿಸಬೇಕು ಎಂದಿದ್ದಾರೆ. ಜರ್ಮನಿಯ ವಿದೇಶಾಂಗ ಮಂತ್ರಿ ಹೈಕೊ ಮಾಸ್ ರವರು, ಈ ಸಮಯದಲ್ಲಿಬೇರೆಯವರನ್ನು ತೆಗಳುವುದರಿಂದ ಪ್ರಯೋಜನವಿಲ್ಲ. ಡಬ್ಲ್ಯೂ.ಎಚ್.ಒ. ಲಸಿಕೆ ಕಂಡು ಹಿಡಿಯಲು ಎಲ್ಲರೂ ಸಹಕರಿಸಬೇಕು. ಕೋವಿಡ್ ರೋಗವನ್ನು ಓಡಿಸಬೇಕು. ಇದಿಷ್ಟೆ ನಮಗಿರಬೇಕಾದ ಗುರಿ ಎಂದಿದ್ದಾರೆ. ಮೈಕ್ರೋಸಾಫ್ಟ್‌ನ ಸಂಸ್ಥಾಪಕರಾದ ಬಿಲ್ ಗೇಟ್ಸ್ ಪ್ರತಿಕ್ರಿಯಿಸಿ, ಇದು ಅತ್ಯಂತ ಅಪಾಯಕಾರಿ ನಿಲುವಾಗಿದೆ. ಕೋವಿಡ್–19 ಹರಡದಂತೆ ತಡೆಗಟ್ಟಲು ಈ ಸಂಸ್ಥೆ ಹಗಲಿರುಳು ಕಾರ್ಯ ಪ್ರವೃತ್ತರಾಗಿ ದುಡಿಯುತ್ತಿದೆ. ಮೊದಲಿಗಿಂತಲೂ ಈ ಸಂದರ್ಭದಲ್ಲಿ ಡಬ್ಲ್ಯೂ.ಎಚ್.ಒ.ನ ಅವಶ್ಯಕತೆ ಹೆಚ್ಚಾಗಿದೆ. ಹಾಗಾಗಿ, ದೇಣಿಗೆಯನ್ನು ನಿಲ್ಲಿಸುವುದು ಸರಿಯಲ್ಲವೆಂದಿದ್ದಾರೆ.



ಯು.ಎಸ್ ನ ಸಾಂಕ್ರಾಮಿಕ ರೋಗಗಳ ಕೇಂದ್ರ ಸಿ.ಡಿ.ಸಿ ಯ ಡೈರೆಕ್ಟರ್ ಡಾ.ರಾಬರ್ಟ್ ರೆಡ್ ಫೀಲ್ಡ್, ಜಗತ್ತು ಇಂದು ಇಂತಹ ಸಂಧಿಗ್ದ ಸಮಯದಲ್ಲಿ ಬಳಲುತ್ತಿರುವಾಗ,, ಡಬ್ಲ್ಯೂ.ಎಚ್.ಒ. ಅದರ ವಿರುದ್ಧ ಹೋರಾಟದ ನಿರ್ಣಾಯಕ ಭಾಗ ಎಂದಿದ್ದಾರೆ. ಮೆಡಿಕೇರ್ ರಕ್ಷಣಾ ಸಮಿತಿಯ ಕಾರ್ಯಕಾರಿ ನಿರ್ದೇಶಕರಾದ ಡಾ.ರಾಬರ್ಟ್ ಡೇವಿಡ್ಸನ್ ರವರು ಡಬ್ಲ್ಯೂ.ಎಚ್.ಒ. ನ್ನು ಬೆಂಬಲಿಸಿ ಅದನ್ನು ಮುಂದುವರಿಸಬೇಕೇ ವಿನಃ, ಈ ಸಮಯದಲ್ಲಿ, ಅದರ ಕತ್ತು ಹಿಸುಕುವ ಕೆಲಸಕ್ಕೆ ಕೈ ಹಾಕಬಾರದು" ಎಂದು ಒತ್ತಿ ಹೇಳಿದ್ದಾರೆ. ಅವರು ಮತ್ತು ಇತರ ವೈದ್ಯಕೀಯ ನಾಯಕರು ಡಬ್ಲ್ಯೂ.ಎಚ್.ಒ. ವಿಶ್ವದಾದ್ಯಂತ ಅನೇಕ ರಾಷ್ಟ್ರಗಳಲ್ಲಿ ಸಂಪರ್ಕವಿರುವ 'ಏಕೈಕ ಆರೋಗ್ಯ ಸಂರಕ್ಷಣಾ ಸಾಧನ' ಸಂಸ್ಥೆಯಾಗಿದೆ ಎಂದಿದ್ದಾರೆ. ಅದು ನಿಷ್ಕ್ರಿಯವಾದರೆ ಸಾಂಕ್ರಾಮಿಕ ರೋಗಗಳು ಹೆಚ್ಚಾಗಬಹುದು ಮತ್ತು ನಂತರ ಹರಡಲು ಬಹುದು. ಈ ಸಂದರ್ಭದಲ್ಲಿ ಟ್ರಂಪ್ ರ ದೇಣಿಗೆ ಸ್ಥಗಿತತೆಯ ನಿರ್ಧಾರದಿಂದ, ಮತ್ತಷ್ಟು ಹೆಚ್ಚಿನ ಜೀವಗಳಿಗೆ ಅಪಾಯ ಉಂಟಾಗಬಹುದು. ಈ ವೈರಸ್ ನ ಸೋಂಕು ಮುಂದಿನ ದಿನಗಳಲ್ಲಿ, ಅಭಿವೃದ್ಧಿ ಶೀಲ ದೇಶಗಳಲ್ಲಿ ಹೆಚ್ಚು ತೀವ್ರಗತಿಯಲ್ಲಿ ಹರಡಬಹುದಾದ ಲಕ್ಷಣಗಳು ಕಾಣುತ್ತಿವೆ. ಯುಎಸ್ ನಂತಹ ದೇಶಗಳಲ್ಲೂ, ಎರಡನೇ ಅಥವಾ ಮೂರನೆಯ ಅಲೆಗಳ ಸೋಂಕು ತಗುಲುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ ಎಂದಿದ್ದಾರೆ.

ಡಬ್ಲ್ಯೂ.ಎಚ್.ಒ. ಕುರಿತಂತೆ ಟ್ರಂಪ್ ಮಾಡಿರುವ ಆರೋಪಗಳು ಎಂದಿನಂತೆ ಸುಳ್ಳುಗಳ ಸರಮಾಲೆಯಾಗಿದೆ. ಇದು ಟ್ರಂಪ್ ನ ಮಾಮೂಲಿ ಚಾಳಿಯಾಗಿದೆ. ಅದರಲ್ಲೂ, ವಿಶೇಷವಾಗಿ ಈ ಸಂಸ್ಥೆಯು ನಿಧಾನಗತಿಯ ಪ್ರತಿಕ್ರಿಯೆಯಿಂದಾಗಿ ಸಾವು–ಸೋಂಕಿತರ ಸಂಖ್ಯೆಯಲ್ಲಿ 20 ಪಟ್ಟು ಹೆಚ್ಚಾಗಿದೆ ಎಂಬ ಇವರ ಆರೋಪ ಸಂಪೂರ್ಣ ಸುಳ್ಳು. ಡಿಸೆಂಬರ್ 31, 2019 ರಂದು ಚೀನಾದಲ್ಲಿ ಸೋಂಕು ದೃಢಪಟ್ಟ ಮರುದಿನವೇ, ತಕ್ಷಣ ಸಾಂಕ್ರಾಮಿಕ ರೋಗವನ್ನು ಎದುರಿಸಲು ತುರ್ತು ಆಯೋಗವನ್ನು ಸ್ಥಾಪಿಸಿತು. ಇಡೀ ಜನವರಿ ತಿಂಗಳು ಪೂರ್ತಿಯಾಗಿ ಇದು ವಿಶ್ವದಾದ್ಯಂತ ಎಲ್ಲಾ ದೇಶಗಳಿಗೆ ಯುದ್ದೋಪಾದಿಯಲ್ಲಿ ಕ್ರಮಬದ್ದ ಯೋಜನೆಗಳು, ಮಾಹಿತಿ ಬುಲೆಟಿನ್‌ಗಳನ್ನು ಹೊರಡಿಸಿತು ಹಾಗೂ ಅಗತ್ಯವಾದ ಬೃಹತ್ ಪ್ರಮಾಣದಲ್ಲಿ ಪರೀಕ್ಷಾ ಕಿಟ್‌ಗಳನ್ನು ಕಳುಹಿಸಿ ಕೊಟ್ಟಿತು. ಯೋಜನೆಗಳಲ್ಲಿ ಅಗತ್ಯವಾದ ಪರೀಕ್ಷೆ, ಸಂಪರ್ಕ ಪತ್ತೆ ಹಚ್ಚುವಿಕೆ ಮತ್ತು ಪ್ರತ್ಯೇಕತೆ ಸೇರಿದಂತೆ ವಿವರವಾದ ನಿರ್ದಿಷ್ಟ ಕ್ರಮಗಳನ್ನು ಅಭಿವೃದ್ಧಿಪಡಿಸಿತ್ತು. ಜನವರಿ 10 ರಿಂದಲೇ ಎಲ್ಲ ದೇಶಗಳಿಗೆ ವಿವರವಾದ 'ಪ್ರೋಟೋಕಾಲ್'ಗಳನ್ನು ಕಳಿಸಿತು. ಇದನ್ನು ಪಾಲಿಸಿದ ದಕ್ಷಿಣ ಕೋರಿಯಾ ಈ ಮಹಾಮಾರಿಯ ವಿರುದ್ಧದ ಯುದ್ದದಲ್ಲಿ ಉತ್ತಮವಾದ ಪ್ರಗತಿ ಸಾಧಿಸಿದ ಮೊದಲ ದೇಶವಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಅದೇ ತಿಂಗಳಲ್ಲಿ ಡಬ್ಲ್ಯೂ.ಎಚ್.ಒ. ವಿಶ್ವದಾದ್ಯಂತ ಆರೋಗ್ಯ ತುರ್ತುಸ್ಥಿತಿಯನ್ನು ಘೋಷಿಸಿ, ಮಾರ್ಗಸೂಚಿಗಳನ್ನು ಕಳಿಸಲು ಆರಂಭಿಸಿತು. ಈ ಸಂದರ್ಭದಲ್ಲಿ ಟ್ರಂಪ್ ಆಡಳಿತವು ಈ ಮಾರ್ಗಸೂಚಿಗಳನ್ನು ನಿರ್ಲಕ್ಷ್ಯ ಮಾಡಿತು. ಟ್ರಂಪ್ ಈ ರೀತಿ ನಿರ್ಲಕ್ಷ್ಯ ಮಾಡುವುದು ಮೊದಲೇನಲ್ಲ. ಉಲಂಘನೆ ಮಾಡುವುದು, ನಿರ್ಲಕ್ಷ್ಯ ತೋರುವುದು ಈ ದೊಡ್ಡಣ್ಣನ ಆಡಳಿತ ದುರಹಂಕಾರದ ಚಾಳಿ ಎಂಬುದು ಜಗತ್ತಿಗೆ ತಿಳಿದಿರುವ ಸಂಗತಿ. ಟ್ರಂಪ್ ಅಧಿಕಾರ ವಹಿಸಿಕೊಂಡಾಗಿನಿಂದ, ಸಾಂಕ್ರಾಮಿಕ ರೋಗಗಳು ಮತ್ತು ಅದು ಮಹಾಮಾರಿಯಾಗುವ ಸಾಧ್ಯತೆಗಳನ್ನು ಮತ್ತು ಇದನ್ನು ತಡೆಯುವಿಕೆ ಕುರಿತಂತೆ, ಅಧ್ಯಯನ ಅಥವಾ ಸಂಶೋಧನೆ ನಡೆಸುವ ಡಬ್ಲ್ಯೂ.ಎಚ್.ಒ.ನ ವಿಶೇಷ ಕಾರ್ಯಕ್ರಮಗಳಲ್ಲಿ ಯು.ಎಸ್ ತಂಡ ಭಾಗವಹಿಸುವುದಕ್ಕೆ ಟ್ರಂಪ್ ಆಡಳಿತ ಅನುಮತಿ ನಿರಾಕರಿಸಿತ್ತು.



ಯುಎಸ್ ಗೆ ಒದಗಿಸಿದ ಹಣದ ಬಗ್ಗೆಯೂ ಟ್ರಂಪ್ ಸುಳ್ಳು ಹೇಳಿದ್ದಾರೆ. ಸಾಮಾನ್ಯ ವಾರ್ಷಿಕ ಹಣವು ಅಂದಾಜು 30 ಕೋಟಿ ಡಾಲರುಗಳು, ಆದರೆ ಅವರು ಹೇಳಿಕೆ ನೀಡಿರುವುದು 50 ಕೋಟಿ ಡಾಲರುಗಳೆಂದು, ಅದು, ಒಬಾಮಾ ಆಡಳಿತ ಕಾಲದಲ್ಲಿ ಯು.ಎಸ್. ಎಬೋಲಾ ವಿರುದ್ದ ಹೋರಾಟದ ನಾಯಕತ್ವ ವಹಿಸಿದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹೆಚ್ಚಿನ ದೇಣಿಗೆ ನೀಡಿತ್ತು.

ನ್ಯೂಯಾರ್ಕ್ ಟೈಮ್ಸ್ ಮತ್ತು ವಾಷಿಂಗ್ಟನ್ ಪೋಸ್ಟ್ ಪತ್ರಿಕೆಗಳು, ಕೊರೊನಾ ಮಹಾಮಾರಿ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಟ್ರಂಪ್ ನ ಆಡಳಿತದ ವ್ಯವಹಾರದಲ್ಲಿನ ನಿರ್ಲಕ್ಷ್ಯ ಮತ್ತು ವಿಳಂಬದ ಅಸಮರ್ಥತೆಯನ್ನು ದಾಖಲೆಗಳ ಮೂಲಕ ಬಯಲಿಗೆಳೆದ ಮರುದಿನವೇ ಟ್ರಂಪ್ ಡಬ್ಲ್ಯೂ.ಎಚ್.ಒ ಗೆ ನೀಡುತ್ತಿದ್ದ ದೇಣಿಗೆಯನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದ್ದಾರೆ.

ಟ್ರಂಪ್ ಆಡಳಿತ ಕೊರೊನಾ ಮಹಾಮಾರಿಗೆ ಸಕಾಲದಲ್ಲಿ ಪ್ರತಿಕ್ರಿಯಿಸಲು ಏಕೆ ವಿಫಲವಾಯಿತು ಎಂಬುದರ ಬಗ್ಗೆ ಹಲವು ಉತ್ತರಗಳು ಹೊಮ್ಮಿವೆ. ಆಡಳಿತ ಈ ಕುರಿತು ಎಚ್ಚರಿಕೆ ನೀಡಿದರೂ ಟ್ರಂಪ್ ಅದನ್ನು ರಾಜಕೀಯ ಕಾರಣಗಳಿಗಾಗಿ ನಿರ್ಲಕ್ಷಿಸಿದರು ಎಂಬುದು ಒಂದು ಉತ್ತರ. ಸಾಂಕ್ರಾಮಿಕ ರೋಗಗಳು ಮತ್ತು ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಗಳ ಮೇಲುಸ್ತುವಾರಿ ಮಾಡಿ ಸತತ ಅಧ್ಯಯನ ವಿಶ್ಲೇಷಣೆ ನಡೆಸಿ ಅಧ್ಯಕ್ಷರಿಗೆ ಸಲಹೆ–ಎಚ್ಚರಿಕೆ ಕೊಡಬೇಕಾದ ಹಲವು ಉನ್ನತ ಹುದ್ದೆಗಳನ್ನು ಟ್ರಂಪ್ ವಜಾ ಮಾಡಿದ್ದರು ಎಂಬುದು ಇನ್ನೊಂದು ಉತ್ತರ. ಚೀನಾದ ಸಾಂಕ್ರಾಮಿಕ ರೋಗಗಳ ಅಂತಹುದೇ ಅಧ್ಯಯನ ಸಂಸ್ಥೆಯಲ್ಲಿ ಅಮೆರಿಕದ ಪ್ರತಿನಿಧಿ, ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಆರೋಗ್ಯ ಡೈರೆಕ್ಟರ್ ಹುದ್ದೆಗಳನ್ನು ಅವರ ತಂಡದೊಂದಿಗೆ ವಜಾ ಮಾಡಲಾಗಿತು. ಇವಲ್ಲದೆ ಸಾಂಕ್ರಾಮಿಕ ರೋಗಗಳ ಕೇಂದ್ರ ಸಿ.ಡಿ.ಸಿ ಯಲ್ಲಿ ಸುಮಾರು 700 ಸ್ಥಾನಗಳನ್ನು ಭರ್ತಿ ಮಾಡಿರಲಿಲ್ಲ. ಇಂತಹ ಪ್ರಮಾದಗಳೂ ಯು.ಎಸ್ ಕೊರೊನಾ ಮಹಾಮಾರಿ ನಿಭಾಯಿಸುವುದರಲ್ಲಿ ಎಡವಲು ಕಾರಣ ಎನ್ನಲಾಗಿದೆ.

ತಮ್ಮ ಆಡಳಿತದ ವೈಫಲ್ಯಗಳನ್ನು ಬಹಿರಂಗವಾದಾಗಲೆಲ್ಲಾ, ಇತರರನ್ನು ದೂಷಿಸುವ ಇಂತಹ ಹುಚ್ಚು ನಿರ್ಣಯಗಳನ್ನು ತೆಗೆದುಕೊಳ್ಳುವುದು ಟ್ರಂಪ್ ಅವರ ಹಳೆಯ ಚಾಳಿ. ಈಗಲೂ ಅದೇ ನಡೆದಿದೆ. ಟ್ರಂಪ್ ಗೆ ಹೊರಗಿನ ಡಬ್ಲ್ಯೂ.ಎಚ್.ಒ ಒಳ್ಳೆಯ ಬಲಿಪಶುವಾಗಿದೆ.

JANASHAKTHI KANNADA VARA PATRIKE April 20-26, 2020 Price: Rs. 10/- Date of Publication: 17 April 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಹಗರಿಬೊಮ್ಮನಹಳ್ಳಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರವರ 129ನೇ ಜನ್ಮ ದಿನಾಚರಣೆ

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಸಿಪಿಎಂ ಪಕ್ಷದ ಮತ್ತು ಹಲವು ಸಾಮೂಹಿಕ ಸಂಘಟನೆ ಮುಖಂಡರ ನೇತೃತ್ವದಲ್ಲಿ 14 ಏಪ್ರಿಲ್ 2020ರಂದು ಸರಳವಾಗಿ ಡಾ. ಬಿ.ಆರ್. ಅಂಬೇಡ್ಕರ್ ರವರ 129ನೇ ಜನ್ಮ ದಿನಾಚರಣೆಯನ್ನು ದೇವದಾಸಿ ಮಹಿಳ ವಿಮೋಚನಾ ಸಂಘದ ಕಚೇರಿ ಮುಂದೆ ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಸಿಪಿಎಂ ಪಕ್ಷದ ತಾ. ಕಾರ್ಯದರ್ಶಿ ಕಾಂ. ಜಗನ್ನಾಥ ಅವರು ನಿರೂಪಿಸಿದರು. ಹೆಗ್ಡಾಳು ರಾಮಣ್ಣ ಅವರು ಮಾತನಾಡಿ, ಈ ದೇಶದಲ್ಲಿ ಇನ್ನು ಸಾಮಾಜಿಕ ಪರಿಸ್ಥಿತಿ ಬದಲಾಗಿಲ್ಲ, ಅಸಮಾನತೆ ತೊಲಗಿಲ್ಲ, ಅಕ್ಷರಸ್ಥರು ಹೆಚ್ಚಿದ್ದರು ಸಮಾಜ ಬದಲಾಗದೆ ಜಾತಿ ವ್ಯವಸ್ಥೆ ಹೆಚ್ಚುತ್ತಿದೆ ಇದು ಅಂಬೇಡ್ಕರ್ ಆಶಯಕ್ಕೆ ವಿರೋಧವಾಗಿದೆ ಎಂದರು.

ನಂತರ ಹ.ಬೊ.ಹಳ್ಳಿಯ ಸತ್ಯನಾರಾಯಣ ಮಾತನಾಡಿದರು. ಡಾ. ಬಿ.ಆರ್. ಅಂಬೇಡ್ಕರ್ ಅವರು ನಮಗೆ ಆದರ್ಶವಾಗಿದ್ದಾರೆ ಅವರ ತತ್ವವನ್ನು ಪಾಲಿಸಬೇಕು ಎಂದರು.

ಆರ್.ಎಸ್. ಬಸವರಾಜ, ಮಾಳಮ್ಮ, ಮಹೇಶ್ವರ, ಬಸವರಾಜ ಗುಳೇದಾಳು, ಬಸವರಾಜ. ಹ.ಬೊ.ಹಳ್ಳಿ, ಕೋಟೇಶ್ ಭಾಗವಹಿಸಿದ್ದರು.



ಡಾ: ಬಿ.ಆರ್. ಅಂಬೇಡ್ಕರ್ ರವರ 129 ನೇ ಜನ್ಮ ದಿನವನ್ನು ಸಂವಿಧಾನ ಪೀಠಿಕೆ ಓದುವುದರ ಮೂಲಕ ಆಚರಣೆ

ಗಂಗಾವತಿ ನಗರದ ಸಿಪಿಐ(ಎಂ) ಪಕ್ಷದ ಕಛೇರಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ: ಬಿ.ಆರ್. ಅಂಬೇಡ್ಕರ್ 129 ನೇ ಜಯಂತಿಯನ್ನು ಸಂವಿಧಾನದ ಪೀಠಿಕೆ ಓದುವುದರ ಮೂಲಕ ಸರಳವಾಗಿ ಅವರ ಜನ್ಮದಿನ ಆಚರಣೆ ಮಾಡಲಾಯಿತು ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ನಿತ್ಯಾನಂದ ಸ್ವಾಮಿ ಅವರು ಇಂದು ಸಂವಿಧಾನದ ಪೀಠಿಕೆಗೆ ಅಪಾಯ ತರವಂತ ತಿದ್ದುಪಡಿಯನ್ನು ಸರಕಾರ ಮಾಡಲು ಹೋರುಟಿತ್ತು ಸಮಾಜದಲ್ಲಿ ಕಾರ್ಮಿಕ ವರ್ಗ, ಮಹಿಳೆಯರಿಗೆ, ರಾಜಕೀಯ ನಾಯಕರಿಗೆ ಸರ್ವಜನಾಂಗಕ್ಕೂ ಅವಕಾಶ ಕಲ್ಪಿಸಿ ಕೊಟ್ಟಿರುವುದು ಈ ಸಂವಿಧಾನದಿಂದ ಅಂತ ಸಂವಿಧಾನಕ್ಕೆ ಅಪಾಯ ಅದುರು ಆದರೆ ಹೋರಾಟಕ್ಕೆ ಸಿದ್ದರಾಗೋಣ ಎಂದರು, ಕಾರ್ಯಕ್ರಮದಲ್ಲಿ, ಸಿಐಟಿಯು ಜಿಲ್ಲಾ ಅಧ್ಯಕ್ಷ ನಿರುಪಾದಿ ಬೆಣಕಲ್, ಎಸ್ಎಫ್ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ, ಸಿಐಟಿಯು ತಾಲೂಕ ಕಾರ್ಯದರ್ಶಿ ಮಂಜುನಾಥ ಡಗ್ಗಿ, ಎಸ್ಎಫ್ಐ ಮುಂಖಡರುಗಳಾದ ಉಮೇಶ ಜೇಕಿನ್, ನಾಗರಾಜ ಉತ್ತನೂರ, ಪ್ರಸನ್ನ ಕುನಾರ, ಹನುಮೇಶ ಮುಕ್ಕುಂಪಿ ಇದ್ದರು.



ಸಂಕಷ್ಟಕ್ಕೆ ನೆರವಾಗೋಣ ಸಂವಿಧಾನದ ಆಶಯ ಎತ್ತಿಹಿಡಿಯೋಣ ಸಿಐಟಿಯು ಬೆಂಗಳೂರು ಅಭಿಯಾನ

ಅಂಬೇಡ್ಕರ್ ಜಯಂತಿ ಅಂಗವಾಗಿ 14 ಏಪ್ರಿಲ್ 2020 ರಂದು ಕೋವಿಡ್ 19 ಲಾಕ್ಡೌನ್ ಹಿನ್ನೆಲೆಯಲ್ಲಿ ಕಾರ್ಮಿಕರಿಗೆ ಪರಿಹಾರ ಆಹಾರ ಒದಗಿಸುವ ಜೊತೆಯಲ್ಲಿ ಸಂವಿಧಾನದ ಪೀಠಿಕೆ ಸ್ಟಿಕ್ಕರ್ ವಿತರಣೆ ಹಾಗು ಮನೆ, ಕಚೇರಿ ಬಾಗಿಲಿಗೆ ಅಂಟಿಸುವ ಸಿಐಟಿಯು ಬೆಂಗಳೂರು ಪ್ರಚಾರ ಅಭಿಯಾನವನ್ನು ರಾಜ್ಯ ಅಧ್ಯಕ್ಷರಾದ ಕಾಂ. ಎಸ್. ವರಲಕ್ಷ್ಮಿ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಮೀನಾಕ್ಷಿ ಸುಂದರಂ ಜ್ಯೋತಿ ಬಸು ಭವನದ ಬಾಗಿಲುಗಳಿಗೆ ಅಂಟಿಸುವ ಮೂಲಕ ಉದ್ಘಾಟಿಸಿದರು.

ನಂತರ ಸೂರಿ ಭವನದ ಬಾಗಿಲಿಗೆ ರಾಜ್ಯ ಕಾರ್ಯದರ್ಶಿ ಕಾಂ. ಕೆ. ಮಹಾಂತೇಶ್, ಕ್ರಿಯಾ ಕಚೇರಿ ಬಾಗಿಲಿಗೆ ರಾಜ್ಯ ಕಾರ್ಯದರ್ಶಿ ಕಾಂ. ಕೆ.ಎನ್. ಉಮೇಶ್ ಅಂಟಿಸಿದರು. ಕ್ರಿಯಾ ಚಂದ್ರು ಮತ್ತು ರಾಮು ಹಾಜರಿದ್ದರು.

ಸಿಐಟಿಯು ಬೆಂಗಳೂರು ಅಭಿಯಾನವು ಏಪ್ರಿಲ್ 14 ರಿಂದ ಲಾಕ್ಡೌನ್ ಕಾಲಾವಧಿಯಲ್ಲಿ ಪೂರ್ಣ ನಡೆಯಲಿದೆ.

ಸಂಕಷ್ಟಕ್ಕೆ ಸಿಲುಕಿರುವ ಜನತೆಗೆ
ಪರಿಹಾರಕ್ಕೆ ಆಗ್ರಹಿಸೋಣ
ಸಂಕಷ್ಟದ ಕೋಮುವಾದಿಕರಣ,
ಅಂಧ ಶ್ರದ್ಧೆ, ಮೌಢ್ಯತೆ ನಿರಾಕರಿಸೋಣ
ದೈಹಿಕ ಅಂತರ ಕಾಪಾಡೋಣ
ಸಾಮಾಜಿಕ ಸೌಹಾರ್ದತೆ ಸಂರಕ್ಷಿಸೋಣ

ದೈಹಿಕ ಅಂತರ ಸಾಮಾಜಿಕ ಐಕ್ಯತೆ.
ಮನೆಯಲ್ಲರಿ ಸುರಕ್ಷಿತವಾಗಿರಿ
ಕೋವಿಡ್ 19 ಹಿಮ್ಮೆಟ್ಟಿಸಿರಿ.





ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

‘ಜನಶಕ್ತಿ ಮೀಡಿಯಾ’ ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 34 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಅಂಬೇಡ್ಕರ್ ನೆನಪು ವಿಶೇಷಾಂಕ – 13 ವಿಡಿಯೊಗಳ ಗುಚ್ಛ (ಎ.14)
* ಲಾಕ್‌ಡೌನ್‌ಎಫೆಕ್ಟ್ : ಅತಂತ್ರದಲ್ಲಿ ಬಿಸಿಯೂಟ ನೌಕರರು (ಎ.17)
* ಸರಕಾರಗಳು ಜನರ ನೆರವಿಗೆ ಬರಬೇಕು :ಯು ಬಸವರಾಜ್ (ಎ.16)
* ಕೊರೊನಾ ಎದುರಿಸಲು ಸರಕಾರ ಅನುಸರಿಸುವ ಸೂತ್ರಗಳೇನು? (ಎ.15)
* ಅನ್ನದಾತ ಕಂಗಾಲು : ತಿಪ್ಪೆ ಸೇರುತ್ತಿವೆ ಬೆಳೆಗಳು (ಎ.13)
* ಕೃಷಿಯ ಮೇಲೆ ಕೊರೊನಾ ಪರಿಣಾಮ (ಎ.12)
* ಹೋಸಪೇಟೆಯಲ್ಲಿ ಲಾಕ್‌ಡೌನ್ ಲಾಕಪ್‌ಡೆತ್ (ಎ.11)
* ಕೊರೊನಾ ಸಂಕಷ್ಟದಲ್ಲಿ ಎಸ್ಸೆಸೆಲ್ಸಿ ಪರೀಕ್ಷೆಗಳು (ಎ.11)

ಯೂಟ್ಯೂಬ್ ನಲ್ಲಿ ‘Janashakthi Media’ ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ ‘Subscribe’ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ ‘ಬೆಲ್ ಐ ಕಾನ್ ಬಟನ್’ ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**